# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಾಲೀಮು**
ಪಂಜಾಬ್‌ನ ಜಲಂಧರ್‌ನಲ್ಲಿ ಶನಿವಾರ ನಡೆದ ಗಣರಾಜ್ಯೋತ್ಸವ ಪರೇಡ್‌ನ ತಾಲೀಮಿನಲ್ಲಿ ಪಾಲ್ಗೊಂಡಿದ್ದ ಎನ್‌ಸಿಸಿ ಕೆಡೆಟ್



ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕಾಯಕ ಪದದ ಮೂರ್ತರೂಪವಾಗಿರುವ ಕಲಬುರಗಿಯ ತಾಂಡಾಗಳಲ್ಲಿ ಒಂದು ಸುತ್ತು...



ಜಮ್ಮುವಿನಲ್ಲಿ ಅವಳಿ ಬಾಂಬ್ ಸ್ಫೋಟ: 9 ಜನರಿಗೆ ಗಾಯ 7
‘ಭ್ರಷ್ಟಾಚಾರ, ಸುಳ್ಳು ಭರವಸೆಗಳ ಪಕ್ಷ’ ಎಂದು ಟೀಕಿಸಿದ ಕಾಂಗ್ರೆಸ್
ಸೀಟ್‌ಬೆಲ್ಟ್ ತೆಗೆದ ಪ್ರಕರಣ: ಬ್ರಿಟನ್ ಪ್ರಧಾನಿ ರಿಷಿಗೆ ದಂಡ 6
ಬಿಜೆಪಿ ವಿರುದ್ಧ ಆರೋಪ ಪಟ್ಟಿ 7

### ಮಲೆನಾಡು, ಕರಾವಳಿ ಪ್ರದೇಶದ 800 ಸ್ಥಳಗಳಲ್ಲಿ ಭೂಕುಸಿತದ ಸಾಧ್ಯತೆ

# ಬಾಯ್ತೆರೆಯಲು ಕಾದಿದೆ ಸಹ್ಯಾದ್ರಿ

• ಎಸ್.ರವಿಪ್ರಕಾಶ್

**ಬೆಂಗಳೂರು:** ಹಿಮಾಲಯದ ಜೋಶಿಮಠದ ತಲ್ಲಣ ದೇಶದ ಗಮನಸೆಳೆದಿದೆ. ಪುಟ್ಟ ಪಟ್ಟಣ ಕುಸಿತದಿಂದ ನಲುಗಿದೆ. ಮನೆ, ಕಟ್ಟಡಗಳು ಬಿರುಕು ಬಿಟ್ಟಿವೆ. ಸಂತ್ರಸ್ತರನ್ನು ಸ್ಥಳಾಂತರ ಮಾಡಲಾಗಿದೆ. ದಕ್ಷಿಣ ಭಾರತದಲ್ಲಿ ಸಹ್ಯಾದ್ರಿಯೂ ಇತ್ತೀಚಿನ ವರ್ಷಗಳಲ್ಲಿ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಲೇ ಇದೆ.

ಹಿಮಾಲಯವಿರಲಿ, ಹಚ್ಚ ಹಸಿರಿನ ಸಹ್ಯಾದ್ರಿಯೇ ಆಗಲಿ, ಮಳೆ–ಪ್ರವಾಹದಿಂದ ಅಲ್ಲಿನ ಮನೆಗಳು ಕುಸಿಯುತ್ತಿರುವ ದೃಶ್ಯಗಳನ್ನು ಟಿ.ವಿ.ಗಳಲ್ಲೋ, ಯೂಟ್ಯೂಬ್‌ನಲ್ಲೊ ನೋಡಿ ‘ಛೇ...!’ ಎಂದು ಸಹಾನುಭೂತಿ ತೋರಿಸುತ್ತೇವೆ ಅಷ್ಟೆ. ಆದರೆ ನಿಂತ ನೆಲ ಕುಸಿಯುತ್ತಿರುವುದರ ಅರಿವಿಲ್ಲ. ಸಹ್ಯಾದ್ರಿ ಎಂದು ಕರೆಸಿಕೊಳ್ಳುವ ಸಸ್ಯಶ್ಯಾಮಲೆಯ ಮಲೆಯ ಬೀಡು ಮೂರು ವರ್ಷಗಳಿಂದ ಅಲ್ಲಲ್ಲಿ ಕುಸಿಯುತ್ತಲೇ ಅಪಾಯದ ಮುನ್ಸೂಚನೆಯನ್ನು ನೀಡುತ್ತಲೇ ಇದೆ.

ಈ ವಿದ್ಯಮಾನ ಪಶ್ಚಿಮಘಟ್ಟದ ವಾಸಿಗಳ ಬೆನ್ನುಹುರಿಯಲ್ಲಿ ಛಳುಕು ಮೂಡಿಸಿದೆಯೇ? ಪ್ರಾಯಶಃ ಇಲ್ಲ. ಆದರೆ ಪಶ್ಚಿಮಘಟ್ಟದ ಸಾಕಷ್ಟು ಪಟ್ಟಣಗಳು ಅಭಿವೃದ್ಧಿಯ ‘ಭಾರ’ವನ್ನು ತಾಳಲಾರದ ಸ್ಥಿತಿಗೆ ತಲುಪಿವೆ.

‘ಸಹ್ಯಾದ್ರಿ’ ಹೆಸರಿನಿಂದ ಕರೆಸಿಕೊಳ್ಳುವ ಪಶ್ಚಿಮಘಟ್ಟ ಪರ್ವತ ಶ್ರೇಣಿ ಅತ್ಯಂತ ಪ್ರಾಚೀನ. ಜಗತ್ತಿನ ಜೀವ ವೈವಿಧ್ಯತೆಯ ಅಪೂರ್ವ ಭಂಡಾರ ಇಲ್ಲಿದೆ. ಆದರೆ, ಮನುಷ್ಯನ ಭೋಗಾಪೇಕ್ಷೆಯ ವಿಸ್ತರಣಾವಾದದ ಕಾರಣ ಕಾಡುಗಳು, ಜೀವ ವೈವಿಧ್ಯಗಳು ನಾಶವಾಗುತ್ತಿವೆ. ಬೃಹತ್ ಯೋಜನೆಗಳ ಭಾರದಿಂದ ನಲುಗುತ್ತಿದೆ. ಗಣಿಗಾರಿಕೆಯಿಂದ ಆಳವಾದ ಗಾಯಗಳಾಗುತ್ತಿವೆ. ಇದರ ಪರಿಣಾಮ ಸಹ್ಯಾದ್ರಿ ಶ್ರೇಣಿಯ ಜೀವವೈವಿಧ್ಯ ಭಾರಿ ಒತ್ತಡಕ್ಕೆ ಸಿಲುಕಿದೆ.

2009 ರಲ್ಲಿ ಕಾರವಾರ ಸಮೀಪದ ಶಿರವಾಡದಲ್ಲಿ ಭಾರಿ ಭೂಕುಸಿತ ಸಂಭವಿಸಿತು. ಅದು ಪಶ್ಚಿಮಘಟ್ಟ ಕಂಡ ಶತಮಾನದ ಮೊದಲ ಭೂಕುಸಿತ. ಮೊದಲ ಭೂಕುಸಿತವೇ ಎಚ್ಚರಿಕೆಯ ಗಂಟೆಯಂತಿತ್ತು. ಇದಾದ ಒಂದು ದಶಕದ ಬಳಿಕ ಅಂದರೆ 2018ರ ನಂತರ ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭೂಕುಸಿತ ಸಂಭವಿಸುತ್ತಲೇ ಇದೆ. ಮಳೆಗಾಲ ಬಂದಾಗ ಯಾವಾಗ ಭೂಕುಸಿತವಾಗಿ ಅನಾಹುತವಾಗುತ್ತದೆಯೇ ಎಂಬ ಭಯದಲ್ಲೇ ದಿನ ದೂಡಬೇಕಾಗುತ್ತಿದೆ. ಕೆಲವು ಮನೆಗಳು, ಹಳ್ಳಿಗಳು, ತೋಟಗಳು ಭೂಕುಸಿತದಿಂದ ಕಣ್ಮರೆಯಾಗಿವೆ.

ಪಶ್ಚಿಮಘಟ್ಟದಲ್ಲಿ ಭೂಕುಸಿತದ ಸರಣಿ ಶುರುವಾದ ಮೇಲೆ ಅಧ್ಯಯನಕ್ಕಾಗಿ 2019 ರಲ್ಲಿ ಸರ್ಕಾರ ಸಮಿತಿಯೊಂದನ್ನು ರಚಿಸಿತು. ಪಶ್ಚಿಮಘಟ್ಟ ಮತ್ತು ಕರಾವಳಿ ಪ್ರದೇಶದಲ್ಲಿ ಎಲ್ಲೆಲ್ಲಿ ಭವಿಷ್ಯದಲ್ಲಿ ಭೂಕುಸಿತ ಆಗಬಹುದು ಎಂಬುದರ ಬಗ್ಗೆ ವಿವರವಾದ ಅಧ್ಯಯನ ನಡೆಸಿ, ಅಂತಿಮ ವರದಿಯನ್ನೂ ಸರ್ಕಾರಕ್ಕೆ ಸಲ್ಲಿಸಿದೆ. ಅಂತಿಮ ವರದಿಯು ಪಶ್ಚಿಮ ಘಟ್ಟದ ಏಳು ಜಿಲ್ಲೆಗಳ 23 ತಾಲ್ಲೂಕುಗಳಲ್ಲಿ ಭವಿಷ್ಯದಲ್ಲಿ ಭೂಕುಸಿತ ಸಾಧ್ಯತೆಗಳನ್ನು ಪಟ್ಟಿ ಮಾಡಿದೆ. ಅಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ವಿವರ ನೀಡಿದೆ.

4ನೇ ಪುಟ ನೋಡಿ




ಮಡಿಕೇರಿ ಹೊರವಲಯದ ಉದಯಗಿರಿಯಲ್ಲಿ 2018ರ ಆಗಸ್ಟ್‌ನಲ್ಲಿ ಸಂಭವಿಸಿದ್ದ ಭೂಕುಸಿತ

**ಒಳನೋಟ**
ಎಚ್ಚರಿಕೆಯ ಗಂಟೆ
ಪ್ರತಿಕ್ರಿಯಿಸಿ: 9606038256
feedback@prajavani.co.in

## 100 ವರ್ಷಗಳಲ್ಲಿ ಕಾಡು ನಾಶ

ಕಳೆದ ಒಂಬತ್ತು ದಶಕಗಳಲ್ಲಿ (1920 ರಿಂದ 2013) ಪಶ್ಚಿಮಘಟ್ಟದಲ್ಲಿ 33,579 ಚ.ಕಿ.ಮೀ ಅಂದರೆ ಶೇ 35.3 ರಷ್ಟು ಅರಣ್ಯ ನಾಶವಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್ ನಡೆಸಿರುವ ಅಧ್ಯಯನ ಅಂದಾಜು ಮಾಡಿದೆ. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ,ಗೋವಾ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಪಶ್ಚಿಮಘಟ್ಟ ಹಾದು ಹೋಗಿದ್ದು, ಅರಣ್ಯ ವ್ಯಾಪ್ತಿ ಎಷ್ಟು ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂಬ ಮಾಹಿತಿ ಹೀಗಿದೆ–

| ವರ್ಷ | ಅರಣ್ಯ ಪ್ರಮಾಣ (ಹೆಕ್ಟೇರ್‌ಗಳಲ್ಲಿ) | ಶೇಕಡಾ |
|---|---|---|
| 1920 | 95,446 | 73.1 |
| 1975 | 63,123 | 48.4 |
| 1985 | 62,286 | 47.7 |
| 1995 | 61,551 | 47.2 |
| 2005 | 61,511 | 47.1 |
| 2013 | 61,511 | 47.1 |




# ಬಿಬಿಸಿ ಸಾಕ್ಷ್ಯಚಿತ್ರ: ಯೂಟ್ಯೂಬ್ ವಿಡಿಯೊ, ಟ್ವಿಟರ್ ಪೋಸ್ಟ್‌ಗೆ ತಡೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಬಿಸಿ ನಿರ್ಮಿಸಿರುವ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಹೆಸರಿನ ಸಾಕ್ಷ್ಯಚಿತ್ರವನ್ನು ‘ಅಪಪ್ರಚಾರದ ತುಣುಕು’ ಎಂದು ಕರೆದಿರುವ ಕೇಂದ್ರ ಸರ್ಕಾರವು ಇದರ ಯೂಟ್ಯೂಬ್ ವಿಡಿಯೊ ಹಾಗೂ ಲಿಂಕ್‌ಗಳನ್ನು ಹಂಚಿಕೊಂಡ ಟ್ವಿಟರ್ ಪೋಸ್ಟ್‌ಗಳನ್ನು ತಡೆ ಹಿಡಿಯುವಂತೆ ನಿರ್ದೇಶನ ನೀಡಿದೆ ಎಂದು ಮೂಲಗಳು ಶನಿವಾರ ಹೇಳಿವೆ.

‘ಈ ಸಾಕ್ಷ್ಯಚಿತ್ರವು ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ದುರ್ಬಲಗೊಳಿಸುತ್ತದೆ. ಸುಪ್ರೀಂ ಕೋರ್ಟ್‌ನ ವಿಶ್ವಾಸಾರ್ಹತೆಗೂ ಧಕ್ಕೆ ಉಂಟುಮಾಡಲಿದೆ’ ಎಂದೂ ತಿಳಿಸಿದೆ.

‘ವಿದೇಶಾಂಗ ವ್ಯವಹಾರ, ಗೃಹ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯಗಳ ಉನ್ನತ ಅಧಿಕಾರಿಗಳು ಸಾಕ್ಷ್ಯಚಿತ್ರವನ್ನು ವೀಕ್ಷಿಸಿದ್ದಾರೆ. ಇದು ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ದುರ್ಬಲಗೊಳಿಸಲಿದೆ ಎಂಬುದು ಅವರಿಗೆ ಮನದಟ್ಟಾಗಿದೆ. ಹೀಗಾಗಿ, ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಅಪೂರ್ವ ಚಂದ್ರ ಅವರು ಯೂಟ್ಯೂಬ್ ವಿಡಿಯೊ ಹಾಗೂ ಟ್ವಿಟರ್ ಪೋಸ್ಟ್‌ಗಳನ್ನು ತಡೆಹಿಡಿಯುವಂತೆ ಸಾಮಾಜಿಕ ಜಾಲತಾಣಗಳಿಗೆ ಸೂಚಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

6ನೇ ಪುಟ ನೋಡಿ

### ನಿವೃತ್ತ ನ್ಯಾಯಮೂರ್ತಿಗಳ ಟೀಕೆ

13 ಮಂದಿ ನಿವೃತ್ತ ನ್ಯಾಯಮೂರ್ತಿಗಳು, 133 ಮಂದಿ ನಿವೃತ್ತ ಅಧಿಕಾರಿಗಳು ಮತ್ತು ರಾಜತಾಂತ್ರಿಕರು ಹಾಗೂ 156 ಮಾಜಿ ಸೈನಿಕರು ಬಿಬಿಸಿ ಸಾಕ್ಷ್ಯಚಿತ್ರವನ್ನು ಟೀಕಿಸಿದ್ದು, ಈ ಸಂಬಂಧ ಶನಿವಾರ ಜಂಟಿ ಪ್ರಕಟಣೆ ಹೊರಡಿಸಿದ್ದಾರೆ.

‘ಗೋಧ್ರೋತ್ತರ ಹತ್ಯಾಕಾಂಡದಲ್ಲಿ ಮೋದಿ ಪಾತ್ರವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತ್ತು. ಮೋದಿ ನೇತೃತ್ವದ ಗುಜರಾತ್ ಸರ್ಕಾರದ ವಿರುದ್ಧ ನಿಷ್ಕ್ರಿಯತೆಯ ಆರೋಪವೂ ಕೇಳಿಬಂದಿತ್ತು. ಅದನ್ನೂ ನ್ಯಾಯಾಲಯ ತಳ್ಳಿಹಾಕಿತ್ತು. ಆದರೆ ಈ ವಿಚಾರಗಳನ್ನು ಸಾಕ್ಷ್ಯಚಿತ್ರದಲ್ಲಿ ಉಲ್ಲೇಖಿಸಲಾಗಿಲ್ಲ’ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

‘ಪೌರತ್ವ ತಿದ್ದುಪಡಿ ಕಾಯ್ದೆಯಿಂದ (ಸಿಎಎ) ಮುಸ್ಲಿಮರಿಗೆ ಅನ್ಯಾಯವಾಗಿದೆ ಎಂದು ಸಾಕ್ಷ್ಯಚಿತ್ರದಲ್ಲಿ ಹೇಳಲಾಗಿದೆ. ಈ ಸಾಕ್ಷ್ಯಚಿತ್ರ ಹಿಂದಿನ ಬ್ರಿಟಿಷ್ ಸಾಮ್ರಾಜ್ಯಶಾಹಿ ಮನಸ್ಥಿತಿಯಲ್ಲಿಯೇ ಇದೆ’ ಎಂದೂ ತಿಳಿಸಲಾಗಿದೆ.

# ಧರಣಿ ಕೈಬಿಟ್ಟ ಕುಸ್ತಿಪಟುಗಳು

**ನವದೆಹಲಿ (ಪಿಟಿಐ):** ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷರ ತಾತ್ಕಾಲಿಕ ಪದಚ್ಯುತಿ, ಅವರ ಮೇಲಿನ ಆರೋಪಗಳ ತನಿಖೆಗೆ ಸಮಿತಿ ನೇಮಕ ಮಾಡಲಾಗುವುದು ಎಂದು ಕೇಂದ್ರ ಸರ್ಕಾರವು ಭರವಸೆ ನೀಡಿದ್ದರಿಂದ ಕುಸ್ತಿಪಟುಗಳು ಧರಣಿ ಕೈಬಿಟ್ಟಿದ್ದಾರೆ.



ಬ್ರಿಜ್‌ಭೂಷಣ್

ವಿನೇಶಾ ಪೋಗಟ್, ರವಿ ದಹಿಯಾ ಮತ್ತು ಬಜರಂಗ್ ಪೂನಿಯಾ ಅವರನ್ನೊಳಗೊಂಡ ಕುಸ್ತಿಪಟುಗಳು, ಕೇಂದ್ರ ಕ್ರೀಡಾಸಚಿವ ಅನುರಾಗ್ ಠಾಕೂರ್ ಜತೆಗಿನ ಸುದೀರ್ಘ ಮಾತುಕತೆಯ ಬಳಿಕ ಧರಣಿ ಕೈಬಿಡುವ ತೀರ್ಮಾನ ಪ್ರಕಟಿಸಿದರು.

‘ಆರೋಪಗಳ ತನಿಖೆಗೆ ಮೇಲುಸ್ತುವಾರಿ ಸಮಿತಿ ರಚಿಸಲಾಗುವುದು. ಸಮಿತಿಯು ಆರು ವಾರಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಲಿದೆ. ಅದುವರೆಗೂ ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅಧಿಕಾರದಿಂದ ದೂರವುಳಿದು, ತನಿಖೆಗೆ ಸಹಕರಿಸಲಿದ್ದಾರೆ. ಡಬ್ಲ್ಯುಎಫ್‌ಐನ ದೈನಂದಿನ ಆಡಳಿತವನ್ನು ಮೇಲುಸ್ತುವಾರಿ ಸಮಿತಿ ನೋಡಿಕೊಳ್ಳಲಿದೆ’ ಎಂದು ಶುಕ್ರವಾರ ತಡರಾತ್ರಿ ಕೊನೆಗೊಂಡ ಸಭೆಯ ಬಳಿಕ ಠಾಕೂರ್ ತಿಳಿಸಿದರು.

‘ಮೂವರು ಸದಸ್ಯರ ಸಮಿತಿ ರಚನೆ ಸಂಬಂಧ ಠಾಕೂರ್, ಕ್ರೀಡಾ ಸಚಿವಾಲಯದ ಕಾರ್ಯದರ್ಶಿ ಸುಜಾತಾ ಚತುರ್ವೇದಿ ಮತ್ತು ಸಾಯ್ ನಿರ್ದೇಶಕ ಸಂದೀಪ್ ಪ್ರಧಾನ್ ಅವರು ಶನಿವಾರ ಸಭೆ ನಡೆಸಿದ್ದಾರೆ. ಸಮಿತಿಯ ಸದಸ್ಯರ ಹೆಸರನ್ನು ಭಾನುವಾರ ಪ್ರಕಟಿಸಲಾಗುವುದು’ ಎಂದು ಮೂಲಗಳು ಹೇಳಿವೆ.

**ಆರೋಪ ಅಲ್ಲಗಳೆದ ಡಬ್ಲ್ಯುಎಫ್‌ಐ:** ಅಧ್ಯಕ್ಷರ ವಿರುದ್ಧ ಕುಸ್ತಿಪಟುಗಳು ಮಾಡಿರುವ ಎಲ್ಲ ಆರೋಪಗಳನ್ನು ಡಬ್ಲ್ಯುಎಫ್‌ಐ ತಳ್ಳಿಹಾಕಿದೆ.

‘ಈ ಪ್ರತಿಭಟನೆಯು ಹಾಲಿ ಆಡಳಿತವನ್ನು ವಜಾಗೊಳಿಸಲು ನಡೆಸಿರುವ ರಹಸ್ಯ ಕಾರ್ಯಸೂಚಿಯ ಒಂದು ಭಾಗ’ ಎಂದು ಸರ್ಕಾರದ ನೋಟಿಸ್‌ಗೆ ನೀಡಿದ ಉತ್ತರದಲ್ಲಿ ತಿಳಿಸಿದೆ.

ವಿವರ 12



### ನಾಲ್ಕು ಪಟ್ಟೆತಲೆ ಹೆಬ್ಬಾತು ಸಾಕಣೆ ಆರೋಪ

# ನಟ ದರ್ಶನ್, ಪತ್ನಿ ವಿಜಯಲಕ್ಷ್ಮಿ, ಮ್ಯಾನೇಜರ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

**ಮೈಸೂರು:** ವನ್ಯಜೀವಿ ಸಂರಕ್ಷಣ ಕಾಯ್ದೆಯಡಿ ಸಂರಕ್ಷಿತವೆಂದು ಗುರುತಿಸಲಾಗಿದ್ದ ಪಟ್ಟೆತಲೆ ಹೆಬ್ಬಾತುಗಳನ್ನು (ಬಾರ್ ಹೆಡೆಡ್ ಗೂಸ್) ಕೂಡಿ ಹಾಕಿ ಸಾಕಿದ ಆರೋಪದ ಮೇರೆಗೆ ನಟ ದರ್ಶನ್, ಫಾರ್ಮ್‌ಹೌಸ್ ಒಡತಿಯಾದ ಪತ್ನಿ ವಿಜಯಲಕ್ಷ್ಮಿ ಹಾಗೂ ಮ್ಯಾನೇಜರ್ ನಾಗರಾಜ್ ವಿರುದ್ಧ ಅರಣ್ಯಾಧಿಕಾರಿಗಳು ಶನಿವಾರ ಪ್ರಕರಣ ದಾಖಲಿಸಿದ್ದಾರೆ.



ದರ್ಶನ್



ವಿಜಯಲಕ್ಷ್ಮಿ

ಫಾರ್ಮ್‌ಹೌಸ್ ಮೇಲೆ ಶುಕ್ರವಾರ ರಾತ್ರಿ ಕಾರ್ಯಾಚರಣೆ ನಡೆಸಿದ್ದ ಅಧಿಕಾರಿಗಳು ನಾಲ್ಕು ಹೆಬ್ಬಾತು ವಶಪಡಿಸಿಕೊಂಡಿದ್ದಾರೆ. ಡಿಜಿಟಲ್ ಮಾಧ್ಯಮವೊಂದಕ್ಕೆ ಇತ್ತೀಚೆಗೆ ನೀಡಿದ್ದ ಸಂದರ್ಶನದಲ್ಲಿ ದರ್ಶನ್ ತಾವು ಸಾಕಿರುವ ಪ್ರಾಣಿ, ಪಕ್ಷಿಗಳ ವಿವರ ನೀಡಿದ್ದರು.

‘ಹೆಬ್ಬಾತು ಮಧ್ಯ ಏಷ್ಯಾ ಪ್ರದೇಶದ್ದಾಗಿದ್ದು, ಭಾರತಕ್ಕೆ ವಲಸೆ ಬರುತ್ತವೆ. ಇವುಗಳನ್ನು ಮನೆ, ತೋಟಗಳಲ್ಲಿ ಸಾಕುವುದು ಅಪರಾಧ’ ಎಂದು ಅರಣ್ಯ ಸಂಚಾರಿ ದಳದ ಮುಖ್ಯಸ್ಥ ಭಾಸ್ಕರ್ ತಿಳಿಸಿದ್ದಾರೆ.

‘ವನ್ಯಜೀವಿ ಸಂರಕ್ಷಣೆ ಕಾಯ್ದೆ 1972 (2022 ತಿದ್ದುಪಡಿ) ಅನ್ವಯ ಸೆಕ್ಷನ್ 9 (ಬೇಟೆ ನಿಷೇಧ), 39 (ಅಕ್ರಮ ವಶದಲ್ಲಿರಿಸುವುದು, ಮುಟ್ಟುಗೋಲು ಹಾಕುವಿಕೆ) ಹಾಗೂ 51 (ಸಂರಕ್ಷಿತ ವನ್ಯ ಜೀವಿ ಪ್ರದೇಶದ ಅಕ್ರಮ ಪ್ರವೇಶ ಹಾನಿ ತಡೆ)ರ ಅಡಿ ಪ್ರಕರಣ ದಾಖಲಿಸಿದ್ದು, ಸಾಬೀತಾದರೆ 3 ವರ್ಷ ಸಜೆ, ದಂಡ ವಿಧಿಸಲು ಅವಕಾಶವಿದೆ’ ಎಂದಿದ್ದಾರೆ.

‘ದರ್ಶನ್ ಅವರ ಫಾರ್ಮ್‌ಹೌಸ್‌ನಲ್ಲಿ ವಿದೇಶಿ ಪಕ್ಷಿಗಳನ್ನು ಸಾಕುತ್ತಿದ್ದು, ಅದಕ್ಕೆ ಅನುಮತಿ ಪತ್ರ ಹಾಜರುಪಡಿಸಲು ಸೂಚಿಸಲಾಗಿದೆ. ಕೋಳಿ ಪ್ರಭೇದದ ಮೆಕಾಸೆ, ಸನ್‌ಕಾಯ್ನ್, ಪುಕಾಟೊ ಇತ್ಯಾದಿಗಳು, ಕಪ್ಪು ಹಂಸ, ಉಷ್ಟ್ರಪಕ್ಷಿ, ಯೆಮು ಪಕ್ಷಿಗಳು ಇವೆ. ಅವುಗಳನ್ನು ಸಾಕಬಹುದು. ಆದರೆ, ಮಾಲೀಕತ್ವದ ದಾಖಲಾತಿಗಳನ್ನು ಕೇಳಿದ್ದೇವೆ’ ಎಂದರು.

ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿಜಯರಂಜನ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ಮಾರ್ಗದರ್ಶನದಲ್ಲಿ ದಾಳಿ ಕಾರ್ಯಾಚರಣೆ ನಡೆದಿತ್ತು. ಶನಿವಾರ ರಾತ್ರಿ ಹೆಬ್ಬಾತುಗಳನ್ನು ನಂಜನಗೂಡು ಸಮೀಪದ ಹದಿನಾರು ಕೆರೆಯಲ್ಲಿ ಬಿಡಲಾಯಿತು.

**ಒಳ ಪುಟ**
‘ಹಿಂದೂಗಳಲ್ಲಿ ಆತಂಕ ಮೂಡಿಸಲು ಪ್ರವೀಣ್ ನೆಟ್ಟಾರು ಹತ್ಯೆ’ 7



## ಅಂಬೇಡ್ಕರ್ ಅಭಿವೃದ್ಧಿ ನಿಗಮದ ಎಂ.ಡಿ ಅಮಾನತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭ್ರಷ್ಟಾಚಾರ, ಗಂಭೀರ ಸ್ವರೂಪದ ದುರ್ನಡತೆ ಮತ್ತು ಕರ್ತವ್ಯಲೋಪ ಆರೋಪದಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ ಕೆಎಎಸ್ (ಆಯ್ಕೆ ಶ್ರೇಣಿ) ಅಧಿಕಾರಿ, ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್ ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅಮಾನತುಗೊಳಿಸಿದೆ.



ಕೆ.ಎಂ. ಸುರೇಶ್ ಕುಮಾರ್

‘ಅಂಬೇಡ್ಕರ್ ನಿಗಮ: ₹ 25 ಕೋಟಿ ಅಕ್ರಮ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಡಿ. 22ರ ಸಂಚಿಕೆಯ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

## ಗಾಂಜಾ: ಮತ್ತಿಬ್ಬರು ವೈದ್ಯರು ಸೇರಿ 9 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ವೈದ್ಯಕೀಯ ಕಾಲೇಜುಗಳನ್ನು ಗುರಿಯಾಗಿಸಿ ನಗರದಲ್ಲಿ ನಡೆಯುತ್ತಿದ್ದ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಮತ್ತೆ ಇಬ್ಬರು ವೈದ್ಯರು ಹಾಗೂ ಏಳು ವೈದ್ಯ ವಿದ್ಯಾರ್ಥಿಗಳನ್ನು ಶನಿವಾರ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 24ಕ್ಕೆ ಏರಿದೆ.

ಬಂಧಿತರಲ್ಲಿ ಕರ್ನಾಟಕದ ಡಾ.ಸಿದ್ಧಾರ್ಥ ಪವಸ್ಕರ್ (29) ಹಾಗೂ ಡಾ.ಸುಧೀಂದ್ರ (34) ವೈದ್ಯರಾಗಿದ್ದಾರೆ. ಒಬ್ಬರು ನಗರದ ಆಸ್ಪತ್ರೆಯೊಂದರಲ್ಲಿ ಹಾಗೂ ಇನ್ನೊಬ್ಬರು ಹೊರವಲಯದ ಆಸ್ಪತ್ರೆಯೊಂದರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇನ್ನುಳಿದ ಏಳು ಆರೋಪಿಗಳಲ್ಲಿ ಇಬ್ಬರು ವೈದ್ಯ ವಿದ್ಯಾರ್ಥಿನಿಯರು.

ಎಂಬಿಬಿಎಸ್– ಎಂ.ಎಸ್. ವಿದ್ಯಾರ್ಥಿ ಉತ್ತರ ಪ್ರದೇಶದ ಡಾ.ವಿದುಶ್ ಕುಮಾರ್ (27), ಮೂರನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಕೇರಳದ ಡಾ.ಸೂರ್ಯಜಿತ್‌ದೇವ (20), ಎಂಬಿಬಿಎಸ್ ಇಂಟರ್ನ್‌ಷಿಪ್ ಮಾಡುತ್ತಿರುವ ಕೇರಳದ ಡಾ.ಐಷಾ ಮೊಹಮ್ಮದ್ (23), ತೆಲಂಗಾಣದ ಡಾ.ಪ್ರಣಯ್ ನಟರಾಜ್ (24), ಡಾ.ಚೈತನ್ಯ ಆರ್. ತುಮುಲುರಿ (23) ಹಾಗೂ ಎಂಬಿಬಿಎಸ್ ವಿದ್ಯಾರ್ಥಿ ಉತ್ತರ ಪ್ರದೇಶದ ಡಾ.ಇಷ್ ಮಿಡ್ಡ (27) ಹಾಗೂ ಬಿಡಿಎಸ್ ಇಂಟರ್ನ್‌ಶಿಪ್ ಮಾಡುತ್ತಿರುವ ನವದೆಹಲಿಯ ಡಾ.ಶರಣ್ಯಾ (23) ಬಂಧಿತ ವೈದ್ಯ ವಿದ್ಯಾರ್ಥಿಗಳು.

7ನೇ ಪುಟ ನೋಡಿ

### ಭೂಪಸಂದ್ರ– ಹೆಬ್ಬಾಳ ಮುಖ್ಯರಸ್ತೆಯಲ್ಲಿ ಘಟನೆ

# ಪಾದಚಾರಿ ಮಾರ್ಗದಲ್ಲಿ ಕೇಬಲ್ ರಾಶಿ: ಜಾರಿಬಿದ್ದು ಗಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾದಚಾರಿ ಮಾರ್ಗದಲ್ಲಿ ಹರಡಿಕೊಂಡಿದ್ದ ಕೇಬಲ್ ರಾಶಿಯಿಂದಾಗಿ ಜಾರಿಬಿದ್ದು ಬಿ.ಕೃಷ್ಣಮೂರ್ತಿ (57) ಎಂಬುವವರು ತೀವ್ರ ಗಾಯಗೊಂಡಿದ್ದು, ಈ ಸಂಬಂಧ ಕೇಬಲ್ ಮಾಲೀಕರು ಹಾಗೂ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

‘ಭೂಪಸಂದ್ರ– ಹೆಬ್ಬಾಳ ಮುಖ್ಯರಸ್ತೆಯ ಒಂದನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ಜ. 7ರಂದು ನಡೆದಿರುವ ಘಟನೆ ಸಂಬಂಧ ಮಲ್ಲೇಶ್ವರ ನಿವಾಸಿ ಕೃಷ್ಣಮೂರ್ತಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಸಂಜಯನಗರ ಠಾಣೆ ಪೊಲೀಸ್ ಮೂಲಗಳು ತಿಳಿಸಿವೆ.

‘ಕೃಷ್ಣಮೂರ್ತಿ ಅವರು ಕೆಲಸ ನಿಮಿತ್ತ ಪಾದಚಾರಿ ಮಾರ್ಗದಲ್ಲಿ ನಡೆದುಕೊಂಡು ವಕೀಲರೊಬ್ಬರ ಕಚೇರಿಗೆ ಹೊರಟಿದ್ದರು. ಪಾದಚಾರಿ ಮಾರ್ಗದಲ್ಲಿ ಟಿ.ವಿ ಕೇಬಲ್ ರಾಶಿ ಬಿದ್ದಿತ್ತು. ಹಳೇ ಕೇಬಲ್‌ಗಳು ಒಂದಕ್ಕೊಂದು ಅಂಟಿಕೊಂಡು ಜನರ ಜೀವಕ್ಕೆ ಅಪಾಯ ತರುವ ಸ್ಥಿತಿಯಲ್ಲಿದ್ದವು. ಕೃಷ್ಣಮೂರ್ತಿ ಅವರು ಕೇಬಲ್ ರಾಶಿ ದಾಟಿ ಮುಂದಕ್ಕೆ ಹೋಗಲು ಯತ್ನಿಸಿದ್ದರು. ಕೇಬಲ್ ಮೇಲೆ ಕಾಲಿಡುತ್ತಿದ್ದಂತೆ ಜಾರಿ ಬಿದ್ದಿದ್ದರು.’

3ನೇ ಪುಟ ನೋಡಿ

### ನಟನ ಸಾವಿಗೆ ಕಾರಣವಾಗಿದ್ದ ಕೇಬಲ್

ಮಲ್ಲೇಶ್ವರ 17ನೇ ಅಡ್ಡರಸ್ತೆಯಲ್ಲಿ 2013ರಲ್ಲಿ ಕೇಬಲ್‌ನಿಂದಾಗಿ ಸಂಭವಿಸಿದ್ದ ಅಪಘಾತದಲ್ಲಿ ನಟ ಅನಿಲ್‌ಕುಮಾರ್ ಎಂಬುವವರು ಮೃತಪಟ್ಟಿದ್ದರು. ಇದಾದ ನಂತರ ಹಲವೆಡೆ ಕೇಬಲ್‌ನಿಂದಾಗಿ ಅವಘಡಗಳು ಸಂಭವಿಸಿ, ಜನರು ಗಾಯಗೊಂಡಿದ್ದರು.

3ನೇ ಪುಟ ನೋಡಿ

**ಚಿನಕುರಳಿ**
ಪ್ರಕಾಶ್ ಶೆಟ್ಟಿ



# ಕಣ್ಮನ ಸೆಳೆದ ಜಾನೂರ್ ಕಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಾಳೆ ಎಲೆ ಒಳಗೆ ಥರ್ಮಕೋಲ್ ಬಳಸಿ ಮದುವೆಯ ಮಂಟಪ, ದೀಪದ ಮಂಟಪ, ದೇವ ಸ್ಥಾನದ ಮಂಟಪ ಸೇರಿ ಆನೆ ಹೀಗೆ ವಿವಿಧ ಬಗೆಯ ಥಾಯ್ ಕಲಾಕೃತಿಗಳು ನೋಡುಗರ ಕಣ್ಮನ ಸೆಳೆದವು.

ಜಾನೂರ್ ಕಲೆಯ ಮೂಲಕ ಕಪ್ಪು ಸುಂದರಿ ಪ್ರತಿಮೆಗೆ ಎಳೆ ತೆಂಗಿನ ಗರಿಗಳಿಂದ ತೊಡಿಸಿದ್ದ ಉಡುಗೆ ರೂಪದರ್ಶಿಯರನ್ನು ನಾಚಿಸುವಂತಿತ್ತು. ತರಕಾರಿಗಳಿಂದ ಮಾಡಿದ ನವಿಲು, ಸರ್ಪ, ಹೆಣ್ಣು ಭ್ರೂಣ ಹತ್ಯೆಯ ಕುರಿತು ಜಾಗೃತಿ, ಸೆಲ್ಫಿ ಬೂತ್‌ಗಳ ಮುಂದೆ ಚಿಣ್ಣರು ಮತ್ತು ಮಹಿಳೆಯರು ನಿಂತ ಫೋಟೊ ತೆಗೆಸಿಕೊಳ್ಳುತ್ತಿದ್ದರು. ಇತರೆ ಕಲೆಗಳು ನೋಡುಗರ ಮನಸೂರೆಗೊಂಡವು. ಇಕೆಬಾನ ಹೂಗಳ ಪ್ರದರ್ಶನ ಚಿತ್ತಾಕರ್ಷಕವಾಗಿತ್ತು.

ಗಣರಾಜ್ಯೋತ್ಸವದ ಫಲ ಪುಷ್ಪ ಪ್ರದರ್ಶನದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಮಾಹಿತಿ ಕೇಂದ್ರದಲ್ಲಿ ಆಯೋಜಿಸಿದ್ದ ವಿಶೇಷ ಪ್ರದರ್ಶನದಲ್ಲಿ ಶನಿವಾರ ಕಂಡುಬಂದ ದೃಶ್ಯಗಳಿವು.

> **ಬೆಂಗಳೂರಿನ ಇತಿಹಾಸದ ಜೊತೆಗೆ ಗೃಹಿಣಿಯರ ಪ್ರತಿಭೆಯ ಅನಾವರಣಕ್ಕೆ ಇಲ್ಲಿರುವ ಇಕೆಬಾನ, ಜಾನೂರ್, ಥಾಯ್ ಕಲೆಗಳಲ್ಲಿ ಅರಳಿದ ವಿವಿಧ ಬಗೆಯ ಕಲಾಕೃತಿಗಳೇ ಸಾಕ್ಷಿ**
>
> **ತೇಜಸ್ವಿನಿ ಅನಂತಕುಮಾರ್**
> ಅಧ್ಯಕ್ಷರು, ಅದಮ್ಯ ಚೇತನ್ ಟ್ರಸ್ಟ್

ಇಕೆಬಾನ, ಪುಷ್ಪ ಭಾರತಿ, ತರಕಾರಿ ಕೆತ್ತನೆ, ಒಣ ಹೂವಿನ ಜೋಡಣೆ, ಥಾಯ್ ಆರ್ಟ್, ತೆಂಗಿನ ಗರಿಯ ಚಿತ್ತಾರದಿಂದ ಕೂಡಿದ ಜಾನೂರ್ ಕಲೆ, ಡಚ್ ಹೂವಿನ ಜೋಡಣೆ ಪ್ರದರ್ಶನವನ್ನು ಅದಮ್ಯ ಚೇತನ ಟ್ರಸ್ಟ್‌ನ ಅಧ್ಯಕ್ಷೆ ತೇಜಸ್ವಿನಿ ಅಂನತಕುಮಾರ್ ಉದ್ಘಾಟಿಸಿದರು.



ಇಕೆಬಾನ ಕಲೆಯನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ಯುವತಿಯರು —ಪ್ರಜಾವಾಣಿ ಚಿತ್ರ

ತೋಟಗಾರಿಕೆ ಇಲಾಖೆಯಲ್ಲಿ ತರಬೇತಿ ಪಡೆದಿದ್ದ ಗೃಹಿಣಿಯರ ಕ್ರಿಯಾಶೀಲತೆಗೆ ಈ ಪ್ರದರ್ಶನ ವೇದಿಕೆ ಕಲ್ಪಿಸಿತ್ತು. ಈ ಸ್ಪರ್ಧೆಗಳು ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ ಮತ್ತಷ್ಟು ರಂಗು ತುಂಬಿತು.

### ನಕ್ಷೆ ಮಂಜೂರಾತಿ ಪಡೆಯಲು ನಕಲಿ ನಿರಾಕ್ಷೇಪಣಾ ಪತ್ರ ಸಲ್ಲಿಕೆ ಹಿನ್ನೆಲೆ

# ಶೋಭ ಸಮುಚ್ಚಯದ ನಕ್ಷೆ ಮಂಜೂರಾತಿ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎನ್. ನಾಗೇನಹಳ್ಳಿ ಮತ್ತು ಚೊಕ್ಕನಹಳ್ಳಿ ಬಳಿ ಶೋಭ ಲಿಮಿಟೆಡ್ ಕಂಪನಿ ನಿರ್ಮಿಸಿರುವ ವಸತಿ ಸಮುಚ್ಚಯಕ್ಕೆ ನೀಡಿದ್ದ ಪರಿಷ್ಕೃತ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರವನ್ನು ಬಿಬಿಎಂಪಿ ರದ್ದುಪಡಿಸಿದೆ.

ನಕಲಿ ನಿರಾಕ್ಷೇಪಣಾ ಪತ್ರ ಮತ್ತು ಕ್ಲಿಯರೆನ್ಸ್ ಪತ್ರಗಳನ್ನು ಸಲ್ಲಿಸಿರುವುದರಿಂದ ಮಂಜೂರಾತಿ ರದ್ದುಪಡಿಸಲಾಗಿದೆ ಎಂದು ಬಿಬಿಎಂಪಿ ಜಂಟಿ ನಿರ್ದೇಶಕ (ನಗರ ಯೋಜನೆ- ಉತ್ತರ) ಆದೇಶದಲ್ಲಿ ತಿಳಿಸಿದ್ದಾರೆ.

ಯಲಹಂಕ ವಲಯದ ಎನ್. ನಾಗೇನಹಳ್ಳಿ ಮತ್ತು ಚೊಕ್ಕನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ವಸತಿ ಸಮುಚ್ಚಯಕ್ಕೆ 2013ರಲ್ಲಿ ಪಾಲಿಕೆಯಿಂದ ಪರಿಷ್ಕೃತ ನಕ್ಷೆ ಮಂಜೂರಾತಿ ಮತ್ತು ಕಟ್ಟಡ ನಿರ್ಮಾಣವಾದ ಬಳಿಕ 2016, 2019 ಮತ್ತು 2020ರಲ್ಲಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಬಿಬಿಎಂಪಿ ನೀಡಿತ್ತು.

‘ಈ ಪ್ರಮಾಣಪತ್ರಗಳನ್ನು ಪಡೆ ಯಲು ಅಗ್ನಿಶಾಮಕ ಇಲಾಖೆಯಿಂದ ಪಡೆದಿರುವ 2013 ನಿರಾಕ್ಷೇಪಣಾ ಪತ್ರ, 2016 ಮತ್ತು 2018ರಲ್ಲಿ ಪಡೆದಿರುವ ಕ್ಲಿಯರೆನ್ಸ್ ಪತ್ರಗಳು ನಕಲಿಯಾಗಿದ್ದು, ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಹಿಂಪಡೆಯಬೇಕು’ ಎಂದು ಶ್ರೀನಿವಾಸ್ ರಾವ್ ತಲ್ಲಾ ಎಂಬುವರು ಪಾಲಿಕೆಗೆ ದೂರು ನೀಡಿದ್ದರು. ಈ ದೂರಿಗೆ ಸಮಜಾಯಿಷಿ ಸಲ್ಲಿಸುವಂತೆ ಶೋಭ ಲಿಮಿಟೆಡ್‌ಗೆ ಪಾಲಿಕೆಯು ನೋಟಿಸ್ ನೀಡಿತ್ತು. ಅಲ್ಲದೇ ಅಗ್ನಿಶಾಮಕ ಇಲಾಖೆಗೂ ಪತ್ರ ಬರೆದು ನಿರಾಕ್ಷೇಪಣಾ ಪತ್ರ ನೀಡಿರುವ ಬಗ್ಗೆ ವಿವರವನ್ನೂ ಕೇಳಿತ್ತು.

‘2011 ಮತ್ತು 2021ರಂದು ನಿರಾ ಕ್ಷೇಪಣಾ ನೀಡಲಾಗಿದೆ. 2015, 2020 ಮತ್ತು 2021ರಲ್ಲಿ ಸ್ಥಳ ಪರಿವೀಕ್ಷಣೆ ನಡೆಸಿ ಕ್ಲಿಯರೆನ್ಸ್ ಪತ್ರಗಳನ್ನೂ ನೀಡಲಾಗಿದೆ. ಆದರೆ, 2013 ನಿರಾಕ್ಷೇಪಣಾ ಪತ್ರ ಮತ್ತು 2016, 2018ರಲ್ಲಿ ಕ್ಲಿಯರೆನ್ಸ್ ಪತ್ರಗಳನ್ನು ನೀಡಿಲ್ಲ ಎಂದು ಅಗ್ನಿ ಶಾಮಕ ಇಲಾಖೆ ಸ್ಪಷ್ಟನೆ ನೀಡಿದೆ’ ಎಂದು ಆದೇಶದಲ್ಲಿ ಬಿಬಿಎಂಪಿ ವಿವರಿಸಿದ್ದಾರೆ

‘ಬಿಬಿಎಂಪಿ ಷರತ್ತುಗಳನ್ನು ಉಲ್ಲಂಘಿಸಿ ನಕಲಿ ದಾಖಲೆ ನೀಡಿರುವುದರಿಂದ ಅಭಿವೃದ್ಧಿ ಶುಲ್ಕ ಮತ್ತು ದಂಡ ಶುಲ್ಕಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಲ್ಲದೇ, ಪರಿಷ್ಕೃತ ನಕ್ಷೆ ಮಂಜೂರಾತಿ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರಗಳನ್ನು ರದ್ದುಪಡಿಸಲಾಗಿದೆ’ ಎಂದೂ ತಿಳಿಸಿದ್ದಾರೆ.

## ‘ಉದ್ದೇಶಪೂರ್ವಕ ಕೆಲಸ ಅಲ್ಲ’

‘ಪ್ರಮಾಣಪತ್ರಗಳನ್ನು ಪಡೆಯುವ ಕೆಲಸವನ್ನು ಏಜೆನ್ಸಿಯೊಂದಕ್ಕೆ ನೀಡಲಾಗಿತ್ತು. ಅವರು ನಕಲಿ ದಾಖಲೆ ಸೃಷ್ಟಿಸಿರುವುದು ತಡವಾಗಿ ಗಮನಕ್ಕೆ ಬಂತು. ಬಳಿಕ ಏಜೆನ್ಸಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಾವು ಉದ್ದೇಶ ಪೂರ್ವಕವಾಗಿ ನಕಲಿ ದಾಖಲೆ ಸೃಷ್ಟಿಸಿಲ್ಲ’ ಎಂದು ಶೋಭ ಲಿಮಿಟೆಡ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕ ಸಂದೇಶ್ ಎಚ್.ಜಿ. ಸ್ಪಷ್ಟಪಡಿಸಿದರು.

‘ಶೋಭ ಲಿಮಿಟೆಡ್ ಉದ್ದೇಶಪೂರ್ವಕವಾಗಿ ನಕಲಿ ದಾಖಲೆ ಸೃಷ್ಟಿಸಿಲ್ಲ ಎಂದು ಪೊಲೀಸರೇ ಬಿ ವರದಿ ಸಲ್ಲಿಸಿದ್ದಾರೆ. ಆದರೂ ದಂಡ ಪಾವತಿಸಲಾಗಿದೆ. ಬಳಿಕ ಅಗ್ನಿ ಶಾಮಕ ಇಲಾಖೆಯಿಂದ ದೃಢೀಕೃತ ನಿರಾಕ್ಷೇಪಣಾ ಪತ್ರಗಳನ್ನು ಪಡೆಯಲಾಗಿದೆ. ಈಗ ಬಿಬಿಎಂಪಿ ಸ್ವಾಧೀನಾನು ಭವ ಪತ್ರ ರದ್ದು ಮಾಡಿದ್ದು, ಇದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುತ್ತೇವೆ’ ಎಂದು ಹೇಳಿದರು.

## ಪಾದಚಾರಿ ಮಾರ್ಗದಲ್ಲಿ ಕೇಬಲ್ ರಾಶಿ: ಜಾರಿಬಿದ್ದು ಗಾಯ

ಒಂದನೇ ಪುಟದಿಂದ...

‘ತಲೆ ಹಾಗೂ ಕುತ್ತಿಗೆಗೆ ತೀವ್ರ ಪೆಟ್ಟು ಬಿದ್ದಿತ್ತು. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದಿದ್ದ ಕೃಷ್ಣಮೂರ್ತಿ, ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ತೆರಳಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಗ್ಯ ತಪಾಸಣೆ ನಡೆಸಿದ್ದ ವೈದ್ಯರು, ತಲೆ ಹಿಂಭಾಗ ಹಾಗೂ ಕುತ್ತಿಗೆಗೆ ತೀವ್ರ ಪೆಟ್ಟು ಬಿದ್ದಿರುವುದಾಗಿ ಹೇಳಿದ್ದರು. ಕೆಲ ಮಾತ್ರೆಗಳನ್ನು ಜೀವನ ಪರ್ಯಂತ ತೆಗೆದುಕೊಳ್ಳುವಂತೆ ಸೂಚಿಸಿದ್ದರು. ಇದಾದ ನಂತರವೇ ಕೃಷ್ಣಮೂರ್ತಿ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ತಿಳಿಸಿವೆ.

## ನಟನ ಸಾವಿಗೆ ಕಾರಣವಾಗಿದ್ದ ಕೇಬಲ್

ಒಂದನೇ ಪುಟದಿಂದ...

‘ಬಿಇಎಲ್ ಬಡಾವಣೆಯಲ್ಲಿ ವಾಸವಿದ್ದ ಅನಿಲ್‌ಕುಮಾರ್, ಬಿಎಂಡಬ್ಲ್ಯೂ ಬೈಕ್‌ನಲ್ಲಿ ಹೊರಟಿದ್ದರು. ರಸ್ತೆಯಲ್ಲಿ ಕೇಬಲ್ ಸುರುಳಿ ತುಂಡಾಗಿ ಬಿದ್ದಿತ್ತು. ವೇಗವಾಗಿ ಹೊರಟಿದ್ದ ಬೈಕ್‌ನ ಚಕ್ರಕ್ಕೆ ಕೇಬಲ್ ಸಿಲುಕಿತ್ತು. ಅನಿಲ್‌ಕುಮಾರ್ ಅವರ ನಿಯಂತ್ರಣ ತಪ್ಪಿ ಬೈಕ್ ಮರಕ್ಕೆ ಡಿಕ್ಕಿ ಹೊಡೆದಿತ್ತು’ ಎಂದು ಪೊಲೀಸ್ ಮೂಲ ಗಳು ಹೇಳಿವೆ. ಕೇಬಲ್ ನಿರ್ವಹಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸಾರ್ವಜನಿಕರು, ‘ಎಲ್ಲೆಂದರಲ್ಲಿ ಕೇಬಲ್ ಬೀಳುತ್ತಿವೆ. ಕೇಬಲ್‌ನಿಂದಾಗಿ ವೃದ್ಧರು, ಮಕ್ಕಳು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಕೇಬಲ್ ತೆರವಿಗೆ ಬಿಬಿಎಂಪಿ ಕ್ರಮ ಕೈಗೊಳ್ಳುತ್ತಿಲ್ಲ’ ಎಂದರು.

## ಸಂಕ್ಷಿಪ್ತ ಸುದ್ದಿ

### ಅನುದಾನಿತ ಶಾಲಾ ಸಿಬ್ಬಂದಿಗೆ ಸೌಲಭ್ಯ: ಸಮಿತಿ ರಚನೆ

**ಬೆಂಗಳೂರು:** ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ನಿವೃತ್ತ ಸಿಬ್ಬಂದಿ ಬೇಡಿಕೆ ಈಡೇರಿಕೆಗೆ ತಗುಲಬಹುದಾದ ಆರ್ಥಿಕ ವೆಚ್ಚವನ್ನು ಅಂದಾಜಿಸಿ, ವರದಿ ಸಲ್ಲಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ, ಆರು ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಅನುದಾನಕ್ಕೆ ಒಳಪಡುವ ಮೊದಲು ಸಲ್ಲಿಸಿದ ಸೇವೆಯ ಅವಧಿ ಪರಿಗಣಿಸಿ ಕಾಲ್ಪನಿಕ ವೇತನ ನಿಗದಿ ಮಾಡುವುದು, ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವುದು, ಜ್ಯೋತಿ ಸಂಜೀವಿನಿ ಯೋಜನೆಗೆ ಒಳಪಡಿಸುವ ಕುರಿತು ನಿಖರ ಮಾಹಿತಿ ಮತ್ತು ದತ್ತಾಂಶಗಳನ್ನು ಸಂಗ್ರಹಿಸಿ, ಆರ್ಥಿಕ ವೆಚ್ಚವನ್ನು ಒಳಗೊಂಡ ವರದಿಯನ್ನು 30 ದಿನಗಳ ಒಳಗೆ ಸಲ್ಲಿಸುವಂತೆ ಸರ್ಕಾರ ಆದೇಶ ಹೊರಡಿಸಿದೆ.

### ಇಟ್ಟಮಡು ಬಳಿ ಕುಸಿದ ರಸ್ತೆ

**ಬೆಂಗಳೂರು:** ಇಟ್ಟಮಡು ಮುಖ್ಯ ರಸ್ತೆಯಲ್ಲಿ ರಸ್ತೆ ಕುಸಿದಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿದೆ.

ರಸ್ತೆಯ ಒಂದು ಭಾಗದಲ್ಲಿ ಇದ್ದಕ್ಕಿದ್ದಂತೆ ದೊಡ್ಡ ಗುಂಡಿಯೊಂದು ನಿರ್ಮಾಣವಾಗಿದೆ. ಸುತ್ತಲೂ ಬ್ಯಾರಿಕೇಡ್ ಅಳವಡಿಸಲಾಗಿದೆ. ಮುಖ್ಯ ರಸ್ತೆ ಆಗಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

ಅಲ್ಲಲ್ಲಿ ರಸ್ತೆ ಕುಸಿಯುವ ಪ್ರಕರಣ ವರದಿಯಾಗುತ್ತಿದ್ದು, ಮಹಾಲಕ್ಷ್ಮಿ ಲೇಔಟ್‌ನಲ್ಲೂ ಇದೇ ರೀತಿಯ ರಸ್ತೆ ಕುಸಿದಿತ್ತು. ಮೆಟ್ರೊ ಸುರಂಗ ಮಾರ್ಗದ ಕಾಮಗಾರಿ ನಡೆಯುತ್ತಿರುವ ಬ್ರಿಗೇಡ್ ರಸ್ತೆಯಲ್ಲೂ ಇದೇ ರೀತಿಯ ರಸ್ತೆ ಕುಸಿದು ಬೈಕ್ ಸವಾರ ಬಿದ್ದು ಗಾಯಗೊಂಡಿದ್ದರು.

ಇಟ್ಟಮಡು ರಸ್ತೆ ಕುಸಿತದ ಬಗ್ಗೆ ಪ್ರತಿಕ್ರಿಯಿಸಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ‘ರಸ್ತೆಯ ಅಡಿಯಲ್ಲಿ ಸಾಕಷ್ಟು ಪೈಪ್‌ಲೈನ್‌ಗಳು ಇರುತ್ತವೆ. ಸೋರಿಕೆಯಾದರೆ ಈ ರೀತಿ ರಸ್ತೆ ಕುಸಿಯುತ್ತವೆ. ಈ ಬಗ್ಗೆ ಪರಿಶೀಲಿಸಲಾಗುವುದು’ ಎಂದರು.

### ಸಿರಿಧಾನ್ಯ ಮೇಳ: ₹170 ಕೋಟಿ ಒಡಂಬಡಿಕೆ

**ಬೆಂಗಳೂರು:** ಅಂತರ ರಾಷ್ಟ್ರೀಯ ಸಿರಿಧಾನ್ಯ ಮೇಳಕ್ಕೆ ಜಾತ್ರೆಯ ಕಳೆ ಕಟ್ಟಿದ್ದು, ಎರಡು ದಿನಗಳಲ್ಲಿ ₹170.30 ಕೋಟಿ ಮೊತ್ತದ 25ಕ್ಕೂ ಹೆಚ್ಚು ಒಡಂಬಡಿಕೆಗಳು ನಡೆದಿವೆ.

ವಾರಾಂತ್ಯ ಆಗಿರುವುದರಿಂದ ಮೇಳಕ್ಕೆ ಶನಿವಾರ ಜನ ಸಾಗರವೇ ಹರಿದು ಬಂದಿತ್ತು. 40 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದು, ಸಿರಿಧಾನ್ಯದ ತಿನಿಸುಗಳನ್ನು ಸವಿದರು.

### ಕಿರುಕುಳ: ಆರೋಪಿಗೆ ಜಾಮೀನು

**ನವದೆಹಲಿ (ಪಿಟಿಐ):** ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಅವರಿಗೆ ಕಿರುಕುಳ ನೀಡಿ, 15 ಮೀಟರ್ ಎಳೆದೊಯ್ದಿದ್ದ ಆರೋಪದ ಮೇಲೆ ಬಂಧಿತನಾಗಿದ್ದ ಕಾರು ಚಾಲಕ ಹರೀಶ್ ಚಂದ್ರ ಅವರಿಗೆ ದೆಹಲಿ ನ್ಯಾಯಾಲಯ ಶನಿವಾರ ಜಾಮೀನು ಮಂಜೂರು ಮಾಡಿದೆ.

### ಶೀಘ್ರದಲ್ಲೇ ವರದಿ; ನೌಕರರ ಸಂಘ ಕೋರಿಕೆ

**ಬೆಂಗಳೂರು:** ವಿಧಾನಸಭಾ ಚುನಾವಣೆಯ ನೀತಿಸಂಹಿತೆ ಜಾರಿಗೊಳ್ಳುವ ಮೊದಲು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘ 7ನೇ ವೇತನ ಆಯೋಗಕ್ಕೆ ಮನವಿ ಸಲ್ಲಿಸಿದೆ ಎಂದು ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾಹಿತಿ ನೀಡಿದರು.

### ಕಾರಂತ ಬಡಾವಣೆ: ಅರ್ಜಿ ಸಲ್ಲಿಸಲು ಜ.25 ಕೊನೆ ದಿನ

**ಬೆಂಗಳೂರು:** ಶಿವರಾಮ ಕಾರಂತ ಬಡಾವಣೆಯಲ್ಲಿ ನಿರ್ಮಿಸಿಕೊಂಡಿರುವ ಕಟ್ಟಡಗಳ ಸಕ್ರಮ ಕೋರಿ ಅರ್ಜಿ ಸಲ್ಲಿಸಲು ಇದೇ 25 ಕೊನೆ ದಿನ.

ಈ ಬಡಾವಣೆಗೆ ಸ್ವಾಧೀನ ಆಗಿರುವ ಒಟ್ಟು 3,546 ಎಕರೆ 12 ಗುಂಟೆ ಜಮೀನಿನ ಮಧ್ಯಭಾಗದಲ್ಲಿ ಕೈಬಿಟ್ಟು ಹೋಗಿರುವ ಜಮೀನು ಸ್ವಾಧೀನ ಸಂಬಂಧ 245 ಎಕರೆ 16 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.

ಈ ಜಮೀನಿನಲ್ಲಿ ಇರುವ ಕಟ್ಟಡಗಳ ಸಕ್ರಮಕ್ಕೆ ದಾಖಲೆಗಳ ಸಹಿತ ಅರ್ಜಿಯನ್ನು ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಪಡೆದುಕೊಳ್ಳುತ್ತಿದೆ. ಕೊನೆ ದಿನದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಸಮಿತಿ ತಿಳಿಸಿದೆ.

### ಇಂದು ಶ್ರೀನಿವಾಸ ಕಲ್ಯಾಣೋತ್ಸವ

**ಯಲಹಂಕ:** ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಕೇಸರಿ ಫೌಂಡೇಶನ್ ವತಿಯಿಂದ ಇದೇ 22ರಂದು ಬ್ಯಾಟರಾಯನಪುರ-ಶ್ರೀನಿವಾಸ ಕಲ್ಯಾಣೋತ್ಸವವನ್ನು ವೈಭವದಿಂದ ಆಚರಿಸಲಾಗುವುದು ಎಂದು ಫೌಂಡೇಶನ್ ಅಧ್ಯಕ್ಷ ಎಚ್.ಸಿ. ತಮ್ಮೇಶ್‌ಗೌಡ ತಿಳಿಸಿದರು.

ಬ್ಯಾಟರಾಯನಪುರ ಸಮೀಪದ ಎಪಿಎಂಸಿ ಮಾರುಕಟ್ಟೆ ಮೈದಾನದಲ್ಲಿ ಮಧ್ಯಾಹ್ನ 3.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ತಿರುಪತಿಯ ಅರ್ಚಕರ ತಂಡ ಈ ಕಲ್ಯಾಣೋತ್ಸವವನ್ನು ನಡೆಸಿಕೊಡಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಿರುಮಲ ತಿರುಪತಿ ಆಸ್ಥಾನ ಗಾಯಕರಾದ ಕೃಷ್ಣ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಹಾಮಂಗಳಾರತಿ ವೇಳೆ 50 ಸಾವಿರ ಮಹಿಳೆಯರು ಏಕಕಾಲದಲ್ಲಿ ದೀಪಹಚ್ಚಿ ಮಹಾಆರತಿ ಬೆಳಗುವುದು ವಿಶೇಷ. ಎಂದು ಮಾಹಿತಿ ನೀಡಿದರು.

### ನ್ಯಾಯಮೂರ್ತಿಗಳ ನೇಮಕ

**ನವದೆಹಲಿ(ಪಿಟಿಐ):** ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಪ್ರಧಾನ ನ್ಯಾಯಾಧೀಶರಾದ ರಾಮಚಂದ್ರ ಡಿ ಹುದ್ದಾರ ಹಾಗೂ ಹಿರಿಯ ಸೆಷನ್ಸ್ ನ್ಯಾಯಾಧೀಶ ಟಿ.ವೆಂಕಟೇಶ ನಾಯಕ್ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದೆ. ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಈ ಕುರಿತು ಟ್ವೀಟ್ ಮಾಡಿದ್ದಾರೆ.

## ಎಸ್‌ಬಿಐ ಗೃಹ ಸಾಲ ಉತ್ಸವ

**ಬೆಂಗಳೂರು:** ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಮ್ಮಿಕೊಂಡಿರುವ ಎರಡು ದಿನಗಳ ಗೃಹ ಸಾಲ ಉತ್ಸವಕ್ಕೆ ಶನಿವಾರ ಚಾಲನೆ ದೊರೆಯಿತು.

ನಗರದ ಸೆಂಟ್ ಮಾರ್ಕ್ಸ್ ರಸ್ತೆಯಲ್ಲಿ ಇರುವ ಬ್ಯಾಂಕ್‌ನ ಸ್ಥಳೀಯ ಪ್ರಧಾನ ಕಚೇರಿಯ ಆವರಣದಲ್ಲಿ ಉತ್ಸವ ಆರಂಭವಾಗಿದ್ದು, 40ಕ್ಕೂ ಹೆಚ್ಚಿನ ಕಟ್ಟಡ ನಿರ್ಮಾಣ ಸಂಸ್ಥೆಗಳು ಭಾಗವಹಿಸಿವೆ. ಸ್ಥಳದಲ್ಲಿಯೇ ಗೃಹಸಾಲ ಪಡೆಯುವವರಿಗೆ ಪ್ರೊಸೆಸಿಂಗ್ ಶುಲ್ಕ ಇರುವುದಿಲ್ಲ. ಬಡ್ಡಿದರದಲ್ಲಿ ರಿಯಾಯಿತಿಯೂ ಸಿಗಲಿದೆ. ಇದು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಲಿದೆ ಎಂದು ಬ್ಯಾಂಕ್ ತಿಳಿಸಿದೆ. ಬೆಂಗಳೂರಿನಲ್ಲಿ ಗೃಹ ಸಾಲ ಮಾರುಕಟ್ಟೆಗೆ ಅಗತ್ಯವಾದ ಉತ್ತಜನವನ್ನು ಈ ಮೇಳವು ನೀಡುವುದರಲ್ಲಿ ಅನುಮಾನವೇ ಇಲ್ಲ. ಮನೆಯ ಮೇಲೆ ಬಂಡವಾಳ ಹೂಡಲು ಇದು ಸೂಕ್ತ ಸಮಯ ಎಂದು ಎಸ್‌ಬಿಐನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ನಂದ ಕಿಶೋರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



### ಅತ್ಯಾಚಾರ– ವೈದ್ಯಕೀಯ ಪರೀಕ್ಷೆ

# 12 ಗಂಟೆ ಪೊಲೀಸ್ ವ್ಯಾನ್‌ನಲ್ಲೇ ಕುಳಿತ ಸಂತ್ರಸ್ತೆ

**ಕ್ಯೊಂಜರ್ (ಒಡಿಶಾ)(ಪಿಟಿಐ):** ‘ಕ್ಯೊಂಜರ್ ಜಿಲ್ಲೆಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗಾಗಿ 12 ಗಂಟೆಗಳ ಕಾಲ ಪೊಲೀಸ್ ವ್ಯಾನಿನಲ್ಲಿ ಕೂರಿಸಲಾಗಿತ್ತು’ ಎಂದು ಸಂತ್ರಸ್ತೆಯ ಸಂಬಂಧಿಕರು ದೂರಿದ್ದಾರೆ.

ಜನವರಿ 18ರಂದು ಸಂಬಂಧಿಕರ ಮನೆಗೆ ತೆರಳಿದ್ದ ಸಂತ್ರಸ್ತೆಯು ತಮ್ಮ ಸಂಬಂಧಿಯೊಬ್ಬರ ಜತೆಗೆ ಮನೆಗೆ ಹಿಂತಿರುಗುತ್ತಿದ್ದಾಗ ಆಕೆಯನ್ನು ಮೂವರು ಯುವಕರು ಗೋಹಿರಾ ಬಾಯಿ ಪ್ರದೇಶದಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದ್ದರು.

ಈ ಬಗ್ಗೆ ಇಲ್ಲಿನ ಸೊಸೊ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿತ್ತು. ಅಂದು ಬೆಳಿಗ್ಗೆಯೇ ಸಂತ್ರಸ್ತೆಯನ್ನು ಪೊಲೀಸ್ ವ್ಯಾನಿನಲ್ಲಿ ಆನಂದಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅತ್ಯಾಚಾರ ನಡೆದ ಸ್ಥಳವು ಸಲಾನಿಯಾ ಸಮುದಾಯ ಆರೋಗ್ಯ ಕೇಂದ್ರ (ಸಿಎಚ್‌ಸಿ) ವ್ಯಾಪ್ತಿಯಲ್ಲಿರುವುದರಿಂದ ವೈದ್ಯರು ಪರೀಕ್ಷೆ ನಡೆಸಲು ನಿರಾಕರಿಸಿದ್ದರು.

ಬಳಿಕ ಸಂತ್ರಸ್ತೆಯನ್ನು ಸಲಾನಿಯಾದ ಸಿಎಚ್‌ಸಿಗೆ ಕರೆದುಕೊಂಡು ಹೋದಾಗ ಅಲ್ಲಿ ಮಹಿಳಾ ವೈದ್ಯೆ ಇರಲಿಲ್ಲ. ಹಾಗಾಗಿ, ಆಕೆಯನ್ನು ಪೊಲೀಸ್ ವ್ಯಾನಿನಲ್ಲಿ ಕೂರಿಸಲಾಗಿತ್ತು. ಅಲ್ಲಿಂದ ಆಕೆಯನ್ನು ಪುನಃ ಆನಂದಪುರ ಆಸ್ಪತ್ರೆಗೆ ಕರೆತಂದು ಗುರುವಾರ ರಾತ್ರಿ 9.30ರ ವೇಳೆಗೆ ವೈದ್ಯಕೀಯ ಪರೀಕ್ಷೆಗೊಳಪಡಿಸಲಾಯಿತು.

‘ರಾತ್ರಿ ಹೊತ್ತು ಸಂಪೂರ್ಣವಾಗಿ ವೈದ್ಯಕೀಯ ಪರೀಕ್ಷೆ ನಡೆಸಲಾಗದು. ಹಾಗಾಗಿ, ಮರುದಿನ (ಶುಕ್ರವಾರ) ಬರಲು ನನಗೆ ಹೇಳಲಾಯಿತು’ ಎಂದೂ ಸಂತ್ರಸ್ತೆ ದೂರಿದ್ದಾರೆ.

‘ಸಲಾನಿಯಾ ಸಿಎಚ್‌ಸಿಯಲ್ಲಿ ಮಹಿಳಾ ವೈದ್ಯರಿಲ್ಲದ ಕಾರಣ, ಪುನಃ ಆಕೆಯನ್ನು ಆನಂದಪುರ ಸರ್ಕಾರಿ ಆಸ್ಪತ್ರೆಗೆ ಪರೀಕ್ಷೆಗಾಗಿ ಕರೆತರಲಾಯಿತು. ನಾವು ಸಹ ಅನಿವಾರ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉದ್ದೇಶಪೂರ್ವಕವಾಗಿ ವೈದ್ಯಕೀಯ ಪರೀಕ್ಷೆಯನ್ನು ವಿಳಂಬ ಮಾಡಿಲ್ಲ’ ಎಂದು ಸೊಸೊ ಠಾಣೆಯ ಇನ್‌ಸ್ಪೆಕ್ಟರ್ ಪ್ರದೀಪ್ ಕುಮಾರ್ ಸೇಠಿ ಹೇಳಿದ್ದಾರೆ.

## ಹಲ್ಲೆ: ಮಾಜಿ ಕಾರ್ಪೊರೇಟರ್ ವಿರುದ್ಧ ಪ್ರಕರಣ

**ರಾಮನಗರ:** ಕರ್ತವ್ಯನಿರತ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಿಬಿಎಂಪಿ ವಾರ್ಡ್ 185 (ಯಲೇಚನಹಳ್ಳಿ) ಮಾಜಿ ಕಾರ್ಪೊರೇಟರ್ ವಿ. ಬಾಲಕೃಷ್ಣ ಎಂಬುವರನ್ನು ಕಗ್ಗಲೀಪುರ ಪೊಲೀಸರು ಬಂಧಿಸಿದ್ದಾರೆ.

ಬಾಲಕೃಷ್ಣ ಜಮೀನು ವ್ಯಾಜ್ಯವೊಂದರ ಬಗ್ಗೆ ಮಾತನಾಡಲು ಗುರುವಾರ ಠಾಣೆಗೆ ಬಂದಿದ್ದರು. ಈ ವೇಳೆ ಅವರು ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ವಿಜಯ್‌ಕುಮಾರ್ ನಡುವೆ ಮಾತಿನ ಚಕಮಕಿ ನಡೆದಿದೆ. ಆರೋಪಿಯು ಪೊಲೀಸ್ ಅಧಿಕಾರಿ ಮೇಲೆ ಹಲ್ಲೆಗೆ ಮುಂದಾದರು ಎಂದು ದೂರಲಾಗಿದೆ.

## ಐಎಎಫ್ ಅಧಿಕಾರಿ ಬಂಧನ

**ನವದೆಹಲಿ (ಪಿಟಿಐ):** ದೆಹಲಿ-ಮುಂಬೈ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಹೊರಡುವುದನ್ನು ವಿಳಂಬಗೊಳಿಸಲು ಹುಸಿ ಬಾಂಬ್ ಕರೆ ಮಾಡಿದ್ದ ಆರೋಪದ ಮೇರೆಗೆ ಐಎಎಫ್ ಅಧಿಕಾರಿ ಸುನಿಲ್ ಸಾಂಗ್ವಾನ್ ಎಂಬುವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

## ಅಣ್ಣಾಮಲೈ ಎಲ್ಲ ಹೇಳಿದ್ದಾರೆ: ತೇಜಸ್ವಿ ಸೂರ್ಯ

**ಬೆಂಗಳೂರು:** ‘ಚೆನ್ನೈ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ನನ್ನ ಸಹ ಪ್ರಯಾಣಿಕರಾಗಿದ್ದ ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಎಲ್ಲವನ್ನೂ ಹೇಳಿದ್ದಾರೆ. ಈಗ ಮತ್ತೆ ಅದನ್ನೇ ಹೇಳಿ ಸಮಯ ವ್ಯರ್ಥ ಮಾಡಲು ಬಯಸುವುದಿಲ್ಲ’ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಹೇಳಿದರು.

2022ರ ಡಿಸೆಂಬರ್‌ನಲ್ಲಿ ಚೆನ್ನೈನಿಂದ ತಿರುಚಿನಾಪಳ್ಳಿಗೆ ಹೊರಟಿದ್ದ ವಿಮಾನದ ತುರ್ತು ನಿರ್ಗಮನ ದ್ವಾರ ತೆರೆದಿದ್ದ ಆರೋಪ ಕುರಿತು ಸುದ್ದಿಗಾರರು ಪ್ರಶ್ನಿಸಿದಾಗ ಸಿಟ್ಟಾದ ಅವರು, ‘ವಿಮಾನಯಾನ ಸಂಸ್ಥೆಯ ಅಧಿಕಾರಿಗಳು, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ ಅಧಿಕಾರಿಗಳು, ಅಣ್ಣಾಮಲೈ, ಇತರ ಇಬ್ಬರು ಸಹ ಪ್ರಯಾಣಿಕರು ಎಲ್ಲವನ್ನೂ ತಿಳಿಸಿದ್ದಾರೆ. ಅವರ ಹೇಳಿಕೆಯನ್ನು ಬೇಕಿದ್ದರೆ ಮತ್ತೊಮ್ಮೆ ನೋಡಿ’ ಎಂದರು. ‘ಈಗ ಕಾಂಗ್ರೆಸ್‌ನವರೋ, ಇನ್ಯಾರೋ ಕೇಳುತ್ತಾರೆಂದು ಪದೇ ಪದೇ ಹೇಳಿ ಸಮಯ ವ್ಯರ್ಥಮಾಡಲು ಬಯಸುವುದಿಲ್ಲ. ಸ್ಪಷ್ಟೀಕರಣವನ್ನು ಈಗಾಗಲೇ ಕೊಡಲಾಗಿದೆ’ ಎಂದು ಹೇಳಿದರು.



## ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ ಅಂತ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸರ್ಕಾರಿ ಶಿಕ್ಷಕರ ಸ್ಥಾನಮಾನ ನೀಡಿ, ಸೇವಾ ಭದ್ರತೆ ಒದಗಿಸಬೇಕು’ ಎಂದು ಒತ್ತಾಯಿಸಿ ನಡೆಸುತ್ತಿದ್ದ ಪ್ರತಿಭಟನೆಯನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಶನಿವಾರ ಅಂತ್ಯಗೊಳಿಸಿದ್ದಾರೆ.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಜ. 18ರಿಂದ ಪ್ರತಿಭಟನೆ ಆರಂಭವಾಗಿತ್ತು. ಶುಕ್ರವಾರ ಪ್ರತಿಭಟನಕಾರರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ರಾತ್ರಿ ಬಿಡುಗಡೆ ಮಾಡಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪುನಃ ಸೇರಿದ್ದ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಪ್ರತಿಭಟನೆ ಮುಂದುವರಿಸಿದ್ದರು.

ಮುಖಂಡರ ನಿಯೋಗದ ಜೊತೆ ಮಾತುಕತೆ ನಡೆಸಿದ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ‘ರಾಜ್ಯದ ಮಿನಿ ಅಂಗನವಾಡಿಗಳನ್ನು ಮೇಲ್ದರ್ಜೆಗೆ ಏರಿಸಲು ಹಾಗೂ ಕಾರ್ಯಕರ್ತೆಯರಿಗೆ ನೀಡುವ ವಿವಿಧ ಭತ್ಯೆಗಳನ್ನು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದಂತೆ, ಎಲ್ಲ ಬೇಡಿಕೆಗಳನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು. ಸದ್ಯ ಪ್ರತಿಭಟನೆ ಕೈಬಿಡಿ’ ಎಂದರು.

ಅದಕ್ಕೆ ಒಪ್ಪಿದ ಮುಖಂಡರು, ಪ್ರತಿಭಟನೆ ಅಂತ್ಯಗೊಳಿಸುವುದಾಗಿ ಘೋಷಿಸಿದರು. ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ಸಂಜೆಯೇ ತಮ್ಮೂರಿನತ್ತ ಹೊರಟರು.

## ಕಾವೇರಿ ನೀರು ಪೂರೈಕೆ: ನಾಳೆ ವ್ಯತ್ಯಯ

ಬೆಂಗಳೂರು: ವಿವಿಧ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ನಗರದ ಹಲವೆಡೆ ಜನವರಿ 23 ರಂದು ಕಾವೇರಿ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಚಂದ್ರಲೇಔಟ್, ಗಂಗೋಡನಹಳ್ಳಿ, ನಾಯಂಡನಹಳ್ಳಿ, ಮೆಟ್ರೊ ಲೇಔಟ್, ವಿನಾಯಕ ಲೇಔಟ್, ಮಾಗಡಿ ರಸ್ತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.



### ಅಂಗವಿಕಲ ಮಕ್ಕಳಿಗೆ ವಿಶೇಷ ಯೋಜನೆ ಅಗತ್ಯ: ರಕ್ಷಾ ರಾಮಯ್ಯ

# ಸ್ನೇಹದೀಪದಲ್ಲಿ ಸಾಂಸ್ಕೃತಿಕ ಕಲರವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸ್ನೇಹದೀಪ ಅಂಗವಿಕಲರ ಸಂಸ್ಥೆ’ ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಸಾಂಸ್ಕೃತಿಕ ಸಮಾವೇಶದಲ್ಲಿ ಅಂಗವಿಕಲ ಮಕ್ಕಳ ಗಾಯನ ಹಾಗೂ ನೃತ್ಯ ಮನಸೆಳೆಯಿತು. ಗಾಯನಕ್ಕೆ ಪ್ರೇಕ್ಷಕರು ಮನಸೋತರು. ದಿನವಿಡೀ ಸಾಂಸ್ಕೃತಿಕ ಕಲರವ ಕೇಳಿಬಂತು.

ಮಲ್ಲೇಶ್ವರದ ಜಲಮಂಡಳಿಯ ರಜತಭವನದಲ್ಲಿ ನಡೆದ ಸಮಾವೇಶದಲ್ಲಿ ವಿವಿಧೆಡೆಯಿಂದ 400ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡಿದ್ದರು.

ಸಮಾವೇಶಕ್ಕೆ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ, ‘ಈ ರೀತಿಯ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ಇವರು ಅಂಗವಿಕಲ ಮಕ್ಕಳು ಅಲ್ಲ; ವಿಶೇಷಚೇತನರು. ಎಲ್ಲರಿಗೂ ವಿಶೇಷ ಶಕ್ತಿ ಇರುತ್ತದೆ. ಎಲ್ಲ ರಂಗದಲ್ಲೂ ಅಂಗವಿಕಲರಿಗೆ ಸ್ಥಾನ ಸಿಗಬೇಕು’ ಎಂದು ಸಲಹೆ ನೀಡಿದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ರಾಜ್ಯಮಟ್ಟದ ಸಾಂಸ್ಕೃತಿಕ ಮತ್ತು ಪ್ರೇರಣಾ ಕಾರ್ಯಕ್ರಮದಲ್ಲಿ ಸ್ಪರ್ಧಿಗಳು ಭರತನಾಟ್ಯ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

‘ಅಂಗವಿಕಲರು ಸ್ವಾವಲಂಬಿಯಾಗಿ ಬದುಕು ನಡೆಸಬೇಕಿದ್ದು, ಸರ್ಕಾರವು ಉತ್ತಮ ಯೋಜನೆ ಜಾರಿಗೊಳಿಸಬೇಕು’ ಎಂದು ಅಭಿಪ್ರಾಯಪಟ್ಟರು.

‘ಸಮಾಜಮುಖಿಯಾಗಿ ಬದುಕು ನಡೆಸಲು ಸ್ನೇಹದೀಪ ಸಂಸ್ಥೆಯು ವೇದಿಕೆ ಕಲ್ಪಿಸಿಕೊಟ್ಟಿದೆ’ ಎಂದು ಹೇಳಿದರು.

ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕ ಧರ್ಮದರ್ಶಿ ಡಾ.ಪಾಲ್ ಮುದ್ದಾ ಮಾತನಾಡಿ, ‘ಈ ವರ್ಷ ನಿರಂತರ ಕಾರ್ಯಕ್ರಮ ನಡೆಸುತ್ತಾ ಬರುತ್ತಿದ್ದೇವೆ. ಪ್ರತಿಭಾನ್ವಿತರಿಗೆ ವೇದಿಕೆ ಕಲ್ಪಿಸುತ್ತಿದ್ದೇವೆ. ಶಮಾನೋತ್ಸವ ಸಮಾರಂಭವು ತುಂಬ ಖುಷಿ ನೀಡಿದೆ’ ಎಂದರು.

ಸಂಸ್ಥೆಯ ಧರ್ಮದರ್ಶಿ ಕೆ.ಜಿ. ಮೋಹನ್ ಹಾಜರಿದ್ದರು.

### ಭಾಗೀರಥಿ ಹೆಗಡೆಗೆ ಶ್ರೀಮತಿ ಸರಳಾ ರಂಗನಾಥ್ ರಾವ್ ಪ್ರಶಸ್ತಿ ಪ್ರದಾನ

# ‘ಸ್ತ್ರೀವಾದ ಬರಹ ಎಂದರೆ ಪುರುಷ ದ್ವೇಷವಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸ್ತ್ರೀವಾದ ಅಂದರೇ ಪುರುಷ ದ್ವೇಷವಲ್ಲ. ಹೆಣ್ಣಿಗೆ ಗಂಡು, ಗಂಡಿಗೆ ಹೆಣ್ಣು ಅನಿವಾರ್ಯ ಮತ್ತು ಅಗತ್ಯ. ಸ್ತ್ರೀವಾದ, ಪುರುಷವಾದಕ್ಕಿಂತ ಮಾನವತಾವಾದ ದೊಡ್ಡದು’ ಎಂದು ಲೇಖಕಿ ಭಾಗೀರಥಿ ಹೆಗಡೆ ಹೇಳಿದರು.

ಕವಿತಾ ಪ್ರಕಾಶನದ ಸಹಯೋಗದಲ್ಲಿ ಶ್ರೀಮತಿ ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನವು ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ಅವರು ‘ಶ್ರೀಮತಿ ಸರಳಾ ರಂಗನಾಥ ರಾವ್ ಪ್ರಶಸ್ತಿ’ ಸ್ವೀಕರಿಸಿ, ಮಾತನಾಡಿದರು. ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ.

‘ನನಗೆ ಸ್ತ್ರೀವಾದಿ ಲೇಖಕಿ ಎನ್ನುತ್ತಾರೆ. ಹೆಣ್ಣು ಜೀವದ ಅನುಭವಗಳನ್ನು ನನ್ನ ಕೃತಿಯಲ್ಲಿ ಬರೆದಿರುವೆ. ನನ್ನ ‘ಕಾಲಾಂತರ’ ಕಾದಂಬರಿಯಲ್ಲಿ ಮೂರು ತಲೆಮಾರಿನ ಹೆಣ್ಣನ್ನು ಕಾಣಬಹುದು. ನನ್ನ ಬರಹಗಳಿಗೆ ಮೂಲ ಪ್ರೇರಣೆ ಬಾಲ್ಯದಿಂದ ಮನಸ್ಸಿನಲ್ಲಿ ಸಂಗ್ರಹವಾದ ನೆನಪುಗಳು. ನಾನು 5ನೇ ತರಗತಿ ಬಳಿಕ ಶಾಲೆಯನ್ನು ತೊರೆದಿದ್ದೆ. ಅಣ್ಣನ ಪ್ರೋತ್ಸಾಹದಿಂದ ಬಳಿಕ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದು, ತೇರ್ಗಡೆಯಾದೆ. ಸಂಪ್ರದಾಯದ ಹಾಡುಗಳನ್ನು ಅಮ್ಮ ಬರೆಯುತ್ತಿದ್ದರು. ನಾನೂ ಬರೆಯಲಾರಂಭಿಸಿದೆ. ಬಳಿಕ ಕವಿತೆ, ಕಥೆ, ಕಾದಂಬರಿಯನ್ನು ಬರೆದೆ’ ಎಂದು ಹೇಳಿದರು.

ಕವಿ ಎಚ್.ಎಸ್. ವೆಂಕಟೇಶಮೂರ್ತಿ ‘ಹೆಣ್ಣು ಮಕ್ಕಳು ಕಾದಂಬರಿ ಬರೆದಾಗ ತಮ್ಮ ಖಾಸಗಿ ಭಾಷಾ ವಲಯವನ್ನು ಬರವಣಿಗೆಯಲ್ಲಿ ಬಳಸುವುದು ಬಹಳ ಕಡಿಮೆ. ಭಾಗೀರಥಿ ಹೆಗಡೆ ಅವರು ಕಥೆಗಾರಿಕೆ ಹಾಗೂ ಭಾಷೆಯನ್ನು ಸಂಬಾಳಿಸಿಕೊಂಡು ಹೋಗಿದ್ದಾರೆ. ಹವ್ಯಕ ಕನ್ನಡದ ಚೆಲುವು ಅವರ ಕಾದಂಬರಿ ಓದಿದಾಗ ಮನವರಿಕೆಯಾಯಿತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿನಂದನಾ ಭಾಷಣ ಮಾಡಿದ ವಿಮರ್ಶಕಿ ಎಲ್.ಜಿ. ಮೀರಾ, ‘ಭಾಗೀರಥಿ ಹೆಗಡೆ ಅವರು 17 ಪುಸ್ತಕಗಳನ್ನು ಬರೆದಿದ್ದಾರೆ. ಈ ಕೃತಿಗಳ ಹಿಂದೆ ಅವರ ಜೀವನವಿದೆ. ಹಲವು ಸವಾಲುಗಳ ನಡುವೆ ಪುಸ್ತಕ ಬರೆಯಲು ಹರಸಾಹಸ ಪಟ್ಟಿದ್ದಾರೆ. ದಣಿವಿರದ, ಸಾಹಿತ್ಯ ಶ್ರಮಕ್ಕೆ ಈಗ ಅವರಿಗೆ ಗೌರವ ಸಿಕ್ಕಿದೆ’ ಎಂದು ಹೇಳಿದರು.

ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಜಿ.ಎನ್. ರಂಗನಾಥ ರಾವ್ ಅವರ ‘ನಿನ್ನೆಯ ನಾಳೆಗಳು’ ಮತ್ತು ‘ಅಂತರ್ಯಾನ’ ಕೃತಿಗಳನ್ನು ಕಥೆಗಾರ ಮಾವಿನಕೆರೆ ರಂಗನಾಥನ್ ಲೋಕಾರ್ಪಣೆ ಮಾಡಿದರು. ಕೃತಿಗಳ ಬಗ್ಗೆ ವಿಮರ್ಶಕಿ ಎಂ.ಎಸ್. ಆಶಾದೇವಿ ಹಾಗೂ ಕವಿ ಚಿಂತಾಮಣಿ ಕೊಡ್ಲೆಕೆರೆ ಮಾತನಾಡಿದರು.



ಭಾಗೀರಥಿ ಹೆಗಡೆ ಅವರಿಗೆ ಶ್ರೀಮತಿ ಸರಳಾ ರಂಗನಾಥ ರಾವ್ ಪ್ರಶಸ್ತಿ’ಯನ್ನು ಜಿ.ಎನ್. ರಂಗನಾಥ ರಾವ್ ಪ್ರದಾನ ಮಾಡಿದರು.ಎಚ್.ಎಸ್. ವೆಂಕಟೇಶಮೂರ್ತಿ, ಮಾವಿನಕೆರೆ ರಂಗನಾಥನ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಹಾಗೂ ಎಲ್.ಜಿ. ಮೀರಾ ಇದ್ದಾರೆ –ಪ್ರಜಾವಾಣಿ ಚಿತ್ರ

# ಬಾಯ್ತೆರೆಯಲು ಕಾದಿದೆ ಸಹ್ಯಾದ್ರಿ

ಒಂದನೇ ಪುಟದಿಂದ

**ಪಶ್ಚಿಮಘಟ್ಟದಲ್ಲಿ ಏನಾಗುತ್ತಿದೆ?:** ಪಶ್ಚಿಮಘಟ್ಟದಲ್ಲಿ ಏನಾಗುತ್ತಿದೆ ಮತ್ತು ಭವಿಷ್ಯದಲ್ಲಿ ಯಾವ ರೀತಿಯ ಅಪಾಯಗಳು ಎದುರಾಗಬಹುದು ಎಂಬುದನ್ನು ವಿಜ್ಞಾನಿ ಡಾ.ಮಾಧವ್ ಗಾಡ್ಗೀಳ್ ತಮ್ಮ ವರದಿಯಲ್ಲಿ ಹೇಳಿದ್ದರು. ಅದೇ ಪ್ರಕಾರ; ಕೇರಳ, ಕರ್ನಾಟಕದ ಪಶ್ಚಿಮಘಟ್ಟದ ಹಲವು ಭಾಗಗಳಲ್ಲಿ ಭಾರೀ ಪ್ರಮಾಣದ ಪ್ರವಾಹ ಮತ್ತು ಭೂಕುಸಿತಗಳು ಸಂಭವಿಸಿವೆ. ಮುಂದಿನ ದಿನಗಳಲ್ಲಿ ಈ ವಿದ್ಯಮಾನ ಸಂಭವಿಸುತ್ತಲೇ ಇರುತ್ತದೆ. ಹವಾಮಾನ ಬದಲಾವಣೆಯಿಂದ ಮಳೆ, ಪ್ರವಾಹ, ಭೂಕುಸಿತ ನಿರಂತರ ಎಂಬುದು ವಿಜ್ಞಾನಿಗಳ ಮಾತು.

ರಾಜಕಾರಣಿಗಳು, ಟಿಂಬರ್, ಗಣಿ ಮಾಫಿಯಾಗಳು ಪಶ್ಚಿಮಘಟ್ಟದ ಸಂಪತ್ತು ಇರುವುದೇ ಭೋಗಕ್ಕೆ, ಲೂಟಿಗೆ ಎಂದು ಭಾವಿಸಿದಂತಿದೆ. ಆದರೆ, ಇಲ್ಲಿ ಲಕ್ಷಾಂತರ ವರ್ಷಗಳಿಂದ ಉಳಿದುಕೊಂಡು ಬಂದಿರುವ ಜೀವ ವೈವಿಧ್ಯವಿವೆ. ವಿಶೇಷವಾಗಿ ಕಪ್ಪೆಗಳು, ಮೀನುಗಳು, ಹಾವುಗಳು ಸೇರಿ ಹಲವು ಬಗೆಯ ಜೀವಜಂತುಗಳು, ಸಸ್ಯ ಪ್ರಭೇದಗಳಿವೆ. ಪಶ್ಚಿಮಘಟ್ಟ ಪರ್ವತಗಳ ಶ್ರೇಣಿಯ ಸಂರಚನೆ ವಿಶಿಷ್ಟ ಮತ್ತು ಬಲು ಸೂಕ್ಷ್ಮವಾದುದು. ಲಕ್ಷಗಟ್ಟಲೆ ವರ್ಷಗಳಿಂದ ವಿಕಸನಗೊಂಡು ಬಂದಿರುವ ಅಮೂಲ್ಯ ಜೀವ ವೈವಿಧ್ಯಗಳ ಸೂಕ್ಷ್ಮತಾಣಗಳಿಗೆ ಭಾರೀ ಪ್ರಮಾಣದಲ್ಲಿ ಗಾಸಿಯಾಗುತ್ತಿದೆ. ವಿಶ್ವ ಜೈವಿಕ ವೈವಿಧ್ಯಗಳ ಪ್ರಮುಖ ಎಂಟು ತಾಣಗಳಲ್ಲಿ ಪಶ್ಚಿಮಘಟ್ಟವೂ ಒಂದು ಎಂದು ಯುನೆಸ್ಕೋ ಗುರುತಿಸಿದೆ. ದೇಶದ ಶೇ 30ರಷ್ಟು ಸರೀಸೃಪ, ಉಭಯಚರ, ಮೀನುಗಳು, ಪಕ್ಷಿಗಳು ಮತ್ತು ಸಸ್ತನಿಗಳ ಪ್ರಭೇದಗಳು ಇಲ್ಲಿಯೇ ಇವೆ.

ದಖ್ಖನ್ ಪ್ರಸ್ಥಭೂಮಿಯ ಉಳಿದ ಭೂಪ್ರದೇಶಗಳಿಗೆ ಹೋಲಿಸಿದರೆ ಪಶ್ಚಿಮಘಟ್ಟಗಳಲ್ಲಿ ಶಿಥಿಲೀಕರಣ (ಕಲ್ಲು ಮಣ್ಣಾಗುವುದು) ಪ್ರಕ್ರಿಯೆ ಹೆಚ್ಚು. ಹೀಗಾಗಿ ಉಳಿದ ಕಡೆಗಳಿಗಿಂತ ಇಲ್ಲಿ ಮಣ್ಣಿನ ಪದರ ಹೆಚ್ಚು ದಪ್ಪ. ನೂರಾರು ಅಡಿಗಳಷ್ಟು ಮಣ್ಣು ಇರುತ್ತದೆ. ಪಶ್ಚಿಮಘಟ್ಟದ ಜಿಲ್ಲೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ವಾಡಿಕೆಗಿಂತ ಮೂರು ಪಟ್ಟು ಹೆಚ್ಚು ಮಳೆ ಆಗುತ್ತಿರುವ ಕಾರಣ ಸಹಜವಾಗಿ ಇಲ್ಲಿನ ಭೂಪ್ರದೇಶದ ಮೇಲೆ ಒತ್ತಡ ಹೆಚ್ಚಾಗಿದೆ. ಹಾಗಾಗಿ ಅಲ್ಲಲ್ಲಿ ಭೂಕುಸಿತಗಳು ಉಂಟಾಗುತ್ತಿವೆ.

ಈ ಘಟ್ಟ ಪ್ರದೇಶಗಳಲ್ಲಿ ಅತಿಯಾದ ಮಾನವ ಹಸ್ತಕ್ಷೇಪ, ಚಟುವಟಿಕೆಯಿಂದಾಗಿ ಭೂಮಿಯ ಹೊರಕವಚ ಸಂಪೂರ್ಣ ಬದಲಾಗುತ್ತಿದೆ. ಇಲ್ಲಿ ಈ ಹಿಂದೆ, ಮೇಲ್ಮೈ ಸಂರಚನೆಗೆ ಅನುಗುಣವಾಗಿ ದಟ್ಟಾರಣ್ಯ, ಪೊದೆ, ಹುಲ್ಲುಹಾಸುಗಳ ಹದವಾದ ಮಿಶ್ರಣವಿತ್ತು. ಇತ್ತೀಚೆಗೆ ಇಲ್ಲಿ ರಸ್ತೆ ನಿರ್ಮಾಣ, ರೆಸಾರ್ಟ್, ಕಟ್ಟಡಗಳ ನಿರ್ಮಾಣ, ತೋಟಗಳ ವಿಸ್ತರಣೆಗೆ ಗುಡ್ಡಗಳನ್ನು ಬೇಕಾಬಿಟ್ಟಿ ಕತ್ತರಿಸಲಾಗಿದೆ. ಕಲ್ಲುಕ್ವಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಕಾಫಿ, ರಬ್ಬರ್, ಶುಂಠಿ ಬೆಳೆಸಲು ಕಾಡುಗಳನ್ನು ಕಡಿಯಲಾಗಿದೆ. ಇದರಿಂದಾಗಿ ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚು ನೀರು ಭೂಮಿಯೊಳಗೆ ಇಂಗದಂತೆ ತಡೆಯುವ ಹುಲ್ಲುಹಾಸುಗಳು ಮಾಯವಾಗಿವೆ. ಭಾರಿ ಮಳೆಯಾಗಿದ್ದರಿಂದ ಭೂಮಿಯ ಆಳಕ್ಕೆ ಇಂಗುವ ನೀರಿನ ಪ್ರಮಾಣವೂ ಹೆಚ್ಚಿದೆ. ಇದು ಮಣ್ಣಿನ ಪದರ ಸಡಿಲಗೊಳ್ಳುವುದಕ್ಕೆ ಕಾರಣ. ನೀರಿನ ಹರಿವಿನಿಂದ ಹೆಚ್ಚು ಒತ್ತಡ ಸೃಷ್ಟಿಯಾಗಿರುವ ಕಡೆ ಭೂಕುಸಿತ ಉಂಟಾಗಿದೆ ಎಂದು ವಿಶ್ಲೇಷಿಸುತ್ತಾರೆ ವಿಜ್ಞಾನಿಗಳು.

ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದಲ್ಲಿ ಹರಿಯುವ ನದಿ, ತೊರೆಗಳನ್ನು ಮಾತ್ರ ನಾವು ನೋಡುತ್ತೇವೆ. ವಾಸ್ತವದಲ್ಲಿ ನದಿಗಳು ಆಳ ಶಿಲಾಪದರದ ಬಿರುಕುಗಳ ಮೂಲಕ ಅಂತರ್ಗಾಮಿಯಾಗಿಯೂ ಪ್ರವಹಿಸುತ್ತವೆ. ಮೇಲ್ಮೈನಿಂದ ಒಂದೆರಡು ಕಿಲೊಮೀಟರ್ ಆಳದಲ್ಲೂ ನೀರಿನ ಹರಿವು ಇರುತ್ತವೆ. ಭೌಗೋಳಿಕ ಬದಲಾವಣೆಗಳು ನದಿಯ ಹರಿವಿನ ದಿಕ್ಕನ್ನೂ ಬದಲಾಯಿಸುತ್ತಿವೆ. ಪಶ್ಚಿಮಘಟ್ಟದಲ್ಲೂ ಈ ವಿದ್ಯಮಾನ ಕಾಣಬಹುದು. ಕಣ್ಣಿಗೆ ಕಾಣಿಸದೆ ಒಳಗೊಳಗೇ ಹರಿಯುವ ನೀರು ಕೂಡಾ ಭೂಕುಸಿತಕ್ಕೆ ಕಾರಣ. ಸಾವಿರಾರು ಎಕರೆ ಪ್ರದೇಶದಲ್ಲಿ ಕಾಫಿ ತೋಟಗಳ ವಿಸ್ತರಣೆ ಕೂಡ ಇಲ್ಲಿ ಭೂಮಿಯ ಸಂರಚನೆ ವ್ಯತ್ಯಯ ಉಂಟಾಗುವುದಕ್ಕೆ ಕಾರಣವಾಗಿದೆ. ಬೆಟ್ಟದ ತುದಿಯನ್ನು ಕತ್ತರಿಸಿ ರೆಸಾರ್ಟ್ ಮತ್ತು ಕೆರೆ–ಕೊಳ್ಳಗಳನ್ನು ನಿರ್ಮಿಸಲಾಗುತ್ತಿದೆ.

'ಕರಾವಳಿ ಮತ್ತು ಮಲೆನಾಡನ್ನು ಒಳಗೊಂಡ ಪಶ್ಚಿಮಘಟ್ಟದಲ್ಲಿ ನಾಲ್ಕು ದಶಕಗಳಿಂದ ಅವ್ಯಾಹತವಾಗಿ ಅರಣ್ಯ ನಾಶ ನಡೆದಿರುವುದರಿಂದ ಇಲ್ಲಿನ ಭೂಪ್ರದೇಶ ಟೊಳ್ಳಾಗಿದೆ' ಎನ್ನುತ್ತಾರೆ ಸಂರಕ್ಷಣೆ ಜೀವಶಾಸ್ತ್ರಜ್ಞ ಕೇಶವ ಕೊರ್ಸೆ.

ಈ ಪ್ರದೇಶದ ಉಷ್ಣ ವಲಯದ ಕಾಡುಗಳನ್ನು ಕಡಿದಾಗ ಮಣ್ಣಿನಡಿಯೇ ಉಳಿಯುವ ಬೃಹತ್ ಗಾತ್ರದ ಮರಗಳ ಬೇರುಗಳು ಕೊಳೆತು ಮಣ್ಣಾಗಲು ಕನಿಷ್ಠ 25 ರಿಂದ 30 ವರ್ಷಗಳು ಬೇಕಾಗುತ್ತದೆ. ಈಗ ಈ ಪ್ರದೇಶಗಳಲ್ಲೆಲ್ಲ ಮಣ್ಣಿನಡಿ ಬೇರುಗಳು ಕೊಳೆತು ವಿಶಾಲ ರಂಧ್ರಗಳು ನಿರ್ಮಾಣವಾಗುತ್ತಿವೆ. ಇದಕ್ಕೆ ಪ್ರತಿಯಾಗಿ ಮೇಲ್ಮೈನಲ್ಲಿ ಮತ್ತೆ ಸಹಜ ಕಾಡುಗಳನ್ನು ಬೆಳೆಸುವ ಪ್ರಯತ್ನಗಳಂತೂ ನಡೆದಿಲ್ಲ. ಬಹುಪಾಲು ಪ್ರದೇಶಗಳು ರಸ್ತೆ, ಮನೆ, ಪಟ್ಟಣ, ಕೈಗಾರಿಕೆ ಮತ್ತು ಕೃಷಿ ಪ್ರದೇಶಗಳಾಗಿವೆ.

'ವಿಶಾಲ ರಂಧ್ರಗಳಲ್ಲಿ ಮಳೆ ನೀರು ತುಂಬಿಕೊಂಡು ಮಣ್ಣು ಸಡಿಲವಾಗಿ ಭೂಕುಸಿತಕ್ಕೆ ಕಾರಣವಾಗಿದೆ. ಹೀಗಾಗಿ ಭೂಕುಸಿತದ ಸಾಧ್ಯತೆಗಳು ಹೆಚ್ಚುತ್ತಲೇ ಇವೆ. ಹಲವು ವರ್ಷಗಳ ಅರಣ್ಯ ನಾಶದ ಒಟ್ಟು ಪರಿಣಾಮವೇ ಇದಾಗಿದೆ' ಎನ್ನುತ್ತಾರೆ ಕೊರ್ಸೆ.

ಕೊಡಗು ಜಿಲ್ಲೆ ರೆಸಾರ್ಟ್‌ಗಳಿಂದ ತುಂಬಿಹೋಗಿದೆ. ಅದರಿಂದ ನಿಸರ್ಗಕ್ಕೆ ಆದ ಹಾನಿ ಊಹಿಸುವುದೂ ಕಷ್ಟ. ನಿಸರ್ಗದ ನಿಯಮವನ್ನು ಉಲ್ಲಂಘಿಸುತ್ತಿರುವುದೂ ಅಲ್ಲದೇ, ಕಾಡು ಉಳಿಸುವವರೇ ನಾವು, ಪರಿಸರ ವಿಜ್ಞಾನಿಗಳಿಗೇನು ಗೊತ್ತು ಎಂದು ಮಾಧವ ಗಾಡ್ಗೀಳ್ ಅಂತಹವರನ್ನೇ ಪ್ರಶ್ನಿಸಿದವರೂ ಇದ್ದಾರೆ.

ಹಾಸನ ಜಿಲ್ಲೆಯ ಸಕಲೇಶಪುರದ ಈ ದೃಷ್ಟಾಂತ ಗಮನಿಸಿ, ಇಲ್ಲಿ ಆರು ಜಲ ವಿದ್ಯುತ್ ಯೋಜನೆಗಳು ತಲೆ ಎತ್ತಿವೆ. ಧಾರಾಕಾರ ಮಳೆ ಸುರಿಯುವುದರಿಂದ ಇಲ್ಲಿಯ ಮಣ್ಣು ಮೃದು. ದಟ್ಟ ಮಳೆ ಕಾಡಿನಿಂದಾಗಿ ಬೇರುಗಳು ಮಣ್ಣನ್ನು ಹಿಡಿದಿಟ್ಟುಕೊಳ್ಳುತ್ತವೆ. ಜೊತೆಗೆ ಧಾರಾಕಾರವಾಗಿ ಮಳೆ ಸುರಿದರೂ ಸಹ ಅಷ್ಟೇ ವೇಗವಾಗಿ ಸಮುದ್ರದತ್ತ ಹರಿದು ಹೋಗುತ್ತಿದ್ದುದರಿಂದ ಇದುವರೆಗೂ ಈ ಭಾಗದಲ್ಲಿ ಭೂಕುಸಿತದ ಸಮಸ್ಯೆ ಇರಲಿಲ್ಲ. ಜಲವಿದ್ಯುತ್ ಯೋಜನೆಗಳು, ಎತ್ತಿನಹೊಳೆ ತಿರುವು ಯೋಜನೆಗಾಗಿ ಹರಿಯುವ ನೀರನ್ನು ಡ್ಯಾಂ ಕಟ್ಟಿ ತಡೆದು ನಿಲ್ಲಿಸಲಾಗಿದೆ. ಒಂದೆಡೆ ನೀರಿನ ಒತ್ತಡ ಹೆಚ್ಚಾಗುತ್ತಿದೆ. ಜೊತೆಗೆ ನಿಂತ ನೀರಿನಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿ ಭೂಮಿ ಕುಸಿಯುವ ಹಾಗೂ ಇಳಿಜಾರಿನತ್ತ ಜರುಗುವ ಸಾಧ್ಯತೆ ಹೆಚ್ಚು. ಈಗ್ಗೆ ಎರಡು– ಮೂರು ವರ್ಷಗಳ ಹಿಂದೆ ಒಣಗೂರು, ಕಾಡುಮನೆ, ನಡಹಳ್ಳಿಗಳಲ್ಲಿ ಭೂಕುಸಿತ ಉಂಟಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿ 2021 ರ ಜುಲೈನಲ್ಲಿ ಭಾರಿ ಪ್ರಮಾಣದ ಭೂಕುಸಿತ ಸಂಭವಿಸಿ ಇಡೀ ಗ್ರಾಮವೇ ಇಬ್ಭಾಗವಾಗಿತ್ತು. 2022 ರ ಆಗಸ್ಟ್‌ನಲ್ಲಿ ಭಟ್ಕಳ ತಾಲ್ಲೂಕಿನ ಮುಟ್ಟಳ್ಳಿಯಲ್ಲಿ ಭೂಕುಸಿತ ಸಂಭವಿಸಿ ನಾಲ್ವರು ಮೃತಪಟ್ಟಿದ್ದರು. ಈ ಘಟನೆಗಳು ಪಶ್ಚಿಮಘಟ್ಟದಲ್ಲಿ ಭೂಕುಸಿತದ ಗಂಭೀರತೆಯನ್ನು ಎತ್ತಿ ತೋರಿಸಿದ್ದವು.

2017 ರಿಂದ 2020 ರ ನಡುವಿನ ಅವಧಿಯಲ್ಲಿ ಜಿಲ್ಲೆಯ ಶಿರಸಿ, ಯಲ್ಲಾಪುರ, ಅಂಕೋಲಾ ಮತ್ತು ಸಿದ್ದಾಪುರ ತಾಲ್ಲೂಕುಗಳ ಸುಮಾರು 8 ಕಡೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿದ್ದವು. ಕರಾವಳಿ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯ ಪರಿಣಾಮ ಮಳೆಗಾಲದ ವೇಳೆ ಅಲ್ಲಲ್ಲಿ ಭೂಕುಸಿತಗಳು ನಡೆಯುತ್ತಲೇ ಇವೆ.

ಸೂಕ್ಷ್ಮ ಪ್ರದೇಶವಾಗಿದ್ದರೂ ಜಿಲ್ಲೆಯಲ್ಲಿ 17 ಕಲ್ಲು ಕ್ವಾರಿಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ. ಪ್ರತಿ ವರ್ಷ ಸರಾಸರಿ 5 ರಿಂದ 6 ಕ್ವಾರಿಗಳನ್ನು ಆರಂಭಿಸಲು ಅರ್ಜಿಗಳು ಸಲ್ಲಿಕೆಯಾಗುತ್ತಿವೆ. 2019 ರಲ್ಲಿ ಜಿಲ್ಲೆಯಲ್ಲಿ 30,548 ಹೆಕ್ಟೇರ್ ಇದ್ದ ಅಡಿಕೆ ತೋಟದ ಪ್ರಮಾಣ ಮೂರೇ ವರ್ಷಕ್ಕೆ 33,364 ಹೆಕ್ಟೇರ್ ಗೆ ಏರಿಕೆಯಾಗಿದೆ. ದಶಕದ ಹಿಂದೆ ಈ ಪ್ರಮಾಣ ಅರ್ಧಕ್ಕಿಂತಲೂ ಕಡಿಮೆ ಇತ್ತು. ಪರಿಸರ ಸೂಕ್ಷ್ಮ ಪ್ರದೇಶ ಆಗಿರುವ ಕಾರಣ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲೆಯಲ್ಲಿ ಅವಕಾಶ ಸಿಕ್ಕಿಲ್ಲ.

ಈ ಪ್ರದೇಶವೆಲ್ಲ ಈಗ ಆತಂಕಕ್ಕೆ ಸಿಲುಕಿವೆ. ನೆರವಿಗೆ ಮೊರೆಯಿಡುತ್ತಿದೆ ಪಶ್ಚಿಮ ಘಟ್ಟ.

**(ಪೂರಕ ಮಾಹಿತಿ: ಸಚ್ಚಿದಾನಂದ ಕುರುಗುಂದ, ಗಣಪತಿ ಹೆಗಡೆ, ಜಾನೇಕೆರೆ ಆರ್. ಪರಮೇಶ್/ಕೆ.ಎಸ್.ಗಿರೀಶ)**



ಬೆಳ್ತಂಗಡಿ ತಾಲ್ಲೂಕಿನ ದಿಡುಪೆ ಭಾಗದಲ್ಲಿ ಉಂಟಾಗಿರುವ ಭೂಕುಸಿತ

## ಭವಿಷ್ಯದಲ್ಲಿ ಭೂಕುಸಿತ: ಎಲ್ಲೆಲ್ಲಿ ಸಾಧ್ಯತೆ?

- ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ (ಕೊಡಗು ಜಿಲ್ಲೆ)
- ಸಕಲೇಶಪುರ (ಹಾಸನ ಜಿಲ್ಲೆ)
- ಸಾಗರ (ಶಿವಮೊಗ್ಗ ಜಿಲ್ಲೆ)
- ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ,-ಸಿದ್ದಾಪುರ, ಶಿರಸಿ,ಯಲ್ಲಾಪುರ ಮತ್ತು ಜೋಯ್ಡಾ (ಉತ್ತರಕನ್ನಡ ಜಿಲ್ಲೆ)
- ಕಾರ್ಕಳ (ಉಡುಪಿ ಜಿಲ್ಲೆ)
- ಬೆಳ್ತಂಗಡಿ, ಬಂಟ್ವಾಳ,ಪುತ್ತೂರು,ಸುಳ್ಯ ಮತ್ತು ಮಂಗಳೂರು (ದಕ್ಷಿಣಕನ್ನಡ ಜಿಲ್ಲೆ)
- ಕುಂದಾಪುರ ತಾಲ್ಲೂಕು(ಉಡುಪಿ ಜಿಲ್ಲೆ)
- ತೀರ್ಥಹಳ್ಳಿ, ಹೊಸನಗರ ತಾಲ್ಲೂಕು (ಶಿವಮೊಗ್ಗ ಜಿಲ್ಲೆ)
- ಖಾನಾಪುರ ತಾಲ್ಲೂಕು(ಬೆಳಗಾವಿ ಜಿಲ್ಲೆ) ಭೂಕುಸಿತವಾಗುವ ಬಗ್ಗೆ ಸೂಕ್ಷ್ಮ ಪ್ರದೇಶ ಎಂದು ಗುರುತಿಸಬೇಕಾಗಿದೆ)
- ಜಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ (ಜಿಎಸ್‌ಐ) 25 ತಾಲ್ಲೂಕುಗಳಲ್ಲಿ ಎಂಟು ನೂರಕ್ಕೂ ಸ್ಥಳಗಳನ್ನು 'ಭೂಕುಸಿತದ ಸಾಧ್ಯತೆಗಳಿರುವ ಪ್ರದೇಶ' ಎಂದು ಗುರುತಿಸಿದೆ.
- ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ (ಜಿಎಸ್‌ಐ), ನ್ಯಾಷನಲ್ ಜಿಯೋ ಫಿಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಎನ್‌ಜಿಆರ್‌ಎಫ್), ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್ (ಎನ್‌ಐಆರ್‌ಎಂ) ಹಾಗೂ ಅಮೃತ ವಿಶ್ವವಿದ್ಯಾನಿ-ಲಯದ ತಜ್ಞರಿಂದ ಕರ್ನಾಟಕದಲ್ಲಿನ ಭೂಕಂಪ, ಭೂಕುಸಿತ ಕುರಿತು ಅಧ್ಯಯನಗಳು ನಡೆಯುತ್ತಿವೆ ಎನ್ನುತ್ತಾರೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿರ್ದೇಶಕ ಡಾ.ಮನೋಜ್ ರಾಜನ್.

## ಜೋಶಿಮಠದ ದುರಂತಕ್ಕೆ ಕಾರಣ ಏನು?

ನವದೆಹಲಿ: ಉತ್ತರಾಖಂಡದ ಜೋಶಿಮಠದ ಈಗಿನ ದುರಂತಕ್ಕೆ ಪ್ರಕೃತಿ ಮೇಲೆ ಮಾನವನ ವಿಪರೀತ ಹಸ್ತಕ್ಷೇಪವೇ ಕಾರಣ ಎಂದು ತಜ್ಞರು ಬೊಟ್ಟು ಮಾಡುತ್ತಾರೆ.

ಹಿಮಾಲಯ ಪರ್ವತಶ್ರೇಣಿಯ ಪದತಲದಲ್ಲಿ ಜೋಶಿಮಠ ಹಾಗೂ ಸುತ್ತಮುತ್ತಲಿನ ಪ್ರದೇಶ ಇದೆ. ಲಕ್ಷಾಂತರ ವರ್ಷಗಳ ಹಿಂದೆ ಭಾರೀ ಪರ್ವತವೊಂದು ಕುಸಿದು ಕ್ರಮೇಣ ಗಟ್ಟಿಗೊಂಡ ಬಂಡೆ-ಪುಡಿಗಲ್ಲುಗಳ ಮೇಲೆ ಇಡೀ ಪಟ್ಟಣ ನಿಂತಿದೆ. ಇದು ಅತ್ಯಂತ ಸೂಕ್ಷ್ಮ ಪ್ರದೇಶ. ಈ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಲಂಗು ಲಗಾಮಿಲ್ಲದೆ ಅಭಿವೃದ್ಧಿ ಚಟುವಟಿಕೆಗಳು ನಡೆದಿವೆ. ಹಿಮಾಲಯ ಪರ್ವತ ಶ್ರೇಣಿಯನ್ನು ಕೊರೆದು ಇನ್ನಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಜ್ಞರು ಹೇಳುತ್ತಾರೆ.

'ಜೋಶಿಮಠದಲ್ಲಿ 4 ಸಾವಿರಕ್ಕೂ ಅಧಿಕ ಮನೆಗಳಿವೆ. 20 ಸಾವಿರಕ್ಕೂ ಅಧಿಕ ಜನಸಂಖ್ಯೆ ಇದೆ. ಆದರೆ, ಶೇ 90ಕ್ಕೂ ಅಧಿಕ ಮನೆಗಳಿಗೆ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲ. ಕೊಳಚೆ ನೀರು ಅಂತರ್ಜಲಕ್ಕೆ ನುಗ್ಗುತ್ತದೆ. ಮಣ್ಣಿನ ಕೆಸರು ಇನ್ನಷ್ಟು ಕೆಳಗೆ ತಳ್ಳುತ್ತದೆ. ಇದು ಸಹ ಭೂಕುಸಿತಕ್ಕೆ ಕಾರಣ ಆಗಿರಬಹುದು' ಎಂದು ಉತ್ತರಾಖಂಡದ ಹೇಮವತಿ ನಂದನ್ ಬಹುಗುಣ ಗಢವಾಲ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವೈ.ಪಿ.ಸುಂದ್ರಿಯಾಲ್ ವಿಶ್ಲೇಷಿಸುತ್ತಾರೆ.

'ಎರಡು ದಶಕಗಳ ಹಿಂದೆಯೇ ಜೋಶಿಮಠದ ಬಗ್ಗೆ ವಲಯವಾರು ನಕ್ಷೆ ತಯಾರಿಸಿ ಅಧ್ಯಯನ ನಡೆಸಲಾಗಿತ್ತು. ಇಲ್ಲಿನ ಶೇ 90ಕ್ಕೂ ಹೆಚ್ಚು ಪ್ರದೇಶವನ್ನು ಭೂಕುಸಿತಕ್ಕೆ ತುತ್ತಾಗಬಲ್ಲ ಪ್ರದೇಶವೆಂದು ಗುರುತಿಸಲಾಗಿತ್ತು. ಈ ಅಧ್ಯಯನ ವರದಿ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿತ್ತು. ಸುರಕ್ಷತಾ ಕ್ರಮ ಕೈಗೊಳ್ಳುವುದಾಗಿ ಉತ್ತರಾಖಂಡ ಸರ್ಕಾರ ತಿಳಿಸಿತ್ತು. ಆದರೆ, ಅದು ಭರವಸೆಯಾಗಿಯೇ ಉಳಿಯಿತು' ಎಂದು ಪರಿಸರ ತಜ್ಞ ಚಾಂಡಿ ಪ್ರಸಾದ್ ಭಟ್ ತಿಳಿಸುತ್ತಾರೆ.

## 20 ಸಾವಿರ ಹೆಕ್ಟೇರ್ ಪ್ರದೇಶದ ಮರ ಎಲ್ಲಿ ಹೋಯ್ತು?

2012 ರಿಂದ ಈಚೆಗೆ ಭಾರೀ ಪ್ರಮಾಣದಲ್ಲಿ ಅರಣ್ಯ ನಾಶವಾಗಿದೆ ಎಂದು 'ಫಾರೆಸ್ಟ್ ಗ್ಲೋಬಲ್ ವಾಚ್' (ಜಿಎಫ್‌ಡಬ್ಲ್ಯು) ದತ್ತಾಂಶ ಹೇಳುತ್ತವೆ. ಕರ್ನಾಟಕದಲ್ಲಿ 2012 ರಿಂದ 2017 ರ ಅವಧಿಯಲ್ಲಿ ಪಶ್ಚಿಮಘಟ್ಟದಲ್ಲಿ 20 ಸಾವಿರ ಹೆಕ್ಟೇರ್ ಅರಣ್ಯ ನಾಶವಾಗಿದ್ದು, ಇದು ಆತಂಕಕಾರಿ ಪ್ರಮಾಣ. ಇಲ್ಲಿನ ಜೀವ ವೈವಿಧ್ಯ ಅಪಾಯಕ್ಕೆ ಸಿಲುಕಿದೆ ಎಂದು ಜಿಎಫ್‌ಡಬ್ಲ್ಯು ಎಚ್ಚರಿಕೆ ನೀಡಿದೆ.

2012 ರಿಂದ 2017 ರ ಅವಧಿಯಲ್ಲಿ ಕರ್ನಾಟಕದ ಉತ್ತರಕನ್ನಡ, ಉಡುಪಿ, ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗಲ್ಲಿ ಒಟ್ಟು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮರಗಳು ನಾಶವಾಗಿವೆ. 2017 ಒಂದೇ ವರ್ಷದಲ್ಲಿ 2,208 ಹೆಕ್ಟೇರ್ ಪ್ರದೇಶ ನಾಶವಾಗಿದೆ. ದಕ್ಷಿಣಕನ್ನಡದಲ್ಲಿ 955, ಉಡುಪಿಯಲ್ಲಿ 857, ಉತ್ತರಕನ್ನಡದಲ್ಲಿ 236 ಮತ್ತು ಕೊಡಗು ಜಿಲ್ಲೆಯಲ್ಲಿ 160 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ನಾಶವಾಗಿದೆ. ರಾಜ್ಯದಲ್ಲಿ ಸರಾಸರಿ 5 ಲಕ್ಷ ಹೆಕ್ಟೇರ್ ಅಡಿಕೆ ಕ್ಷೇತ್ರವಿದೆ. ಅದರಲ್ಲಿ 3 ಲಕ್ಷ ಹೆಕ್ಟೇರ್ ಪಶ್ಚಿಮಘಟ್ಟದ ವ್ಯಾಪ್ತಿಯಲ್ಲೇ ಇದೆ. ಒಂದು ಲಕ್ಷ ಹೆಕ್ಟೇರ್‌ನಲ್ಲಿ ಅಕೇಶಿಯಾ ಸೇರಿದಂತೆ ಏಕಜಾತಿಯ ನೆಡುತೋಪುಗಳಿವೆ.


## ಸೂಕ್ಷ್ಮ ಪರಿಸರದಲ್ಲಿ ಯೋಜನೆಗಳು ಬೇಡ



ಈಗಿರುವ ಸನ್ನಿವೇಶಗಳನ್ನು ನೋಡಿದರೆ 'ಅಭಿವೃದ್ಧಿ' ಎನ್ನುವುದು ಮೂರ್ಖತನದ ಪರಮಾವಧಿ. ಪರಿಸರದ ಬಗ್ಗೆ ಜ್ಞಾನ ಇಲ್ಲದವರು ಅಧಿಕಾರ ನಡೆಸುತ್ತಿದ್ದಾರೆ. ದುರ್ಬಲವಾಗಿರುವ ಪರಿಸರದಲ್ಲಿ ಯಾವುದೇ ಯೋಜನೆಗಳನ್ನು ಕೈಗೊಳ್ಳಬಾರದು. ಈಗ ಕೈಗೊಂಡಿರುವ ಹಲವಾರು ಯೋಜನೆಗಳಿಂದ ಪ್ರವಾಹ ಸೃಷ್ಟಿಯಾಗುತ್ತದೆ. ನಂತರ ನೀರಿನ ಕ್ಷಾಮ ಉಂಟಾಗುತ್ತದೆ. ಶಿರಾಡಿಘಾಟ್ ಮತ್ತು ಚಾರ್ಮಾಡಿ ಘಾಟ್‌ಗಳಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಬಾರದು. ಶಿರಾಡಿಘಾ-ಟ್‌ನಲ್ಲಿ ಸುರಂಗ ಮತ್ತು ರಸ್ತೆ ವಿಸ್ತರಣೆಯಂತಹ ಯೋಜನೆಗಳನ್ನು ನಿಸರ್ಗದ ಮೇಲೆ ಅಪಾರ ಪರಿಣಾಮಗಳು ಬೀರಲಿವೆ.

**ಪ್ರೊ.ಟಿ.ವಿ. ರಾಮಚಂದ್ರ,** ಪ್ರಾಧ್ಯಾಪಕ, ಐಐಎಸ್‌ಸಿ

## ಸುಸ್ಥಿರ ಅಭಿವೃದ್ಧಿ ಅಗತ್ಯ



ಯಲ್ಲಾಪುರ ತಾಲ್ಲೂಕಿನ ಕಳಚೆ, ಕೊಡಗು, ಚಿಕ್ಕಮಗಳೂರು ಸೇರಿದಂತೆ ಪಶ್ಚಿಮಘಟ್ಟದಲ್ಲಿ ಅವಘಡಗಳು ನಡೆಯುತ್ತಿವೆ. ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುನ್ನ ಎಚ್ಚರವಹಿಸಬೇಕು. ಅದರಲ್ಲೂ ಪಶ್ಚಿಮಘಟ್ಟದ ಸೂಕ್ಷ್ಮ ಪ್ರದೇಶಗಳನ್ನು ಸಂರಕ್ಷಿಸಲು ಸರ್ಕಾರ ಅತಿ ಹೆಚ್ಚು ಕಾಳಜಿ ವಹಿಸಬೇಕು. ಈಗಾಗಲೇ 'ಮಲೆನಾಡು ಸುಸ್ಥಿರ ಅಭಿವೃದ್ಧಿ' ಪ್ಯಾಕೇಜ್ ನೀಡಿ ಎಂದು ಮುಖ್ಯಮಂತ್ರಿ ಅವರಿಗೆ ಕೋರಿದ್ದೇವೆ. ಸರ್ಕಾರ ಭೂಮಿ ಬಳಕೆಯ ಬಗ್ಗೆ ಸ್ಪಷ್ಟವಾದ ನೀತಿ ರೂಪಿಸಬೇಕಾಗಿದೆ.

**ಅನಂತ ಹೆಗಡೆ ಅಶೀಸರ,** ಕರ್ನಾಟಕ ಜೀವ ವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ

## ಜೋಶಿಮಠದ ಪರಿಸ್ಥಿತಿ ಇಲ್ಲಿಯೂ ಉದ್ಭವಿಸಬಹುದು




ಸುಮಾರು 15 ಕೋಟಿ ವರ್ಷಗಳಿಗೂ ಹಿಂದೆ ಉಗಮ-ವಾಗಿದ್ದೆಂದು ಅಂದಾಜಿಸಲಾಗಿರುವ ಪಶ್ಚಿಮಘಟ್ಟ ಶ್ರೇಣಿಯು, ಹಿಮಾಲಯಕ್ಕೆ ಹೋಲಿಸಿದರೆ ಹಳೆಯದು ಮತ್ತು ಸ್ಥಿರವಾದದ್ದು. ಭೂತಳದಲ್ಲಿನ ಕುದಿಯುವ ಲಾವಾರಸ ಒಮ್ಮೆಲೆ ಹೊರಚಿಮ್ಮಿ ಪಶ್ಚಿಮದ ಸಮುದ್ರದಂಚಿಗೆ ಬಸಿದು ಗಟ್ಟಿಯಾದ ಪರ್ವತಶ್ರೇಣಿ ಈ ಸಹ್ಯಾದ್ರಿ. ಇಲ್ಲಿ ಆಳದಲ್ಲಿ ಗಟ್ಟಿಯಾದ ಗ್ರಾನೈಟ್ ಪದರಗಳಿವೆ. ಅದರ ಮೇಲ್ಮೈಯಲ್ಲಿ, ಬಸಾಲ್ಟ್ ವರ್ಗದ ಗುಂಡುಕಲ್ಲುಗಳು, ಸಡಿಲವಾದ ಜಂಬಿಟ್ಟಿಗೆ, ಮೆದುವಾದ ಸುಣ್ಣದಕಲ್ಲು ಇವೆಲ್ಲ ಮಿಶ್ರಣಗೊಂಡು ರೂಪಗೊಂಡ ಎರೆಮಣ್ಣಿದೆ. ಈ ಮೇಲ್ಮಣ್ಣು ಮಾತ್ರ ಬಹಳ ಸಡಿಲ. ಇದರ ಮೇಲೆ ಆವರಿಸಿರುವ ಕಾಡಿನ ಸಸ್ಯಲೋಕದ ಬೇರಿನಜಾಲ ಮತ್ತು ಜೀವಜನ್ಯ ವಸ್ತುಗಳು ಸೇರಿ ಸೃಷ್ಟಿಸುವ "ಹ್ಯೂಮಸ್" ಪದರ ಈ ಸಡಿಲಮಣ್ಣನ್ನು ಈವರೆಗೆ ಬೆಸೆದು ಗಟ್ಟಿಯಾಗಿ ಹಿಡಿದಿಟ್ಟಿವೆ. ಆದರೆ, ಅತ್ಯಗತ್ಯವಾದ ಈ ಕಾಡಿನ ಹಸಿರು ಹೊದಿಕೆಯು ನಾಶವಾದಂತೆಲ್ಲ ಮಣ್ಣು ಸವಕಳಿಯಾಗಿ, ಕಣಿವೆಯ ಪ್ರದೇಶದಲ್ಲಿ ಭೂ ಕುಸಿಯುವುದು ಸಹಜವಾಗುತ್ತದೆ. ಸಹ್ಯಾದ್ರಿಯ ಹೃದಯಭಾಗದ ಸುಮಾರು ಇಪ್ಪತ್ತರಷ್ಟು ಭಾಗವೇ ಅಪಾಯದಂಚಿಗೆ ಬಂದು ತಲುಪಿದೆ. ಈಗಲಾದರೂ, ವೈಜ್ಞಾನಿಕ 'ಭೂಬಳಕೆ ನೀತಿ' ಯೊಂದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳಬೇಕಿದೆ.

**ಡಾ. ಕೇಶವ ಎಚ್.ಕೊರ್ಸೆ,** ಸಂರಕ್ಷಣಾ ಜೀವಶಾಸ್ತ್ರಜ್ಞ, ಶಿರಸಿ



ಮಡಿಕೇರಿ ಸಮೀಪದ ಮಾದಾಪುರದಲ್ಲಿ ಆಗಿದ್ದ ಭೂಕುಸಿತ

## ಗುಂಡಣ್ಣ




## 25 ವರ್ಷಗಳ ಹಿಂದೆ

ಗುರುವಾರ, 22-1-1998

**ಬಸವಕಲ್ಯಾಣ ಬಳಿ ರಸ್ತೆ ದುರಂತ: 12 ಸಾವು**

**ಬಸವಕಲ್ಯಾಣ, ಜ. 21**– ಟೆಂಪೋ ಟ್ರ್ಯಾಕ್ಸ್ ಮತ್ತು ಲಾರಿ ಮಧ್ಯೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂರು ಕುಟುಂಬದ ಐವರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸೇರಿದಂತೆ ಟ್ರ್ಯಾಕ್ಸ್‌ನಲ್ಲಿದ್ದ ಎಲ್ಲಾ 12 ಜನರು ಮೃತಪಟ್ಟಿದ್ದಾರೆ.

ಇಲ್ಲಿಗೆ 7 ಕಿ.ಮೀ. ದೂರದ ಉಮಾಪುರ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ನಂ.9ರ ಮೇಲೆ ನಿನ್ನೆ ರಾತ್ರಿ ಸುಮಾರು 11.30ರ ವೇಳೆ ಅಪಘಾತ ಸಂಭವಿಸಿದೆ.

## 50 ವರ್ಷಗಳ ಹಿಂದೆ

ಸೋಮವಾರ, 22-1-1973

**ರಾಷ್ಟ್ರಪತಿ ಆಡಳಿತ ಹೇರಿಕೆ ಪರಿಹಾರವಲ್ಲ: ಕರುಣಾನಿಧಿ**

**ಮದರಾಸ್, ಜ. 21**– ರಾಷ್ಟ್ರಪತಿ ಆಡಳಿತದ ಮೂಲಕ ಪ್ರಯೋಗ ನಡೆಸುವುದರ ಬದಲು 'ಆಂಧ್ರ ಸಮಸ್ಯೆ'ಗೆ ಶೀಘ್ರವಾಗಿ ಪರಿಹಾರ ಹುಡುಕುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಕೇಂದ್ರ ಸರ್ಕಾರಕ್ಕೆ ಇಂದು ಒತ್ತಾಯಪಡಿಸಿದರು.

'ರಾಷ್ಟ್ರಪತಿ ಆಡಳಿತ ಹೇರಿಕೆ ಪರಿಹಾರವಲ್ಲವೆಂಬುದು ಆಂಧ್ರ ಪ್ರದೇಶದಲ್ಲಿನ ಪ್ರಸ್ತುತ ಘಟನೆಗಳಿಂದ ವ್ಯಕ್ತವಾಗಿದೆ' ಎಂದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 22, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಪ್ರತಿಪದ್ ಗಂ.22-28 ನಕ್ಷತ್ರ: ಶ್ರವಣ ಗಂ.27-21 ಯೋಗ: ವಜ್ರ ಗಂ.10-06 ಸಿದ್ಧಿ(ಆಸ್ರಿಕ್) ಗಂ.29-40 ಕರಣ: ಕಿಂಸ್ತುಘ್ನ ಗಂ.12-25, ಮಕರ ಮಾಸದ 08 ನೇ ದಿನ.
ರಾಹುಕಾಲ : ಸಾಯಂಕಾಲ 04-30 -06-00
ಸೂರ್ಯೋದಯ : 07-01 ಸೂರ್ಯಾಸ್ತ : 06-22 ಮುಸ್ಲಿಂ ದಿನಾಂಕ : 29 ಜುಮಾದುಸ್ಸಾನಿ
ದಿನ ವಿಶೇಷ : ಮಾಘ ಶುಕ್ಲಾದಿ
ಅದೃಷ್ಟ ಸಂಖ್ಯೆ : 8, 12

**ಮೇಷ:** ಇಂದು ನೀವು ಇತರರಿಗಿಂತ ಭಿನ್ನವಾದ, ಧನಾತ್ಮಕವಾದ ನಿರ್ಧಾರ ತಗೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಇಂದು ಸಾಧನೆಯ ತಯಾರಿಯನ್ನು ನಡೆಸಲು ಸೂಕ್ತವಾದ ದಿನವಾಗಿದೆ. ದಿಢೀರ್ ಪ್ರಯಾಣದ ಸಂಭವವಿದೆ.

**ವೃಷಭ:** ಗಂಭೀರ ಹಂತದಲ್ಲಿರುವ ನಿಮ್ಮ ವೈಯಕ್ತಿಕ ಹಾಗೂ ಉದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವ ಪ್ರಯತ್ನವನ್ನು ನಡೆಸಬಹುದು. ನಿಮ್ಮ ಬದುಕನ್ನು ಒಂದು ವ್ಯವಸ್ಥೆಗೆ ತರಲು ಮಾರ್ಗದರ್ಶಕರ ಸಲಹೆಯನ್ನು ಪಡೆಯಿರಿ.

**ಮಿಥುನ:** ನಿಮ್ಮ ಸೃಜನಶೀಲ ಯೋಜನೆ ಮುಂದುವರೆಸಲು ಇದು ಶುಭದಿನ. ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮವೇ ಹೊರತು, ಕೈಗೆ ಸಿಗದ ಅಂಶಗಳ ಬಗ್ಗೆ ಯೋಚಿಸುವುದು ಸಮಯ ವ್ಯರ್ಥಕ್ಕೆ ಕಾರಣವಾಗಲಿದೆ.

**ಕರ್ಕಾಟಕ:** ಕೃಷಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ ಆತಂಕ, ಭಯ ಉಂಟಾಗಬಹುದು. ಅನಾವಶ್ಯಕವಾಗಿ ಹಣ ಖರ್ಚಾಗಲಿದೆ. ಯಾವ ಕೆಲಸದಲ್ಲೂ ನಿರ್ಲಕ್ಷ್ಯ ತೋರದಿರಿ. ಮನೆಯವರೊಂದಿಗಿನ ಸಣ್ಣ ವಿಹಾರ ಸಂತಸ ತರುವುದು

**ಸಿಂಹ:** ನೀವು ಇಂದು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ನಿಮ್ಮ ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ಇಂದು ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣವಿರುತ್ತದೆ.

**ಕನ್ಯಾ:** ವಂಶ ಪಾರಂಪರ್ಯವಾಗಿ ಬಂದ ನಿಮ್ಮ ವ್ಯಾಪಾರ ವ್ಯವಹಾರ ಈ ದಿನ ಮತ್ತಷ್ಟು ಏಳಿಗೆ ಕಾಣಲಿದೆ. ಹಾಗೂ ನಿಮ್ಮ ಸಲಹೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ. ಕಪ್ಪು ಬಣ್ಣವು ನಿಮ್ಮ ಅದೃಷ್ಟವನ್ನು ಬದಲಾಯಿಸಲಿದೆ.

**ತುಲಾ:** ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಬಹುದು. ಪತ್ನಿಯ ಆರೋಗ್ಯ ಸುಧಾರಿಸಲಿದೆ.

**ವೃಶ್ಚಿಕ:** ವರ್ತಮಾನದ ಸಮಯವನ್ನು ಚನ್ನಾಗಿ ಅರ್ಥೈಸಿಕೊಂಡು ಮುಂದಿನ ಹೆಜ್ಜೆ ಇಡುವುದು ಉತ್ತಮ. ಇಂದಿನ ಕೆಲಸದಲ್ಲಿ ನಿರುತ್ಸಾಹ ಕಂಡುಬರಲಿದೆ. ಕಾಲು ನೋವಿನ ಸಮಸ್ಯೆ ಜಾಸ್ತಿಯೇ ಕಾಡಬಹುದು. ಗಣಪತಿಯನ್ನು ಸ್ತುತಿಸಿ.

**ಧನು:** ಅಧಿಕ ಪರಿಶ್ರಮದಿಂದ ಬಹು ದಿನಗಳ ಕನಸು ನನಸಾಗುತ್ತದೆ. ಮನೆಗೆ ನೆಂಟರಿಷ್ಟರ ಆಗಮನವಿರುವುದು. ಇನ್ನೊಬ್ಬರಿಗೆ ವಿಶ್ವಾಸದಲ್ಲಿ ಸಾಲ ಕೊಡುವಾಗ ಸರಿಯಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ.

**ಮಕರ:** ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿ ನಡೆಸಬಹುದು. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ. ಕುಟುಂಬದಲ್ಲಿ ಸೌಖ್ಯ, ನೆಮ್ಮದಿ ಇರುವುದು. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

**ಕುಂಭ:** ಆಭರಣ ಖರೀದಿ ಅಥವಾ ಆಸ್ತಿ ಖರೀದಿ ಮಾಡುವ ವಿಚಾರದ ಬಗ್ಗೆ ಹೆಂಡತಿ ಮಕ್ಕಳೊಂದಿಗೆ ಚರ್ಚೆ ನಡೆಯಲಿದೆ. ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಚಾಕಚಕ್ಯತೆಯನ್ನು ತೋರಿದರೆ ವ್ಯವಹಾರ ಸಾಧ್ಯವಾಗುವುದು.

**ಮೀನ:** ಮನೆಯಲ್ಲಿ ಮದುವೆಯಂತಹ ಶುಭ ಸಮಾರಂಭಗಳು ಜರುಗುವ ಸಾಧ್ಯತೆ ಇದೆ. ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ನಿರೀಕ್ಷಿಸಬಹುದು. ಶ್ರೀ ದುರ್ಗಾ ದೇವಿಯನ್ನು ಸ್ತುತಿಸಿ ಶುಭವಾಗುವುದು.

## ಪದಬಂಧ 5207


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಸ್ವರದಲ್ಲಿರುವ ಸ್ವಂತ ಬರವಣಿಗೆ! (5)
3.ಗೆಲುವನ್ನು ಪಡೆದವನೀತ (3)
5.ಗಾಯಕನಿಗಾದ ಪೆಟ್ಟು! (2)
6.ಬಿಡುವಿಲ್ಲದೆ ನಿರಂತರವಾದುದು (4)
8.ತರಲೆಯ ಶಿರ (2)
10.ನಡುವೆ ಮಜಾ ಇದ್ದಾಗಲೇ ಈ ಸಾಂತ್ವನ (5)
12.ತೋಳು ಇಲ್ಲಿ ಕಾಣುತ್ತಿದೆ (2)
14.ಹಣದೊಳಗೆ ನಡೆದಿರುವ ಗೊಂದಲ (4)
15.ತುರಿಕೆ ಅಥವಾ ಬೊಕ್ಕೆಯೇಳುವ ಚರ್ಮ ರೋಗ (2)
16.ಸ್ವಚ್ಛಂದತೆಯನ್ನು ಹೀಗೆನ್ನಿ (3)
17.ಊಟದ ಸಮಾರಂಭವಿದು (5)

**ಮೇಲಿಂದ ಕೆಳಕ್ಕೆ**

1.ತಾನೇ ಮಾಡಿದುದು (4)
2.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
4.ಭೇದಭಾವ ಹೀಗೆ ಬಂದಿದೆ (4)
7.ಪಾಂಡಿತ್ಯವನ್ನು ಹೊಂದಿದವಳು (3)
9.ನಡುಮನೆ ಇಲ್ಲಿದೆ (3)
10.ಸರ ತಂದವನಿಗೆ ತೋರಿದ ಆದರ (3)
11.ಗೌರವಕ್ಕೆ ಪಾತ್ರನಾದವನು (4)
13.ಕೊನೆಗೆ ಕಾಟ ಬಂದಾಗ ಅರಸುವುದು (4)
15.ಧಾನ್ಯ ಸಂಗ್ರಹಿಸುವ ಸ್ಥಳ (3)



### 5206ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪರಕಾಯ 3.ವನಸುಮ
5.ಮತ್ಸರ 6.ತಿರುಕ
8.ವರುಣ 9.ವ್ಯಲತಾ
10.ಕಹಳೆ 11.ಹವನ
12.ಸುಮ್ಮಾನ 14.ಕಂಬನಿ
16.ರಸಾಭಾಸ 17.ಜಮಾವಣೆ

**ಮೇಲಿಂದ ಕೆಳಕ್ಕೆ:**
1.ಪದಾತಿ 2.ಯಮ
3.ವರ 4.ಮರಣ
7.ಕರತಾಡನ 8.ವರ್ಗೀಕರಿಸು
11.ಹಮ್ಮೀರ 13.ನವಣೆ
14.ಕಂಸ 15.ನಿಜ

## ಸುಡೊಕು 5593

| | | | | | | | | |
|---|---|---|---|---|---|---|---|---|
| | 7 | 6 | | 4 | | | | 9 |
| 5 | | | 6 | | 9 | | 4 | 2 |
| | 9 | | | 7 | | 3 | | |
| 7 | 8 | | | 2 | | | 5 | 3 |
| | | | 4 | 9 | 5 | | | 7 |
| 6 | | 5 | | 8 | | | 2 | |
| | | 7 | | | | | 9 | 5 |
| | 5 | | | | 7 | | | |
| 9 | | | | 5 | 8 | 2 | | 4 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5592 ಸುಡೊಕು

| | | | | | | | | |
|---|---|---|---|---|---|---|---|---|
| 2 | 3 | 9 | 8 | 5 | 7 | 1 | 6 | 4 |
| 8 | 6 | 4 | 1 | 3 | 2 | 7 | 5 | 9 |
| 5 | 1 | 7 | 4 | 9 | 6 | 2 | 8 | 3 |
| 7 | 9 | 8 | 2 | 4 | 5 | 6 | 3 | 1 |
| 4 | 5 | 1 | 6 | 8 | 3 | 9 | 2 | 7 |
| 3 | 2 | 6 | 9 | 7 | 1 | 5 | 4 | 8 |
| 6 | 7 | 2 | 3 | 1 | 4 | 8 | 9 | 5 |
| 9 | 4 | 5 | 7 | 6 | 8 | 3 | 1 | 2 |
| 1 | 8 | 3 | 5 | 2 | 9 | 4 | 7 | 6 |

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

ರಾಜ್ಯದಾದ್ಯಂತ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ಶುರು • 40 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಕಾರ್ಯಕ್ರಮ

# ಲಕ್ಷಕ್ಕೂ ಹೆಚ್ಚು ಹೊಸ ಸದಸ್ಯರ ನೋಂದಣಿ

ಪ್ರಜಾವಾಣಿ ವಾರ್ತೆ



ವಿಜಯಪುರ ನಗರದ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಅಂಗವಾಗಿ ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿದರು

ಬೆಂಗಳೂರು: ಚುನಾವಣಾ ತಾಲೀಮು ಬಿರುಸುಗೊಳಿಸಿರುವ ಬಿಜೆಪಿ, ರಾಜ್ಯದಾದ್ಯಂತ ಹತ್ತು ದಿನಗಳ ಅವಧಿಯ ವಿಜಯ ಸಂಕಲ್ಪ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿತು. ಮೊದಲ ದಿನವೇ 40 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಮತದಾರರ ನೋಂದಣಿ ಕಾರ್ಯಕ್ರಮ ನಡೆಸಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ವಿಜಯಪುರ ಜಿಲ್ಲೆಯ ನಾಗಠಾಣ ಮತ್ತು ಸಿಂದಗಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರ ನೋಂದಣಿ ಹಾಗೂ ವಿಜಯ ಸಂಕಲ್ಪ ಅಭಿಯಾನದಲ್ಲಿ ಭಾಗಿಯಾದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತದಾರರ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅಭಿಯಾನದಲ್ಲಿ ಭಾಗವಹಿಸಿದರು. ಬಿಜೆಪಿ ರಾಜ್ಯ ಉಸ್ತುವಾರಿಯಾಗಿರುವ ಅರುಣ್ ಸಿಂಗ್ ಚಿಕ್ಕಬಳ್ಳಾಪುರದಲ್ಲಿ ಹಾಗೂ ಸಹ ಪ್ರಭಾರಿಯಾಗಿರುವ ಡಿ.ಕೆ. ಅರುಣಾ ಅವರು ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪ್ತಿಯಲ್ಲಿ ಮತದಾರರ ನೋಂದಣಿ ಅಭಿಯಾನದಲ್ಲಿ ಪಾಲ್ಗೊಂಡರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದಾವಣಗೆರೆಯಲ್ಲಿ ಅಭಿಯಾನದಲ್ಲಿ ಭಾಗಿಯಾದರು.

ಎಲ್ಲ ಸಚಿವರು ತಾವು ಉಸ್ತುವಾರಿ ಹೊಂದಿರುವ ಜಿಲ್ಲೆಗಳಲ್ಲಿ, ಬಿಜೆಪಿ ಶಾಸಕರು ತಾವು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಹಾಗೂ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯರು ನಿಯೋಜಿತ ವಿಧಾನಸಭಾ ಕ್ಷೇತ್ರಗಳಲ್ಲಿ ವಿಜಯ ಸಂಕಲ್ಪ ಅಭಿಯಾನದ ನೇತೃತ್ವ ವಹಿಸಿದ್ದರು. ಮತಗಟ್ಟೆ ಹಂತದ ಸಮಿತಿಗಳಿಂದ ರಾಜ್ಯ ಘಟಕದವರೆಗೆ ಎಲ್ಲ ಹಂತಗಳ ಮುಖಂಡರು, ಪಕ್ಷದ ಕಾರ್ಯಕರ್ತರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

**ಲಕ್ಷಕ್ಕೂ ಹೆಚ್ಚು ಸದಸ್ಯರ ನೋಂದಣಿ:** 'ಹತ್ತು ದಿನಗಳ ಕಾಲ ವಿಜಯ ಸಂಕಲ್ಪ ಅಭಿಯಾನ ಹಾಗೂ ಮತದಾರರ ನೋಂದಣಿ ಕಾರ್ಯಕ್ರಮ ನಡೆಯಲಿದೆ. ಮೊದಲ ದಿನವಾದ ಶನಿವಾರ ರಾಜ್ಯದಾದ್ಯಂತ ಒಟ್ಟು ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಕಚೇರಿ ಮೂಲಗಳು ತಿಳಿಸಿವೆ.

## ನಡ್ಡಾ ಸಮಾವೇಶಕ್ಕೆ ಶಾಸಕ ಯತ್ನಾಳ ಗೈರು



ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಶನಿವಾರ ವಿಜಯಪುರ ನಗರ, ಸಿಂದಗಿಯಲ್ಲಿ ಭಾಗವಹಿಸಿದ್ದ ಚುನಾವಣಾ ಪ್ರಚಾರ ಕಾರ್ಯಕ್ರಮಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಗೈರಾಗಿದ್ದರು.

ಕಲಬುರಗಿಯಿಂದ ಹೆಲಿಕಾಪ್ಟರ್ ಮೂಲಕ ನಗರದ ಸೈನಿಕ ಶಾಲೆಯ ಮೈದಾನದಲ್ಲಿ ಬಂದಿಳಿದ ನಡ್ಡಾ ಅವರನ್ನು ಸ್ವಾಗತಿಸಲು ಸಹ ಯತ್ನಾಳ ಬಾರದೇ ಇರುವುದು ರಾಜಕೀಯ ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಿದೆ.

ಮುಖಂಡರ ವಿರುದ್ಧ ಮುನಿಸಿಕೊಂಡಿರುವ ಯತ್ನಾಳ, ವಿಜಯಪುರದಲ್ಲೇ ಇದ್ದರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೇ ಪರೋಕ್ಷವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಯತ್ನಾಳ ಅವರಿಗೆ ಪಕ್ಷದಿಂದ ಆಹ್ವಾನ ನೀಡದೇ ಉದ್ದೇಶ ಪೂರ್ವಕವಾಗಿ ಕಾರ್ಯಕ್ರಮದಿಂದ ದೂರ ಇಡಲಾಗಿತ್ತು ಎಂಬ ಮಾತು ಯತ್ನಾಳ ಬೆಂಬಲಿಗರಿಂದ ಕೇಳಿಬಂದಿತು.

ಪಕ್ಷದ ಸಚಿವರು, ಮುಖಂಡರನ್ನು ಟೀಕಿಸುವ ಮೂಲಕ ವರಿಷ್ಠರ ಕೆಂಗಣ್ಣಿಗೆ ಗುರಿಯಾಗಿದ್ದ ಯತ್ನಾಳ ಅವರಿಗೆ, ಯಾವುದೇ ವಿವಾದಾತ್ಮಕ ಹೇಳಿಕೆ ನೀಡದಂತೆ ಬಿಜೆಪಿ ಹೈಕಮಾಂಡ್ ಕಳೆದ ವಾರ ಸೂಚನೆ ನೀಡಿತ್ತು.

ಪ್ರಜಾ ಮತ — ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

## ಯತ್ನಾಳಗೆ ನೋಟಿಸ್ : ಕಟೀಲ್

ಬೆಂಗಳೂರು: 'ಪಕ್ಷದ ಶಿಸ್ತು ಉಲ್ಲಂಘಿಸಿರುವ ಆರೋಪದ ಮೇಲೆ ವಿಜಯಪುರ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಕೇಂದ್ರೀಯ ಶಿಸ್ತು ಸಮಿತಿ ನೋಟಿಸ್ ಜಾರಿ ಮಾಡಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಯತ್ನಾಳ ವಿರುದ್ಧದ ದೂರಿನ ಕುರಿತು ಪಕ್ಷದ ಕೇಂದ್ರೀಯ ಶಿಸ್ತು ಸಮಿತಿ ಪರಿಶೀಲನೆ ನಡೆಸುತ್ತಿದೆ. ಖುದ್ದು ಹಾಜರಾಗಿ ವಿವರಣೆ ನೀಡುವಂತೆ ಸಮಿತಿಯು ಶಾಸಕರಿಗೆ ನೋಟಿಸ್ ಜಾರಿ ಮಾಡಿದೆ. ಅವರು ನೀಡುವ ವಿವರಣೆಯನ್ನು ಆಧರಿಸಿ ಸಮಿತಿಯು ಸೂಕ್ತ ತೀರ್ಮಾನ ಕೈಗೊಳ್ಳಲಿದೆ' ಎಂದರು.

ಯತ್ನಾಳ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಕೆಲವು ದಿನಗಳ ಹಿಂದೆ ಬಹಿರಂಗವಾಗಿ ಟೀಕಿಸಿದ್ದರು. ಸಚಿವ ಮುರುಗೇಶ ನಿರಾಣಿ ಅವರನ್ನು ಕೀಳುಮಟ್ಟದ ಪದಗಳಿಂದ ನಿಂದಿಸಿದ್ದರು. ಈ ಕುರಿತು ಬಿಜೆಪಿ ಕೇಂದ್ರೀಯ ಶಿಸ್ತು ಸಮಿತಿ ವಿಚಾರಣೆ ನಡೆಸುತ್ತಿದೆ.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರನ್ನು ಟೀಕಿಸಿರುವುದಕ್ಕೆ ಆ ಪಕ್ಷದ ಮುಖಂಡರು ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಕುರಿತು ಪ್ರಶ್ನಿಸಿದಾಗ, 'ನಾನು ಶುಕ್ರವಾರದ ಭಾಷಣದಲ್ಲಿ ಯಾವುದೇ ಪಕ್ಷದ ಹೆಸರನ್ನು ಉಲ್ಲೇಖಿಸಿ ಮಾತನಾಡಿಲ್ಲ. ಬಿಜೆಪಿ ಶಿಸ್ತಿನ ಪಕ್ಷ ಎಂದಷ್ಟೇ ಹೇಳಿದ್ದೇನೆ. ದೇವೇಗೌಡರ ಬಗ್ಗೆ ನನಗೆ ಅಪಾರ ಗೌರವವಿದೆ' ಎಂದು ಕಟೀಲ್ ಉತ್ತರಿಸಿದರು.

## 'ನವಗ್ರಹ ಯಾತ್ರೆ ಮಾಡಬಹುದು!'

ದಾವಣಗೆರೆ: 'ರಾಜ್ಯದಲ್ಲಿ ಕಾಂಗ್ರೆಸಿಗರು ಮಾಡುತ್ತಿರುವುದು ಪ್ರಜಾಧ್ವನಿ ಯಾತ್ರೆಯಲ್ಲ; ಅದು ಕಾಂಗ್ರೆಸ್‌ನ ಅಂತಿಮ ಯಾತ್ರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ಉದ್ಘಾಟಿಸಿದ ಅವರು, 'ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಈಗ ಯಾರು ಹೆಚ್ಚು ಸುಳ್ಳು ಹೇಳುವುದು ಎಂಬ ಸ್ಪರ್ಧೆ ನಡೆಯುತ್ತಿದೆ' ಎಂದು ಹೇಳಿದರು.

'ಜೆಡಿಎಸ್ ಇನ್ನೊಂದು ನಾಟಕ ಕಂಪನಿ. ಈಗ ಪಂಚರತ್ನ ಯಾತ್ರೆ ನಡೆಯುತ್ತಿದೆ. ಪಂಚರತ್ನ ಅಂದರೆ ಐದು ಜಿಲ್ಲೆ, ಐದು ಮಂದಿ ಎಂದರ್ಥ. ಎಚ್‌.ಡಿ.ದೇವೇಗೌಡ, ಎಚ್‌.ಡಿ.ರೇವಣ್ಣ, ಎಚ್‌.ಡಿ.ಕುಮಾರಸ್ವಾಮಿ, ಪ್ರಜ್ವಲ್ ಮತ್ತು ನಿಖಿಲ್ ಅಷ್ಟೆ. ಇನ್ನು ಪತ್ನಿಯರನ್ನು ಸೇರಿಸಿಕೊಂಡು ನವಗ್ರಹ ಯಾತ್ರೆ ಮಾಡಬಹುದು' ಎಂದರು.

## ಕಟೀಲ್ ಅವರದು ಬಚ್ಚಲು ಬಾಯಿ: ಡಿಕೆಶಿ

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ನಾಲಿಗೆಯಲ್ಲಿ ಮೂಳೆ ಮಾತ್ರವಲ್ಲ, ನಿಯಂತ್ರಣವೂ ಇಲ್ಲ. ಅವರದು ಬಚ್ಚಲು ಬಾಯಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

'ಕಾಂಗ್ರೆಸ್ ನಾಯಕರು ಸಭೆ ಮಾಡಿದರೆ ಚಪ್ಪಲಿಗಳು ಕೈಗೆ ಬರುತ್ತವೆ' ಎಂಬ ಕಟೀಲ್ ಹೇಳಿಕೆ ಬಗ್ಗೆ ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಕಟೀಲ್ ಅವರು ಮೊದಲು ಯತ್ನಾಳ್, ನಿರಾಣಿ, ವಿಶ್ವನಾಥ್, ಯೋಗೇಶ್ವರ್ ಮಾತಿಗೆ ಉತ್ತರ ನೀಡಲಿ' ಎಂದರು.

ಕಾಂಗ್ರೆಸ್ ಒಡೆಯಲು ಟಿಆರ್‌ಎಸ್ ನಾಯಕ ಕೆ.ಸಿ. ಚಂದ್ರಶೇಖರರಾವ್ ಹಣ ನೀಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಈ ಬಗ್ಗೆ ನನಗೆ ಗೊತ್ತಿಲ್ಲ. ಹಣ ಕೊಟ್ಟಿರುವವರು ಹಾಗೂ ತೆಗೆದುಕೊಂಡವರನ್ನು ಕೇಳಿ' ಎಂದರು.

## ಸ್ಪರ್ಧೆಗೆ ಪಿಎಸ್‌ಐ ಹಗರಣದ ಆರೋಪಿ ಒಲವು

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ, ಆರ್‌.ಡಿ.ಪಾಟೀಲ ಶುಕ್ರವಾರ ಮಧ್ಯರಾತ್ರಿ ಅಜ್ಞಾತ ಸ್ಥಳದಿಂದ ವಿಡಿಯೊ ಮಾಡಿ, ಜಾಲತಾಣದಲ್ಲಿ ಹರಿಬಿಟ್ಟಿದ್ದಾನೆ.

7 ನಿಮಿಷ 14 ಸೆಕೆಂಡ್‌ಗಳ ವಿಡಿಯೊದಲ್ಲಿ ಪಾಟೀಲ, '8–9 ತಿಂಗಳು ಕೆಲ ರಾಜಕೀಯ ಮುಖಂಡರು ಕುತಂತ್ರದಿಂದ ನನ್ನನ್ನು ಹಾಗೂ ನನ್ನ ಸಹೋದರ ಮಹಾಂತೇಶ ಪಾಟೀಲ ಅವರನ್ನು ಪಿಎಸ್‌ಐ ಪ್ರಕರಣದಲ್ಲಿ ಉದ್ದೇಶ ಪೂರ್ವಕವಾಗಿ ಸಿಲುಕಿಸಿದ್ದಾರೆ. ಸಮಾಜ ಸೇವೆ, ಚುನಾವಣಾ ಸ್ಪರ್ಧೆಗೆ ಬರಬಹುದು ಎಂಬ ಭಯದಿಂದ ನಮ್ಮನ್ನು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ' ಎಂದು ಹೇಳಿದ್ದಾನೆ.

'ಈಗ ಅಫಜಲಪುರ ಕ್ಷೇತ್ರದ ಜನರು ನನಗೆ ಅವಕಾಶ ಮಾಡಿಕೊಟ್ಟರೆ, ಅವರು ಬಯಸಿದರೆ 2023ರ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ' ಎಂದು ವಿವರಿಸಿದರು.



ಶನಿವಾರ ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ ಅಂಗವಾಗಿ ಸ್ವಾಮೀಜಿ ಕಂಚಿನ ಪುತ್ಥಳಿ ಮೆರವಣಿಗೆ ಮಾಡಲಾಯಿತು

# ಶಿವಕುಮಾರ ಸ್ವಾಮೀಜಿ ಸ್ಮರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ನಾಲ್ಕನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ ಶನಿವಾರ ನೆರವೇರಿತು. ಸ್ವಾಮೀಜಿ ಸ್ಮರಣೆಗೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಸರಳವಾಗಿ ಆಚರಣೆ ಮಾಡಲಾಗಿತ್ತು. ಆದರೆ ಈ ಬಾರಿ ಸಾಕಷ್ಟು ಜೋರಾಗಿಯೇ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಅನ್ನ, ಶಿಕ್ಷಣ, ಆಶ್ರಯ ನೀಡಿದ ತ್ರಿವಿಧ ದಾಸೋಹಿಯ ಗದ್ದುಗೆ ದರ್ಶನ ಪಡೆದು ಭಕ್ತರು ನಮಿಸಿದರು.

ಸ್ವಾಮೀಜಿ ಲಿಂಗೈಕ್ಯರಾದ ಜ. 21ರಂದು ರಾಜ್ಯದಾದ್ಯಂತ 'ದಾಸೋಹ ದಿನ'ವನ್ನಾಗಿ ಆಚರಣೆ ಮಾಡುವುದಾಗಿ ರಾಜ್ಯ ಸರ್ಕಾರ ಈಗಾಗಲೇ ಘೋಷಿಸಿದೆ. ಆದರೆ ಈ ಬಾರಿ ಸರ್ಕಾರದ ವತಿಯಿಂದ ಇಂತಹ ಕಾರ್ಯಕ್ರಮ ನಡೆಯಲಿಲ್ಲ. ಮಠದ ವತಿಯಿಂದ ಆಚರಿಸಲಾಯಿತು.

ತಮ್ಮ ಗುರು ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ತೆರಳಿದ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಪೂಜೆ ನೆರವೇರಿಸಿದರು. ವಿವಿಧ ಮಠಾಧೀಶರ ಸಮ್ಮುಖದಲ್ಲಿ ರುದ್ರಾಭಿಷೇಕ, ಪೂಜಾ ಕೈಂಕರ್ಯ ನಡೆದವು. ರುದ್ರಾಕ್ಷಿ ಮಂಟಪದಲ್ಲಿ ಸ್ವಾಮೀಜಿ ಕಂಚಿನ ಪುತ್ಥಳಿಯನ್ನು ಮೆರವಣಿಗೆ ಮಾಡಲಾಯಿತು. ಗದ್ದುಗೆ ಮಂದಿರದ ಮುಂಭಾಗದಿಂದ ಪ್ರಾರಂಭವಾಗಿ ವಸ್ತುಪ್ರದರ್ಶನದ ಆವರಣದವರೆಗೆ ನಡೆಯಿತು.

ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಭಗವಂತ ಖೂಬಾ, ಸಚಿವರಾದ ವಿ.ಸೋಮಣ್ಣ, ಜೆ.ಸಿ.ಮಾಧುಸ್ವಾಮಿ, ಆರಗ ಜ್ಞಾನೇಂದ್ರ, ಎಸ್‌.ಟಿ. ಸೋಮಶೇಖರ್, ಬಿ.ಸಿ. ನಾಗೇಶ್ ಇತರರು ಉಪಸ್ಥಿತರಿದ್ದರು.

### ದಾಸೋಹದಲ್ಲಿ ವಿಶ್ವ ದಾಖಲೆ: ಸಿ.ಎಂ

ಶಿವಕುಮಾರ ಸ್ವಾಮೀಜಿ ಸ್ಮರಣಾರ್ಥ ಜ. 21ರಂದು ರಾಜ್ಯದಲ್ಲಿ ಸರ್ಕಾರದ ವತಿಯಿಂದ ದಾಸೋಹ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮುಂದಿನ ದಿನಗಳಲ್ಲಿ ದಾಸೋಹ ದಿನವನ್ನು ಮಠಮಾನ್ಯಗಳಲ್ಲಿ ದೊಡ್ಡ ಮಟ್ಟದಲ್ಲಿ ಆಚರಣೆ ಮಾಡಲಾಗುವುದು. ವಿಶ್ವ ದಾಖಲೆ ಮಾಡುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಸ್ವಾಮೀಜಿ ಹುಟ್ಟೂರು ಮಾಗಡಿ ತಾಲ್ಲೂಕು ವೀರಾಪುರದಲ್ಲಿ ಸ್ವಾಮೀಜಿ ಪ್ರತಿಮೆ ನಿರ್ಮಾಣ ಕಾಮಗಾರಿ ಪರಿಶೀಲಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ವೇಗ ನೀಡಲಾಗುವುದು. ದಾಸೋಹ ದಿನವಾದ ಜ. 21ರಂದು ಸರ್ಕಾರಿ ರಜೆ ಘೋಷಣೆ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

## ಅನುಮಾನಾಸ್ಪದರಿಗೆ ಟಿಕೆಟ್ ಇಲ್ಲ: ಪರಮೇಶ್ವರ್

ಮಂಗಳೂರು: 'ಗೆದ್ದ ನಂತರ ಪಕ್ಷಾಂತರ ಮಾಡುವ ಸಾಧ್ಯತೆ ಇರುವ 'ಅನುಮಾನಾಸ್ಪದರಿಗೆ' ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ' ಎಂದು ಕೆಪಿಸಿಸಿ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಶನಿವಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, 'ಕಳೆದ ಬಾರಿ ಬಿಜೆಪಿಯವರು ಕಾಂಗ್ರೆಸ್ ಶಾಸಕರನ್ನು ಸೆಳೆದುಕೊಂಡರು. ಈ ಬಾರಿ ಜಾಗ್ರತೆ ವಹಿಸುತ್ತೇವೆ' ಎಂದರು.



## ಹೃದಯಾಘಾತ: ಜೆಡಿಎಸ್ ಅಭ್ಯರ್ಥಿ ಸಾವು



ಶಿವಾನಂದ ಪಾಟೀಲ್

ವಿಜಯಪುರ: ಜಿಲ್ಲೆಯ ಸಿಂದಗಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಿವಾನಂದ ಪಾಟೀಲ ಸೋಮಜ್ಯಾಳ (54) ಶುಕ್ರವಾರ ತಡರಾತ್ರಿ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ವಿಧಾನಸಭೆ ಚುನಾವಣೆಗೆ ಸಿಂದಗಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅವರು, ಸಾಕಷ್ಟು ತಯಾರಿ ನಡೆಸಿದ್ದರು. ಜ.18ರಂದು ಸಿಂದಗಿಯಲ್ಲಿ ಇವರ ನೇತೃತ್ವದಲ್ಲಿ ಜೆಡಿಎಸ್ ಪಂಚರತ್ನ ರಥಯಾತ್ರೆ ಬೃಹತ್ ಪ್ರಮಾಣದಲ್ಲಿ ನಡೆದಿತ್ತು. ಶುಕ್ರವಾರ ವಿಜಯಪುರ ನಗರ ಮತ್ತು ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದ್ದ ಜೆಡಿಎಸ್ ಚುನಾವಣಾ ಪ್ರಚಾರ ಸಭೆ, ಸಮಾವೇಶದಲ್ಲಿ ಕುಮಾರಸ್ವಾಮಿ ಅವರೊಂದಿಗೆ ಪಾಲ್ಗೊಂಡಿದ್ದರು.

ಪಕ್ಷದ ಕಾರ್ಯಕ್ರಮ ಮುಗಿಸಿ, ರಾತ್ರಿ ಸಿಂದಗಿಗೆ ಮರಳಿದ್ದರು. ತಡರಾತ್ರಿ ಅಸ್ವಸ್ಥಗೊಂಡಿದ್ದು, ಪಟ್ಟಣದಲ್ಲೇ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೃದಯಾಘಾತದಿಂದ ಸಾವನಪ್ಪಿದ್ದಾರೆ ಎಂದು ವೈದ್ಯರು ಪ್ರಕಟಿಸಿದರು.

ಜಿಲ್ಲೆಯ ಆಲಮೇಲ ತಾಲ್ಲೂಕು ಸೋಮಜ್ಯಾಳ ಗ್ರಾಮದವರಾಗಿದ್ದ ಅವರು 16 ವರ್ಷ ಸೇನೆಯಲ್ಲಿದ್ದರು. ಊರಿಗೆ ಮರಳಿದ ನಂತರ ಬಿಜೆಪಿ ಜೊತೆಗೆ ಗುರುತಿಸಿ ಕೊಂಡಿದ್ದರು. ಈಚೆಗೆ ಜೆಡಿಎಸ್ ಸೇರಿದ್ದರು.

ಸೋಮಜ್ಯಾಳದಲ್ಲೇ ಶನಿವಾರ ಸಂಜೆ ಅಂತ್ಯಕ್ರಿಯೆ ನಡೆಯಿತು. ಎಚ್‌.ಡಿ.ಕುಮಾರಸ್ವಾಮಿ, ಸಿ.ಎಂ.ಇಬ್ರಾಹಿಂ ಸೇರಿದಂತೆ ಬೆಂಬಲಿಗರು, ಮುಖಂಡರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

## 'ಪ್ರಜಾವಾಣಿ–75' ವಾಕಥಾನ್ ಯಶಸ್ವಿ




ತುಮಕೂರಿನಲ್ಲಿ ಶನಿವಾರ 'ಪ್ರಜಾವಾಣಿ'–75 ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಪ್ರಮುಖರು ಹೆಜ್ಜೆ ಹಾಕಿದರು. ಜಿಲ್ಲಾಧಿಕಾರಿ ವೈ.ಎಸ್‌.ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್‌ಕುಮಾರ್ ಶಹಪೂರವಾಡ್, ಜಿ.ಪಂ ಸಿಇಒ ಕೆ.ವಿದ್ಯಾಕುಮಾರಿ, ಸಿದ್ಧಗಂಗಾ ಆಸ್ಪತ್ರೆ ನಿರ್ದೇಶಕ ಡಾ.ಎಸ್‌.ಪರಮೇಶ್ ಇತರರು ಇದ್ದಾರೆ

ತುಮಕೂರು: 'ಪ್ರಜಾವಾಣಿ–75' ಅಮೃತ ಮಹೋತ್ಸವದ ಅಂಗವಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕೊರೆಯುವ ಚಳಿಯಲ್ಲೂ ಮುಂಜಾನೆಯೇ ನೂರಾರು ಮಂದಿ ಉತ್ಸಾಹದಿಂದಲೇ ಹೆಜ್ಜೆ ಹಾಕಿದರು. ಯುವಜನರು, ವಿದ್ಯಾರ್ಥಿ ಸಮೂಹ, ಪ್ರಾಧ್ಯಾಪಕರು, ಶಿಕ್ಷಕರ ವರ್ಗ, ವೈದ್ಯರು, ನರ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಕಾರ್ಯಕರ್ತರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ಸಾರ್ವಜನಿಕರು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು.

ಚಳಿಯನ್ನೂ ಲೆಕ್ಕಿಸದೆ ಹೆಜ್ಜೆಗಳನಿಟ್ಟರು. ನಡಿಗೆಯ ಮೂಲಕ ಚಳಿ ದೂರ ಮಾಡಿಕೊಂಡು ಮತ್ತಷ್ಟು ಬಿರುಸಾಗಿ ಸಾಗಿದರು. ವಾಕಥಾನ್ ಆರಂಭದ ಸ್ಥಳಕ್ಕೆ ಬಾರದವರು ರಸ್ತೆ ಮಧ್ಯದಲ್ಲಿ ಬಂದು ಸೇರಿಕೊಂಡರು. ವಾಕಥಾನ್ ಕೊನೆಗೊಳ್ಳುವವರೆಗೂ ಜನರು ಬಂದು ಸೇರಿಕೊಳ್ಳುತ್ತಲೇ ಇದ್ದರು.

ಬಿಜಿಎಸ್ ವೃತ್ತದಲ್ಲಿ (ಟೌನ್‌ಹಾಲ್ ವೃತ್ತ) ಜಿಲ್ಲಾಧಿಕಾರಿ ವೈ.ಎಸ್‌.ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್‌ಕುಮಾರ್ ಶಹಪೂರವಾಡ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ವಿದ್ಯಾಕುಮಾರಿ, ಸಿದ್ಧಗಂಗಾ ಆಸ್ಪತ್ರೆ ನಿರ್ದೇಶಕ ಡಾ.ಎಸ್. ಪರಮೇಶ್ ಜಂಟಿಯಾಗಿ ವಾಕಥಾನ್‌ಗೆ ಚಾಲನೆ ನೀಡಿದರು.

ನಂತರ ಅವರೂ ನಡಿಗೆ ಆರಂಭಿಸಿದರು. ಪ್ರಜಾವಾಣಿ ಪತ್ರಿಕೆಯ ಸಾಧನೆ, 75 ವರ್ಷಗಳ ಇತಿಹಾಸ, ಪತ್ರಿಕೆಯ ಜನಪರ ಕಾಳಜಿಯನ್ನು ಮೆಲುಕು ಹಾಕುತ್ತಾ, ಯುವಜನರೊಟ್ಟಿಗೆ ಚರ್ಚಿಸುತ್ತಾ ಸಾಗಿದರು.

ಬಿಜಿಎಸ್ ವೃತ್ತದಿಂದ ಬಿ.ಎಚ್‌.ರಸ್ತೆ, ಭದ್ರಮ್ಮ ವೃತ್ತ, ಶಿವಕುಮಾರ ಸ್ವಾಮೀಜಿ ವೃತ್ತದ ಮೂಲಕ ಸಾಗಿ ಸಿದ್ಧಗಂಗಾ ಆಸ್ಪತ್ರೆ ಆವರಣದಲ್ಲಿ ಕೊನೆಗೊಂಡಿತು. ತುಮಕೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಅವರು ಮುಕ್ತಾಯ ಸಮಾರಂಭದಲ್ಲಿ ಜತೆಯಾದರು.

ಪ್ರಜಾವಾಣಿ–75 ಅಮೃತ ಮಹೋತ್ಸವ ವಾಕಥಾನ್ ಅನ್ನು ಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಸ್ಮಾರ್ಟ್ ಸಿಟಿ ಸಹಯೋಗದಲ್ಲಿ ವಾಕಥಾನ್ ಆಯೋಜಿಸಲಾಗಿತ್ತು.

### ಮಯೂರ ಓದಿರಿ

ಜೈಪುರ ಸಾಹಿತ್ಯೋತ್ಸವದಲ್ಲಿ ಲೇಖಕ ಪುಷ್ಪೇಶ್ ಪಂತ್ ಪ್ರತಿಪಾದನೆ

# 'ತಾಯಿ ಇಲ್ಲದ ಭಾಷೆ ಹಿಂದಿ'

• ವಿಶಾಖ ಎನ್.



'ಏಕ್ ಹಿಂದಿ ಅನೇಕ್ ಹಿಂದಿ' ಗೋಷ್ಠಿಯಲ್ಲಿಗೀತಾಂಜಲಿ ಶ್ರೀ, ಪುಷ್ಪೇಶ್ ಪಂತ್

ಜೈಪುರ: 'ಹಿಂದಿ ಭಾಷೆಗೆ ಅಮ್ಮ ಇಲ್ಲ. ಬಾಡಿಗೆ ತಾಯಿಯೂ ಇಲ್ಲ. ಅಲ್ಲಿ ಇಲ್ಲಿ ನೋಡುತ್ತಾ, ಕಣ್ಣು ಪಿಳಿಪಿಳಿಸುತ್ತಾ ಇರುವ ಈ ಭಾಷೆಗೆ ರಾಷ್ಟ್ರಭಾಷೆಯ ಸ್ಥಾನ ದಕ್ಕಿಸಿಕೊಡುವ ಯಾವ ಇಚ್ಛಾಶಕ್ತಿಯೂ ಸರ್ಕಾರಕ್ಕೆ ಇದ್ದಂತೆ ಇಲ್ಲ' ಎಂದು ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಹಾಗೂ ಲೇಖಕ ಪುಷ್ಪೇಶ್ ಪಂತ್ ಹೇಳಿದರು.

ಜೈಪುರ ಸಾಹಿತ್ಯೋತ್ಸವದ ಮೂರನೇ ದಿನವಾದ ಶನಿವಾರ 'ಏಕ್ ಹಿಂದಿ ಅನೇಕ್ ಹಿಂದಿ' ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ವಿಕಿ ಡೋನರ್' ತರಹದವರು ವೀರ್ಯ ಕೊಟ್ಟು ಬೆಳೆಸಲು ಮುಂದೆ ಬಂದರೂ ಹಿಂದಿ ಭಾಷೆಗೆ ಬಾಡಿಗೆ ತಾಯಿಯೇ ಇಲ್ಲ. ಮೇರೆ ಪಾಸ್ ಮಾ ಹೈ ಎನ್ನುವ ಸ್ಥಿತಿಯಲ್ಲಿ ನಾವಿಲ್ಲ. ಬೇರೆ ಭಾಷೆಗಳ ಸಾಹಿತ್ಯವನ್ನೇ ನೆಚ್ಚಿಕೊಂಡು ಅದು ಸಾರಸತ್ವವನ್ನು ಕಡ ಪಡೆದುಕೊಳ್ಳುತ್ತಿದೆ. ಸ್ವಂತ ಕಾಲಿನ ಮೇಲೆ ಅದು ಇನ್ನೂ ನಿಲ್ಲಲು ಸಾಧ್ಯವಾಗಿಲ್ಲ. ಸರ್ಕಾರಕ್ಕೆ ಹಿಂದಿಯನ್ನು ರಾಷ್ಟ್ರಭಾಷೆ ಮಾಡುವ ಉತ್ಕಟತೆ ಇಲ್ಲ, ಹಿಂದೂಸ್ತಾನವನ್ನಷ್ಟೆ ಮಾಡುವ ಆಲೋಚನೆ ಇದೆ' ಎಂದು ವ್ಯಂಗ್ಯ ಬೆರೆಸಿದ ಧಾಟಿಯಲ್ಲಿ ಹೇಳಿದರು.


'ಉರ್ದು ಮೂಲದಿಂದ ಕಳಚಿಕೊಂಡು ನಿಧಾನವಾಗಿ ಹಿಂದಿ ಭಾಷೆಯು ತನ್ನ ಅಸ್ತಿತ್ವವನ್ನು ಸೃಷ್ಟಿಸಿಕೊಂಡಿದೆ. ಈಗ ದೇಶದಲ್ಲಿ ಬೇರೆ ಯಾವುದೇ ಭಾಷೆಗಳಿಗಿಂತಲೂ ಹೆಚ್ಚು ಕೃತಿಗಳು ಹಿಂದಿ ಭಾಷೆಯಲ್ಲಿ ಅನುವಾದಗೊಳ್ಳುತ್ತಿವೆ. ಭಾಷೆಯ ಬೆಳವಣಿಗೆಗೆ ಇದೂ ಕೊಡುಗೆ ನೀಡುತ್ತಿದೆ. ರಾಷ್ಟ್ರಭಾಷೆಯನ್ನಾಗಿ ಹಿಂದಿಯನ್ನು ಜಾರಿಗೆ ತರುವ ಪ್ರಯತ್ನಗಳೂ ನಡೆದಿವೆ. ಮುಂದೆ ಅದೂ ಸಾಧ್ಯವಾಗಬಹುದು' ಎಂದು ಕಾದಂಬರಿಗಾರ್ತಿ ಹಾಗೂ ಅನುವಾದಕಿ ಅನಾಮಿಕಾ ಆಶಾವಾದ ವ್ಯಕ್ತಪಡಿಸಿದರು.

'ಸಂವಹನ ಭಾಷೆಯಾಗಿ ಹಿಂದಿ ಇಡೀ ದೇಶದಲ್ಲಿಯೇ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಾ ಬಂದಿದೆ. ಇದು ಸ್ವಯಂ ಭಾಷೆಯ ಬೆಳವಣಿಗೆಗೆ ಪೂರಕವಾಗಿರುವ ಅಂಶ' ಎಂದು ಹೇಳಿದರು.

ಸಾಹಿತಿಗಳಾದ ಸಂಜೀವ್ ಛಡ್ಡಾ, ಗೀತಾಂಜಲಿ ಶ್ರೀ ಅವರೂ ಸಂವಾದದಲ್ಲಿದ್ದರು. ಲೇಖಕ ಯತೀಂದ್ರ ಮಿಶ್ರ ಗೋಷ್ಠಿಯನ್ನು ನಿರ್ವಹಿಸಿದರು.

## ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಇಂದಿನಿಂದ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ಸಮೀಪದ ಹೊಂಬುಜ ಅತಿಶಯ ಕ್ಷೇತ್ರದಲ್ಲಿ ಜ. 22ರಿಂದ 27ರವರೆಗೆ ನೂತನ ಮಾನಸ್ತಂಭೋಪರಿ ಚತುರ್ವಿಂಶತಿ ತೀರ್ಥಂಕರರ ಜಿನಬಿಂಬಗಳ ಪಂಚಕಲ್ಯಾಣ ಪೂರ್ವಕ ಪ್ರತಿಷ್ಠಾ ಮಹೋತ್ಸವ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮಗಳು ಜರುಗಲಿದೆ.



ನಗರದಲ್ಲಿ ಶನಿವಾರ ಪ್ರಣತಿ ಪ್ರತಿಷ್ಠಾನ ಆಯೋಜಿಸಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಗಾಯಕ ಹೊ.ನಾ.ರಾಘವೇಂದ್ರ ಗರ್ತಿಕೆರೆ (ಗರ್ತಿಕೆರೆ ರಾಘಣ್ಣ) ಅವರಿಗೆ 'ಕನ್ನಡ ಸಾಹಿತ್ಯ ಪ್ರಚಾರ ಪ್ರಣತಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಕ್ರಮಾ, ಪ್ರಣತಿ ಪ್ರತಿಷ್ಠಾನದ ಸದಸ್ಯ ಹನುಮಂತರಾವ್ ಕೌಲಗಿ, ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ, ಡಾ.ಮೇಖಲಾ ವೆಂಕಟೇಶ್ ಕವಿ ಬಿ.ಆರ್.ಲಕ್ಷ್ಮಣರಾವ್ ಮತ್ತು ಲೇಖಕ ಡುಂಡಿರಾಜ್ ಇದ್ದರು –ಪ್ರಜಾವಾಣಿ ಚಿತ್ರ

ಜೈಪುರ ಸಾಹಿತ್ಯೋತ್ಸವದಲ್ಲಿ ಸಂಪೂರ್ಣ ದಲಿತ ಭಾಷಣಕಾರರ ಮೊದಲ ಗೋಷ್ಠಿ

# ದಲಿತರ ಇತಿಹಾಸ ಎಲ್ಲಿದೆ?: ಸುಮಿತ್

ಪ್ರಜಾವಾಣಿ ವಾರ್ತೆ

ಜೈಪುರ: 'ಮೇಲ್ಜಾತಿಯ ಮೊಘಲರು ಹಾಗೂ ಮೇಲ್ಜಾತಿಯ ಹಿಂದೂಗಳ ನಡುವಿನ ಸೌಹಾರ್ದ ಸಂಬಂಧದ ಕಥೆಗಳನ್ನು ಇತಿಹಾಸ ಹೇಳುತ್ತದೆ. ಇಲ್ಲಿ ದಲಿತರ ಇತಿಹಾಸ ಎಲ್ಲಿ ಇದೆ ಎಂದು ಹುಡುಕಬೇಕಿದೆ' ಎಂದು 'ಅಫೇರ್ಸ್ ಆಫ್ ಕ್ಯಾಸ್ಟ್' ಲೇಖಕರೂ ಆಗಿರುವ ದಲಿತ ರ‍್ಯಾಪರ್ ಸುಮಿತ್ ಸಾಮೊಸ್ ವಿಷಾದಿಸಿದರು.

ಜೈಪುರ ಸಾಹಿತ್ಯೋತ್ಸವದಲ್ಲಿ ಶನಿವಾರ ನಡೆದ 'ಅಫೇರ್ಸ್ ಆಫ್ ಕಾಸ್ಟ್' (ಜಾತಿಯ ಸಂಬಂಧಗಳು) ಗೋಷ್ಠಿಯಲ್ಲಿ ಮಾತನಾಡಿದರು.

'ಟಿಪ್ಪು ಸುಲ್ತಾನ್ ಕೂಡ ಮಠಗಳನ್ನು ರಕ್ಷಿಸಿದ್ದ. ಹೈದರಾಬಾದ್ ನಿಜಾಮರು ಕಯಾಸ್ಥ ಬ್ರಾಹ್ಮಣರನ್ನು ಹತ್ತಿರ ಇಟ್ಟುಕೊಂಡಿದ್ದರು. ಇಂತಹ 'ಯುಗಳ ಇತಿಹಾಸ'ವನ್ನಷ್ಟೆ ನಾವು ಓದಿದ್ದೇವೆ. ನಮ್ಮಂಥ ದಲಿತರ ಇತಿಹಾಸವನ್ನೂ ಹೇಳಬೇಕಿದೆ. ಅದಕ್ಕೇ ನನ್ನ ಕೃತಿಯಲ್ಲಿ ಸೂಕ್ಷ್ಮ ಇತಿಹಾಸವನ್ನು ದಾಖಲಿಸಿರುವೆ. ಅದು ಅನುಭವ ಕೇಂದ್ರಿತವಾದ ವಿಕ್ಷತ ವಿವರಣೆ, ಆತ್ಮಕತೆ ಎಲ್ಲವೂ ಆಗಿದೆ' ಎಂದು ಹೇಳಿದರು.

ಒಡಿಶಾದ ಗುಡ್ಡಗಾಡು ಪ್ರದೇಶದಲ್ಲಿ ಶುಶ್ರೂಷಕಿಯಾಗಿದ್ದ ತಮ್ಮ ತಾಯಿ ಮೇಲ್ಜಾತಿಯವರ ಮನೆಗಳಿಗೆ ಹೋದಾಗ, ಅಲ್ಲಿ ರೋಗಿಗಳನ್ನು ಕಷ್ಟಪಟ್ಟು ಮನೆಯಿಂದ ಹೊರಕ್ಕೆ ತರುತ್ತಿದ್ದ ಪ್ರಸಂಗವನ್ನು ನೆನಪಿಸಿಕೊಂಡರು.

'ಮೇಲ್ಜಾತಿಯ ರೋಗಿ ಎಷ್ಟೇ ನಿಸ್ತೇಜವಾಗಿದ್ದರೂ ಬಲವಂತವಾಗಿ ಹೊರಗೆ ತರುತ್ತಿದ್ದರೇ ವಿನಾ ತಾಯಿಯನ್ನು ಒಳಗೆ ಬಿಡುತ್ತಿರಲಿಲ್ಲ. ಮೇಲ್ಜಾತಿಯ ಮಹಿಳೆಯರು, ಕೆರೆಯಿಂದ ನೀರನ್ನು ಕೊಡುತ್ತಿದ್ದ ಪಾತ್ರೆಗಳ ಮೇಲೆ ಮತ್ತೆ ನೀರು ಸುರಿದು ಒಳಗೆ ಇಡುತ್ತಿದ್ದುದು ಕಣ್ಣಿಗೆ ಕಟ್ಟಿದ ಹಾಗಿದೆ. ಇವೆಲ್ಲ ಪ್ರಸಂಗಗಳೇ ಪುಸ್ತಕ ಬರೆಯಲು ಪ್ರೇರಣೆ' ಎಂದು; ಜೆಎನ್‌ಯುನಲ್ಲಿ ಕಲಿತು, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿರುವ ಸುಮಿತ್ ಭಾವುಕರಾದರು.

'ಮೇಲ್ಜಾತಿಯವರನ್ನು ಗೇಲಿ ಮಾಡುತ್ತಲೇ ಕೇರಿಯಲ್ಲಿ ಬೆಳೆದ ತಮ್ಮಲ್ಲಿ ತಮ್ಮದೇ ಸಮುದಾಯದ ಪುಸ್ತಕಗಳನ್ನು ಪ್ರಕಟಿಸುವ ಉಮೇದು ಹುಟ್ಟಿದ ಬಗೆಯನ್ನು ಕವಿ, ಪ್ರಕಾಶಕ ಯೋಗೇಶ್ ಮೈತ್ರೇಯ ಬಿಚ್ಚಿಟ್ಟರು. ಸುಮಿತ್ ಕೃತಿಯನ್ನು ತಮ್ಮ 'ಪ್ಯಾಂಥರ್ಸ್ ಪಾ' ಪ್ರಕಾಶನ ಸಂಸ್ಥೆಯಿಂದ ನಾಗ್ಪುರದ ಯೋಗೇಶ್ ಪ್ರಕಟ ಮಾಡಿದ್ದಾರೆ. ಭಾರತದ ವಿವಿಧ ಭಾಗಗಳ ದಲಿತ ಸಂವೇದನೆಯ ಕೃತಿಗಳನ್ನು ಪ್ರಕಟಿಸುವ ಉಮೇದು ಅವರದ್ದು.

'ಕಾಸ್ಟ್ ಮ್ಯಾಟರ್ಸ್' ಕೃತಿಯ ಲೇಖಕ ಸೂರಜ್ ಯೆಂಗ್ಡೆ ಲವಲವಿಕೆಯಿಂದ ಕಾರ್ಯಕ್ರಮ ನಿರ್ವಹಿಸಿದರು. ಜೈಪುರ ಸಾಹಿತ್ಯೋತ್ಸವದಲ್ಲಿ ಸಂಪೂರ್ಣ ದಲಿತ ಮಾತುಗಾರರನ್ನು ಒಳಗೊಂಡ ಮೊದಲ ಗೋಷ್ಠಿ ಇದು ಎಂದು ಅವರು ಹೆಮ್ಮೆಯಿಂದ ಹೇಳಿದರು.

## ನಗರದಲ್ಲಿ ಎರಡು ದಿನ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾರಣಕ್ಕೆ ನಗರದ ಕೆಲವು ಪ್ರದೇಶಗಳಲ್ಲಿ ಎರಡು ದಿನ ವಿದ್ಯುತ್ ವ್ಯತ್ಯಯವಾಗಲಿದೆ.

ಜ.23ರಂದು ಲಕ್ಷ್ಮೀ ಲೇಔಟ್, ಸೌತ್ ಸಿಟಿ ಅಪಾರ್ಟ್‌ಮೆಂಟ್, ಕಮ್ಮನಹಳ್ಳಿ, ಶಾಂತಿನಿಕೇತನ, ದೊಡ್ಡಮ್ಮ ಲೇಔಟ್, ಪಾಂಡುರಂಗನಗರ ಲೇಔಟ್, ಮೋಟಪ್ಪ ಕಾಂಪೌಂಡ್, ಗುಡ್ ಹೋಮ್ಸ್, ಅರಕೆರೆ ಮೈಕೋ ಲೇಔಟ್, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ತಿಮ್ಮಪ್ರರೆಡ್ಡಿ ಲೇಔಟ್, ಬೃಂದಾವನ ಲೇಔಟ್, ಸನ್‌ಸಿಟಿ, ಸಾಯಿ ಎನ್‌ಕ್ಲೇವ್ ಸುತ್ತಮುತ್ತ ಹಾಗೂ ಜ.25ರಂದು ವೀವರ್ಸ್ ಕಾಲೊನಿ 1ರಿಂದ 9ನೇ ಕ್ರಾಸ್, ಮಾರುತಿ ನಗರ ಸುತ್ತಮುತ್ತಲ ಪ್ರದೇಶದಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.



## ಸಾರ್ವಜನಿಕರ ಮೇಲೆ ಕಾರು ಹರಿಸಲು ಯತ್ನ

ಬೆಂಗಳೂರು: ಅಪಘಾತವನ್ನುಂಟು ಮಾಡಿ ಸಾರ್ವಜನಿಕರ ಮೇಲೆಯೇ ಕಾರು ಹರಿಸಲು ಯತ್ನಿಸಿ ಚಾಲಕರೊಬ್ಬರು ಪರಾರಿಯಾಗಿದ್ದು, ಅವರ ಪತ್ತೆಗಾಗಿ ಮಲ್ಲೇಶ್ವರ ಸಂಚಾರ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

'ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಶುಕ್ರವಾರ ರಾತ್ರಿ ಬೈಕ್‌ಗೆ ಫಾರ್ಚ್ಯೂನರ್ ಕಾರೊಂದು ಡಿಕ್ಕಿ ಹೊಡೆದಿತ್ತು. ಬೈಕ್ ಸವಾರ ಗಾಯಗೊಂಡಿದ್ದರು. ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿತ್ತು. ಸ್ಥಳದಲ್ಲಿ ಸೇರಿದ್ದ ಸಾರ್ವಜನಿಕರು, ಕಾರು ಚಾಲಕನನ್ನು ಪ್ರಶ್ನಿಸಿದ್ದರು. ಅದೇ ಸಂದರ್ಭದಲ್ಲೇ ಆರೋಪಿತ ಚಾಲಕ, ಕಾರು ಸಮೇತ ಪರಾರಿಯಾಗಲು ಮುಂದಾಗಿದ್ದರು' ಎಂದು ಮೂಲಗಳು ಹೇಳಿವೆ.

## 'ಸುದ್ದಿ ಪ್ರಕಾಶಕರೊಂದಿಗೆ ಕಂಪನಿಗಳು ಆದಾಯ ಹಂಚಿಕೊಳ್ಳಲಿ'

ನವದೆಹಲಿ (ಪಿಟಿಐ): 'ದೈತ್ಯ ತಂತ್ರಜ್ಞಾನ ಕಂಪನಿಗಳು ತಮ್ಮ ಆದಾಯವನ್ನು ಡಿಜಿಟಲ್ ಸುದ್ದಿ ಪ್ರಕಾಶಕರೊಂದಿಗೆ ಹಂಚಿಕೊಳ್ಳಬೇಕು' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಅಪೂರ್ವ ಚಂದ್ರ ಶನಿವಾರ ತಿಳಿಸಿದ್ದಾರೆ.

'ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್ ಮತ್ತು ಯುರೋಪಿಯನ್ ಒಕ್ಕೂಟ ಈ ಸಂಬಂಧ ಈಗಾಗಲೇ ಉಪಕ್ರಮ ಕೈಗೊಂಡಿವೆ. ವಿಷಯ ಮತ್ತು ವಸ್ತು ಸೃಷ್ಟಿಸುವ ಪ್ರಕಾಶಕರು ಹಾಗೂ ತಂತ್ರಜ್ಞಾನ ಕಂಪನಿಗಳ ನಡುವೆ ಆದಾಯದ ನ್ಯಾಯಯೋಚಿತ ವಿಭಜನೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಸ್ಪರ್ಧಾ ಆಯೋಗವನ್ನೂ ಬಲಪಡಿಸಿವೆ' ಎಂದು ಡಿಜಿಟಲ್ ಸುದ್ದಿ ಪ್ರಕಾಶಕರ ಸಂಘಕ್ಕೆ (ಡಿಎನ್‌ಪಿಎ) ಶುಕ್ರವಾರ ರವಾನಿಸಿರುವ ಸಂದೇಶದಲ್ಲಿ ಅವರು ಹೇಳಿದ್ದಾರೆ.

'ಮೂಲ ವಿಷಯ ಮತ್ತು ವಸ್ತು ಸೃಷ್ಟಿಸುವ ಪ್ರಕಾಶಕರಿಗೆ ಆದಾಯದಲ್ಲಿ ನ್ಯಾಯಯೋಚಿತ ಪಾಲು ದೊರೆಯಬೇಕು. ಸುದ್ದಿ ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಇದು ಅಗತ್ಯ' ಎಂದಿದ್ದಾರೆ.

'ಕೋವಿಡ್ ನಂತರದ ಕಾಲಘಟ್ಟದಲ್ಲಿ ಡಿಜಿಟಲ್ ಸುದ್ದಿ ಉದ್ಯಮವಷ್ಟೇ ಅಲ್ಲದೆ ಮುದ್ರಣ ಮಾಧ್ಯಮಗಳೂ ಆರ್ಥಿಕ ಸಮಸ್ಯೆಯನ್ನು ಎದುರಿಸಿವೆ. ಮುದ್ರಣ ಮಾಧ್ಯಮಗಳ ಮೇಲೆ ಋಣಾತ್ಮಕ ಪರಿಣಾಮ ಉಂಟಾಗಿದ್ದೇ ಆದಲ್ಲಿ ಪತ್ರಿಕೋದ್ಯಮದ ಭವಿಷ್ಯ ಮಸುಕಾಗುವುದಂತೂ ಸ್ಪಷ್ಟ' ಎಂದು ಹೇಳಿದ್ದಾರೆ.



## ನಗರದಲ್ಲಿ ಇಂದು

**ಸೈಕ್ಲೋಥಾನ್:** ಆಯೋಜನೆ: ಜೈನ್ ವಿಶ್ವವಿದ್ಯಾಲಯ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 7

**'ಸತ್ಸಂಗ ಯುವ ದಿನ', ಉಚಿತ ನೇತ್ರ ಮತ್ತು ಆರೋಗ್ಯ ಚಿಕಿತ್ಸೆ:** ಅಧ್ಯಕ್ಷತೆ: ತದ್ಯುಕ್ತಾನಂದ ಸ್ವಾಮಿ ಮಹಾರಾಜ್, ತಿಪ್ಪೇಸ್ವಾಮಿ, ಅತಿಥಿಗಳು: ಮಿಲಿಂದ್ ಗೋಖಲೆ, ತೇಜಸ್ವಿಸೂರ್ಯ, ರವಿಸುಬ್ರಹ್ಮಣ್ಯ, ಆಯೋಜನೆ: ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ, ಸ್ಥಳ: ಕೊಹಿನೂರು ಆಟದ ಮೈದಾನ, ರಾಮಕೃಷ್ಣ ಮಠದ ಪಕ್ಕ, ಬಸವನಗುಡಿ, ಬೆಳಿಗ್ಗೆ 8ರಿಂದ


**ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನ:** ಉದ್ಘಾಟನೆ: ಶಿವರುದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ: ಅರಳುಮಲ್ಲಿಗೆ ಪಾರ್ಥಸಾರಥಿ, ಅತಿಥಿಗಳು: ವ್ಯಾಡೇ ಪಿ. ಕೃಷ್ಣ, ಎಚ್. ಬಿ. ಲಕ್ಷ್ಮೀನಾರಾಯಣ, ಆಶಯ ನುಡಿ: ವಾಸುದೇವ ಅಗ್ನಿಹೋತ್ರಿ, ಆರ್. ವಾದಿರಾಜು, ಕೃತಿ ಬಿಡುಗಡೆ: ಸತ್ಯವತಿ ಎಚ್.ಎ. ಅವರ 'ದಾಸ ದೀಪ್ತಿ', ಆಯೋಜನೆ: ಹರಿದಾಸ ಕೀರ್ತನ ಬಳಗ, ದಾಸಧೇನು ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

**ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ:** ಅಧ್ಯಕ್ಷತೆ: ಸದಾನಂದ, ಅತಿಥಿ: ಬಿ.ಎಲ್. ಶ್ರೀನಿವಾಸ್, ಉಪಸ್ಥಿತಿ: ಕೆ.ಬಿ. ಮಲ್ಲಿಕಾರ್ಜುನ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯುಎಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

**ಬೆಳ್ಳಿ ಮಹೋತ್ಸವ:** ಉದ್ಘಾಟನೆ: ಪಿ.ಸಿ. ಮೋಹನ್, ಅಧ್ಯಕ್ಷತೆ: ವಿ. ಸೋಮಣ್ಣ, ತೇಜಸ್ವಿಸೂರ್ಯ, ಗೋಪಾಲಯ್ಯ, ಆಯೋಜನೆ: ಸಿದ್ಧಿವಿನಾಯಕ ದಾವಡಿ, ಸ್ಥಳ: ಬಂಟರ ಸಂಘ, ಅತ್ತಿಗುಪ್ಪೆ, ವಿಜಯನಗರ, ಬೆಳಿಗ್ಗೆ 10

**ಮಹರ್ಷಿ ವಾಲ್ಮಿಕಿ ಪುತ್ಥಳಿ ಲೋಕಾರ್ಪಣೆ:** ಸಾನ್ನಿಧ್ಯ: ಪ್ರಸನ್ನಾನಂದ ಸ್ವಾಮೀಜಿ, ಸಂಜಯಕುಮಾರ ಸ್ವಾಮೀಜಿ, ಪ್ರಾಸ್ತಾವಿಕ: ಸಿಂಗಾಪುರ ವೆಂಕಟೇಶ್, ಅಧ್ಯಕ್ಷತೆ: ಎಂ.ಬಿ. ದಯಾನಂದ್, ಅತಿಥಿಗಳು: ಎಸ್.ಆರ್. ವಿಶ್ವನಾಥ್, ಆರ್. ಮಂಜುನಾಥ್, ಆಯೋಜನೆ: ಅಖಿಲ ಕರ್ನಾಟಕ ವಾಲ್ಮಿಕ ನಾಯಕ ಮಹಾಸಭಾ, ಕರ್ನಾಟಕ ಮದಕರಿ ನಾಯಕ ಸೇನೆ, ಸ್ಥಳ: ಮತ್ತಹಳ್ಳಿ ಗ್ರಾಮ, ದಾಸನಪುರ, ಬೆಳಿಗ್ಗೆ 10.30

**ಗಜಾನನ ಶರ್ಮ ಅವರ 'ಪ್ರಮೇಯ ಇದು ಆಳಿದವರ ಕಥೆಯಲ್ಲ, ಅಳಿದವರ ಕಥೆ', ಸು. ರುದ್ರಮೂರ್ತಿ ಶಾಸ್ತ್ರಿ ಅವರ 'ಶ್ರೀಕೃಷ್ಣ ಪುರುಷ ಪುರುಷೋತ್ತಮನಾದ ಕಥೆ' ಪುಸ್ತಕಗಳ ಬಿಡುಗಡೆ:** ನಾಗತಿಹಳ್ಳಿ ಚಂದ್ರಶೇಖರ್, ಅತಿಥಿಗಳು: ನಾಗೇಶ ಹೆಗಡೆ, ಆರ್. ಶೇಷಶಾಸ್ತ್ರಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30



ನಾಗತಿಹಳ್ಳಿ ಚಂದ್ರಶೇಖರ್

**ತೊಗಟವೀರ ಕ್ಷತ್ರೀಯ ಸಂಘದ ಅಮೃತ ಮಹೋತ್ಸವ:** ಸಾನ್ನಿಧ್ಯ: ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಸ್ಮರಣ ಸಂಚಿಕೆ ಬಿಡುಗಡೆ: ಬಿ.ಎಸ್. ಯಡಿಯೂರಪ್ಪ, ಕೈಮಗ್ಗ ಉದ್ಘಾಟನೆ: ಪಿ.ಸಿ. ಮೋಹನ್, ಅಧ್ಯಕ್ಷತೆ: ಬಿ.ಎಸ್. ಸೋಮಶೇಖರ್, ಆಯೋಜನೆ: ಕರ್ನಾಟಕ ರಾಜ್ಯ ತೊಗಟವೀರ ಕ್ಷತ್ರೀಯ ನೇಕಾರ ಸಂಘ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

**ವಿದ್ಯಾರ್ಥಿವೇತನ ವಿತರಣಾ ಸಮಾರಂಭ:** ಸದ್ಗುರು ಮಧುಸೂದನ್ ಸಾಯಿ, ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಆರ್.ಪಿ. ರವಿಶಂಕರ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಚಾರಿಟಬಲ್ ಟ್ರಸ್ಟ್, ಸ್ಥಳ: ಎ.ಪಿ. ಎಸ್. ಕಾಲೇಜು ಮೈದಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30


**ಎಸ್ಸೆಸ್ಸೆಲ್ಸಿ ತರಬೇತಿ ತರಗತಿಗಳ ಸಮಾರೋಪ ಸಮಾರಂಭ:** ಅತಿಥಿಗಳು: ಎಚ್.ಆರ್. ರಂಗನಾಥ್, ರಾಜಶೇಖರ್ ರಾವ್, ಆಯೋಜನೆ: ಕಬೀರ್ ಟ್ರಸ್ಟ್, ಸ್ಥಳ: ಪಟೇಲ್ಸ್ ಇನ್, ಆರ್.ಟಿ. ನಗರ, ಬೆಳಿಗ್ಗೆ 10.30

**ಶ್ರೀರಾಮಾಯಣ ಕೌಶಲ್ಯ ಸ್ಪರ್ಧೆಯ ಸಮಾರೋಪ ಸಮಾರಂಭ, ಬಹುಮಾನ ವಿತರಣೆ:** ಅತಿಥಿ: ತೇಜಸ್ವಿನಿ ಅನಂತಕುಮಾರ್, ಉಪನ್ಯಾಸಕರು: ಉಮಾಮಹೇಶ್ವರ ಎನ್., ಅಧ್ಯಕ್ಷತೆ: ಆರ್.ಎನ್. ಸ್ವಾಮಿ, ಆಯೋಜನೆ: ಜಯರಾಮ ಸೇವಾ ಮಂಡಳಿ, ಸಮ್ಯಕ್ ಪ್ರತಿಷ್ಠಾನ, ಸ್ಥಳ: ಜಿ. ವೆಂಕಟಸುಬ್ಬಯ್ಯ ಜನ್ಮಶತಾಬ್ದಿ ಕಲಾಭವನ, ಬೆಳಿಗ್ಗೆ 10.30

**ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ:** ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ಬಿ.ಎ. ವಿವೇಕ ರೈ, ಅತಿಥಿ: ಕಮಲಿನಿ ಬಾಲುವಾರ್, ಉಪಸ್ಥಿತಿ: ಪಿ.ವಿ. ನಾರಾಯಣ, ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

**ಅನಿತಾಕೌಲ್ ನೆನಪಿನ ರಾಜ್ಯಮಟ್ಟದ ಉತ್ತಮ ಶಿಕ್ಷಕ–ಶಿಕ್ಷಕಿ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಎಲ್. ಕೆ. ಅತೀಖ್, ಅಧ್ಯಕ್ಷತೆ: ಡಾ.ಸಿ.ಆರ್. ಚಂದ್ರಶೇಖರ್, ಅತಿಥಿಗಳು: ಬಿ.ಬಿ. ಕಾವೇರಿ, ಆರ್.ಎನ್. ರಾಜಾನಾಯಕ್, ಕೆ.ಬಿ. ಮಹದೇವಪ್ಪ, ಈ. ಬಸವರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಎಚ್. ನರಸಿಂಹಯ್ಯ ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

**'ಸಮರ್ಪಣಾ ದಿನ' ಸಂಭ್ರಮಾಚರಣೆ:** ಉದ್ಘಾಟನೆ: ಸ್ಮೃತಿ ಇರಾನಿ, ಅಧ್ಯಕ್ಷತೆ: ವಿಜಯಲಕ್ಷ್ಮಿ ದೇಶಮಾನೆ, ಅತಿಥಿ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿಗಳು: ಮಾನನೀಯ ಶಾಂತಕುಮಾರಿ, ಕಜಂಪಾಡಿ ಸುಬ್ರಹ್ಮಣ್ಯ ಭಟ್, ಆಯೋಜನೆ ಮತ್ತು ಸ್ಥಳ: ಅಬಲಾಶ್ರಮದ ಶತಮಾನ ಸಭಾಂಗಣ, ಡಿ.ವಿ.ಜಿ ರಸ್ತೆ, ಬಸವನಗುಡಿ, ಬೆಳಿಗ್ಗೆ 11



ಯದುವೀರ ಒಡೆಯರ್

**ಸಿ.ವಿ. ಶಶಿಕುಮಾರ್ ಅವರ 'ಧ್ರುವ ತಾರೆಯ ದಿಕ್ಕಿನಲ್ಲಿ' ಪುಸ್ತಕ ಬಿಡುಗಡೆ:** ವಿಶ್ವೇಶ್ವರ್ ಭಟ್, ಅತಿಥಿ: ಪಿ. ಶೇಷಾದ್ರಿ, ಆಯೋಜನೆ: ಸುಂದರ ಪ್ರಕಾಶನ, ಸಿ.ವಿ. ಎಸ್. ಸ್ನೇಹಿತರ ಬಳಗ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, 8ನೇ ಬ್ಲಾಕ್, ಜಯನಗರ, ಬೆಳಿಗ್ಗೆ 11.30

**ಸಿಐಟಿಯು ಅಖಿಲ ಭಾರತ ಸಮ್ಮೇಳನದ ಬಹಿರಂಗ ಸಭೆ:** ಭಾಷಣಕಾರರು: ಕೆ. ಹೇಮಲತಾ, ತಪನ್ ಸೇನ್, ಎಂ.ಎಸ್. ಮೀನಾಕ್ಷಿ ಸುಂದರಂ, ಕೆ. ಮಹಾಂತೇಶ್, ಬಿ.ಎನ್. ಮಂಜುನಾಥ್, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಮಧ್ಯಾಹ್ನ 1

**ಪುರಂದರದಾಸರ ಆರಾಧನಾ ಮಹೋತ್ಸವ:** ಭಜನೆ: ಸಪ್ತಗಿರಿ ಭಜನಾ ಮಂಡಳಿ, ಶೃತಿ ಸಂಗೀತ ವಿದ್ಯಾಲಯ, ಅತಿಥಿಗಳು: ಬಿ. ಗೋಪಾಲಾಚಾರ್ಯ, ಶೃಂಗೇರಿ ನಾಗರಾಜ್, ವಿಜಯಕುಮಾರ್ ತೋರ್ಗಲ್, ಆರ್.ಟಿ. ಕುಲಕರ್ಣಿ, 'ಹರಿದಾಸ ಅನುಗ್ರಹ ಪ್ರಶಸ್ತಿ' ಪುರಸ್ಕೃತರು: ಎನ್. ವಾಸುದೇವ್, ಮುರಳೀಧರ ಜಿ. ಕರಲಗಿಕರ್, ಪ್ರಲ್ಹಾದಾಚಾರ್ಯ, ಶ್ರೀಧರ್ ರಾಘವೇಂದ್ರ ಹಲಗಟ್ಟಿ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣ, ಉತ್ತರಾಧಿಮಠ, ಬಸವನಗುಡಿ, ಮಧ್ಯಾಹ್ನ 3.45ರಿಂದ

**ಅಂಗವಿಕಲರ ಸಂಸ್ಥೆಯ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ ಬಿಡುಗಡೆ, ಸಾಂಸ್ಕೃತಿಕ ಕಾರ್ಯಕ್ರಮ:** ಮಧ್ಯಾಹ್ನ 2ಕ್ಕೆ ಉದ್ಘಾಟನೆ: ವಿ. ಸೋಮಣ್ಣ, ಸಮಾರೋಪ ಸಮಾರಂಭ: ಅತಿಥಿ: ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಬಿ.ಟಿ. ಮುನಿಯಪ್ಪ, ಸ್ಮರಣ ಸಂಚಿಕೆ ಬಿಡುಗಡೆ: ಎಸ್.ಜಿ. ಸುಶೀಲಮ್ಮ, ಉಪಸ್ಥಿತಿ: ಎಲ್. ಯಶೋಧ ಚಿಕ್ಕಯ್ಯ, ಆಯೋಜನೆ: ವಿಜಯನಗರ ಅಂಗವಿಕಲರ ಕಲ್ಯಾಣ ಸಂಘ, ಸ್ಥಳ: ನಗರ ಕೇಂದ್ರ ಗ್ರಂಥಾಲಯ ಸಭಾಂಗಣ, ಹಂಪಿನಗರ, ಸಂಜೆ 5

**ಎಚ್.ವಿ. ನಾಗರಾಜರಾವ್ ಅವರಿಗೆ ಸಮ್ಮಾನ ಕಾರ್ಯಕ್ರಮ:** ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಭಿನಂದನ ಗ್ರಂಥ ಬಿಡುಗಡೆ: ಶತಾವಧಾನಿ ಆರ್. ಗಣೇಶ್, ಅಭಿನಂದನೆ ನುಡಿ: ರಾಮಚಂದ್ರ ಜಿ. ಭಟ್ಟ ಕೋಟೆಮನೆ, ಉಪಸ್ಥಿತಿ: ಬಿ.ವಿ. ಕುಮಾರ, ಅಧ್ಯಕ್ಷತೆ: ಗಿರೀಶಚಂದ್ರ, ಆಯೋಜನೆ: ವಿದ್ವಾನ್ ಎಚ್.ವಿ. ನಾಗರಾಜರಾವ್–ಸಮ್ಮಾನ ಸಮಿತಿ, ಸ್ಥಳ: ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ, ವಿಲ್ಸನ್ ಗಾರ್ಡನ್, ಸಂಜೆ 4

**ಸಿರಿಧಾನ್ಯ ಮೇಳ ಸಮಾರೋಪ ಸಮಾರಂಭ:** ಸಿರಿಧಾನ್ಯ ಉತ್ಪನ್ನಗಳ ಬಿಡುಗಡೆ: ಎ. ನಾರಾಯಣಸ್ವಾಮಿ, ಪ್ರಶಸ್ತಿ ಪ್ರದಾನ: ಎಸ್.ಟಿ. ಸೋಮಶೇಖರ್, ಉಪಸ್ಥಿತಿ: ಬಿ.ಸಿ. ಪಾಟೀಲ, ದರ್ಶನ್, ಅಧ್ಯಕ್ಷತೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಸಂಜೆ 4

**ವಾರ್ಷಿಕೋತ್ಸವ ಸಂಭ್ರಮ:** ಅತಿಥಿ: ಪಿ. ಶೇಷಾದ್ರಿ, ಅಧ್ಯಕ್ಷತೆ: ಕೆ. ಸತ್ಯನಾರಾಯಣ, ಉಪಸ್ಥಿತಿ: ಚಂದ್ರಶೇಖರ ಚಡಗ, ದೀಪಾ ಫಡಕೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ತರಳಬಾಳು ಕೇಂದ್ರ, ಸ್ಥಳ: ತರಳಬಾಳು ಗ್ರಂಥಾಲಯ, ಆರ್.ಟಿ. ನಗರ, ಸಂಜೆ 4

**'ನ್ಯಾಯಾಂಗದಲ್ಲಿ ಕನ್ನಡ' ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಬಸವರಾಜ ಬೊಮ್ಮಾಯಿ, ನ್ಯಾ.ಜಿ. ನರೇಂದರ್, ಅತಿಥಿಗಳು: ಜೆ.ಸಿ. ಮಾಧುಸ್ವಾಮಿ, ವಿ. ಸುನಿಲ್ ಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಶುಭನುಡಿ: ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಸಂಜೆ 4.30

**'ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ' ಫ್ಯಾಶನ್ ಷೋ:** ಅತಿಥಿಗಳು: ಭಾವನಾ ಬೆಳಗೆರೆ, ರಶ್ಮಿ ಹರಿಪ್ರಸಾದ್, ಚಾಂದಿನಿ ದಿಲೀಪ್, ಆಯೋಜನೆ: ಸ್ನಾಕ್ ಇವೆಂಟ್ ಸೆರ್, ಸ್ಥಳ: ಸುಭಾಷ್ ಭವನ, ರಾಜರಾಜೇಶ್ವರಿನಗರ, ಸಂಜೆ 5ರಿಂದ


**ಗಣಪತಿ ಎಸ್. ಹೆಗಡೆ ಅವರ 'ಅಂತಃಶಕ್ತಿಯ ಸಿದ್ಧಿ' ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ:** ಉದ್ಘಾಟನೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಅತಿಥಿಗಳು: ಪಿ. ನಾಗರಾಜ್, ರವಿ ಹೆಗಡೆ, ಸಿ.ಎಸ್. ಕೃಷ್ಣಸೆಟ್ಟಿ, ಭಾವನಾ, ಚಂದ್ರನಾಥ್ ಆಚಾರ್ಯ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಸಂಜೆ 5

**ರಾಜ್ಯಮಟ್ಟದ ಸಾಂಸ್ಕೃತಿಕ ಮತ್ತು ಪ್ರೇರಣಾ ಕಾರ್ಯಕ್ರಮದ ಸಮಾರೋಪ ಸಮಾರಂಭ:** ಅತಿಥಿಗಳು: ಎಲ್. ಹನುಮಂತಯ್ಯ, ರವೀಂದ್ರ ಭಟ್ಟ, ಭಾರತಿ ಶುಭಂ ದಡೆಲ್, ಆಯೋಜನೆ: ಸ್ನೇಹದೀಪ್ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಸ್ಥಳ: ಜಲಮಂಡಳಿ ರಜತ ಭವನ, ಮಲ್ಲೇಶ್ವರ, ಸಂಜೆ 5.30

**'ಮುಖ್ಯಮಂತ್ರಿ' ನಾಟಕ ಪ್ರದರ್ಶನ:** ಮುಖ್ಯಪಾತ್ರ: 'ಮುಖ್ಯಮಂತ್ರಿ' ಚಂದ್ರು, ಕನ್ನಡ ರೂಪ: ಟಿ.ಎಸ್. ಲೋಹಿತಾಶ್ವ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ ರಂಗ ತಂಡ, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಸಂಜೆ 6

**ಅಮೃತೇಶ್ ಕುಲಕರ್ಣಿ ಅಭಿನಂದನಾ ಸಮಾರಂಭ:** ಸತೀಶ್ ಹಂಪಿಹೊಳಿ, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಅಭಿನಂದನೆ: ಸಂತೋಷ್ ಹೆಗ್ಡೆ, ಆಯೋಜನೆ: ಶರ್ಮಾ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಅಶ್ವತ್ಥ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 6

**ಭರತನಾಟ್ಯ ರಂಗಪ್ರವೇಶ ಪ್ರಸ್ತುತಿ:** ದಿವ್ಯಾ ವಿಜಯಲಕ್ಷ್ಮಿ ಧರ್ಮರಾಜನ್, ಆಯೋಜನೆ: ನಟನಂ, ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಜೆ.ಎಸ್.ಎಸ್. ಸಭಾಭವನ, ಜಯನಗರ, ಸಂಜೆ 6



**'ಮಧ್ವ ನವರಾತ್ರೋತ್ಸವ':** ಪ್ರವಚನ: ಮರುತಾಚಾರ್, ವಿಷಯ: 'ವೇದಗಳಲ್ಲಿ ಆಚಾರ್ಯರ ಮಹಿಮೆ', ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಮಲ್ಲೇಶ್ವರ, ಸಂಜೆ 6.30

**'ಚೆಕಾವ್ ಟು ಶಾಂಪೇನ್' ನಾಟಕ ಪ್ರದರ್ಶನ:** ನಿರ್ದೇಶನ: ಅಭಿಮನ್ಯು ಭೂಪತಿ, ರಚನೆ: ಹೇಮಾ ಪಟ್ಟಣಶೆಟ್ಟಿ, ಆಯೋಜನೆ: ಬೆಂಗಳೂರು ಥಿಯೇಟರ್ ಅನ್ಸಂಬಲ್, ಸ್ಥಳ: ಡಮರು, ಶಂಕರ ಫೌಂಡೇಶನ್, ಕನಕಪುರ ರಸ್ತೆ, ದೊಡ್ಡಕಲ್ಲಸಂದ್ರ, ಸಂಜೆ 7.

**ಶತಮಾನೋತ್ಸವ ಮತ್ತು ವಾರ್ಷಿಕೋತ್ಸವ ಕಾರ್ಯಕ್ರಮ:** **ಸಾನ್ನಿಧ್ಯ:** ರೇಣುಕಾಶಿವಾಚಾರ್ಯ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಎಸ್.ಟಿ. ಸೋಮಶೇಖರ್, 'ಸಿದ್ದೇಶ್ವರ ಸ್ವಾಮೀಜಿ ಪ್ರವಚನ ಮಾಲೆ' ಪುಸ್ತಕ ಬಿಡುಗಡೆ: ಗೊ.ರು. ಚನ್ನಬಸಪ್ಪ, 'ಸಾಹಿತ್ಯ ಸಂಸ್ಕೃತಿ ಶತ ಕಾವ್ಯಗುಚ್ಛ' ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ವೀಣಾ ಬನ್ನಂಜೆ, ಪ್ರಭು ಶಂಕರ್, ಲಂಡನ್ ಮಹಾದೇವಯ್ಯ, ಕೆ.ವಿ. ನಾಗರಾಜಮೂರ್ತಿ, ಟಿ.ಟಿ. ವೆಂಕಟೇಶ್, ಪ್ರಮೀಳಾ ನಾಯಕ್, ಆಯೋಜನೆ: ಸಾಹಿತ್ಯ ಸಂಸ್ಕೃತಿ ವೇದಿಕೆ, ಸ್ಥಳ: ಸಾಹಿತ್ಯ ರತ್ನ ಆರ್. ಸದಾಶಿವಯ್ಯ ಕಲಾಮಂಟಪ, ಆಗರ ಗ್ರಾಮ, ಕೆಂಗೇರಿ ಹೋಬಳಿ, ಬೆಳಿಗ್ಗೆ 10

ರಸ್ತೆ ಸುರಕ್ಷತಾ ಸಪ್ತಾಹದ ಸಮಾರೋಪ: ವಿಜೇತರಿಗೆ ಬಹುಮಾನ ವಿತರಣೆ

# ‘ವರ್ಷದಲ್ಲಿ 36 ಸಾವಿರ ಅಪಘಾತ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯದಲ್ಲಿ ಕಳೆದೊಂದು ವರ್ಷದಲ್ಲಿ ಒಟ್ಟು 36 ಸಾವಿರ ಅಪಘಾತಗಳು ಸಂಭವಿಸಿವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅಪಘಾತಕ್ಕೀಡಾದ ಒಟ್ಟು 7 ಸಾವಿರ ಸವಾರರ ಪೈಕಿ ಶೇ.60ರಷ್ಟು ಮಧ್ಯಮ ವಯಸ್ಸಿನವರು’ ಎಂದು ಸಂಚಾರ ವಿಭಾಗದ ವಿಶೇಷ ಕಮಿಷನರ್ ಡಾ.ಎಂ.ಎ.ಸಲೀಂ ಮಾಹಿತಿ ನೀಡಿದರು.

ಸಾರಿಗೆ ಇಲಾಖೆ ಹಾಗೂ ನಗರ ಸಂಚಾರ ಪೊಲೀಸ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ರಸ್ತೆ ಸುರಕ್ಷತೆ ಬಗ್ಗೆ ಹೆಚ್ಚು ಅರಿವು ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ 7 ದಿನಗಳ ಕಾಲ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಆಚರಿಸಲಾಗುತ್ತಿದೆ. ಸಾರಿಗೆ ಇಲಾಖೆ ಹಾಗೂ ಸಂಚಾರ ಪೊಲೀಸರು ಜಾರಿಗೆ ತಂದಿರುವ ನಿಯಮಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲಿಸಬೇಕು’ ಎಂದು ಹೇಳಿದರು.

ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ.ಪ್ರಸಾದ್ ಮಾತನಾಡಿ, ‘ವಾಹನ ಚಾಲಕರು ಕಡ್ಡಾಯವಾಗಿ ರಸ್ತೆ ನಿಯಮ ಪಾಲಿಸುವುದರ ಮೂಲಕ ರಸ್ತೆ ಅಪಘಾತ ತಡೆಗಟ್ಟಿ ಜೀವ ರಕ್ಷಿಸಿಕೊಳ್ಳಿ. ಸಾರ್ವಜನಿಕರು ಸಾರಿಗೆಯನ್ನು ಆದಷ್ಟು ಉಪಯೋಗಿಸಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರಿನಲ್ಲಿ ಸೀಟ್ ಬೆಲ್ಟ್ ಧರಿಸಿ ವಾಹನ ಚಲಾಯಿಸಬೇಕು’ ಎಂದು ಸಲಹೆ ನೀಡಿದರು.

‘ರಸ್ತೆ ಅಪಘಾತಗಳನ್ನು ತಪ್ಪಿಸಲು ಸಂಚಾರ ನಿಯಮಗಳು ಹಾಗೂ ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

ಸಪ್ತಾಹದ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಸಪ್ರಶ್ನೆ, ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಆಶು ಭಾಷಣ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತ ಎಸ್.ಎನ್.ಸಿದ್ದರಾಮಪ್ಪ, ರಸ್ತೆ ಸುರಕ್ಷತಾ ಪ್ರಾಧಿಕಾರದ ಹೆಚ್ಚುವರಿ ಸಾರಿಗೆ ಆಯುಕ್ತ ಜೆ.ಪುರುಷೋತ್ತಮ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್.ಅನುಚೇತ್ ಹಾಜರಿದ್ದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಪ್ರಮುಖ ಜಂಕ್ಷನ್‌ಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ (ಎಡದಿಂದ) ಟ್ರಾಫಿಕ್ ಇನ್‌ಸ್ಪೆಕ್ಟರ್‌ಗಳಾದ ಬಿ.ಆರ್‌.ರಾಘವೇಂದ್ರ (ಯಶವಂತಪುರ), ಕೆ.ವಸಂತಕುಮಾರ್ (ಹೆಬ್ಬಾಳ), ಕೆ.ಒ.ಪುಟ್ಟಓಬಲ ರೆಡ್ಡಿ (ವೈಟ್‌ಫೀಲ್ಡ್) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಿಸಿಪಿ ಕುಲದೀಪ್ ಜೈನ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್‌.ಅನುಚೇತ್, ಸಂಚಾರ ವಿಭಾಗದ ವಿಶೇಷ ಪೊಲೀಸ್ ಕಮಿಷನರ್ ಡಾ.ಎಂ.ಎ.ಸಲೀಂ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್‌.ವಿ.ಪ್ರಸಾದ್ ಇದ್ದರು – ಪ್ರಜಾವಾಣಿ ಚಿತ್ರ

# ಮೆಟ್ರೊ ಎಂ.ಡಿ ವಿಚಾರಣೆ

## ಚೌಕಟ್ಟು ಉರುಳಿಬಿದ್ದು ತಾಯಿ– ಮಗು ಸಾವು ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ– ಮಗು ಮೃತಪಟ್ಟ ಪ್ರಕರಣದಲ್ಲಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಅಂಜುಂ ಪರ್ವೇಜ್ ಅವರನ್ನು ಪೊಲೀಸರು ಶನಿವಾರ ವಿಚಾರಣೆ ನಡೆಸಿದರು.

ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೀಡಿದ್ದ ಮೊದಲ ನೋಟಿಸ್ ಸ್ವೀಕರಿಸಿದ್ದ ಅಂಜುಂ, ಅನಾರೋಗ್ಯವೆಂದು ಹೇಳಿ ಗುರುವಾರ ಗೈರಾಗಿದ್ದರು. ಹೀಗಾಗಿ, ಪೊಲೀಸರು ಶುಕ್ರವಾರ ಎರಡನೇ ಬಾರಿ ನೋಟಿಸ್ ನೀಡಿದ್ದರು. ವಿಚಾರಣೆಗೆ ಹಾಜರಾಗದಿದ್ದರೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂಬುದಾಗಿ ಎಚ್ಚರಿಸಿದ್ದರು.

ಎರಡನೇ ನೋಟಿಸ್ ಕೈ ಸೇರುತ್ತಿದ್ದಂತೆ ಅಂಜುಂ, ಪೂರ್ವ ವಿಭಾಗದ ಡಿಸಿಪಿ ಕಚೇರಿಗೆ ಶನಿವಾರ ಹಾಜರಾಗಿ ವಿಚಾರಣೆ ಎದುರಿಸಿದರು. ಪ್ರಕರಣದ ತನಿಖಾಧಿಕಾರಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ, ಹೇಳಿಕೆ ದಾಖಲಿಸಿದರು.

‘ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಜ. 10ರಂದು ಬೆಳಿಗ್ಗೆ ಬೈಕ್ ಮೇಲೆ ಉರುಳಿಬಿದ್ದಿತ್ತು. ಬೈಕ್‌ನಲ್ಲಿ ಹೊರಟಿದ್ದ ತಾಯಿ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ಮೃತಪಟ್ಟಿದ್ದರು. ಘಟನೆಗೆ ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳ ನಿರ್ಲಕ್ಷ್ಯ ಕಾರಣವೆಂಬ ಆರೋಪವಿದೆ. ಇದೇ ಕಾರಣಕ್ಕೆ, ಅಂಜುಂ ಅವರನ್ನು ವಿಚಾರಣೆ ಒಳಪಡಿಸಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣ ಸಂಬಂಧ ಈಗಾಗಲೇ ಕೆಲ ಎಂಜಿನಿಯರ್‌ಗಳ ವಿಚಾರಣೆ ನಡೆಸಲಾಗಿತ್ತು. ಅವರೆಲ್ಲರ ಹೇಳಿಕೆಯಲ್ಲಿ ಉಲ್ಲೇಖವಾಗಿದ್ದ ಕೆಲ ಸಂಗತಿಗಳ ಬಗ್ಗೆ ಅಂಜುಂ ಅವರಿಂದ ಮಾಹಿತಿ ಪಡೆಯಲಾಗಿದೆ. ಇವರ ಹೇಳಿಕೆಯನ್ನೂ ಪರಿಶೀಲಿಸಲಾಗುತ್ತಿದೆ. ವಿಚಾರಣೆ ಅಗತ್ಯವಿದ್ದರೆ ಪುನಃ ಅವರಿಗೆ ನೋಟಿಸ್ ನೀಡಲಾಗುವುದು’ ಎಂದು ಮೂಲಗಳು ತಿಳಿಸಿವೆ.

### ‘ಪೊಲೀಸರ ಪ್ರಶ್ನೆಗಳಿಗೆ ಉತ್ತರ’



‘ಪೊಲೀಸರು ನೋಟಿಸ್ ನೀಡಿದ್ದರಿಂದ ಎರಡು ಗಂಟೆ ವಿಚಾರಣೆ ಎದುರಿಸಿದೆ. ಅವರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ’ ಎಂದು ಅಂಜುಂ ಪರ್ವೇಜ್ ಹೇಳಿದರು.

ವಿಚಾರಣೆ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಂದೆ ಇಂಥ ದುರಂತಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ, ಕಾರ್ಯ ವಿಧಾನವನ್ನೇ ಬದಲಿಸುತ್ತಿದ್ದೇವೆ. ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳಿಗೆ ಹೊಸದಾಗಿ ತರಬೇತಿ ಕೊಡಿಸಲಾಗುತ್ತಿದೆ’ ಎಂದರು.

## ಸ್ಯಾಂಟ್ರೊ ಪ್ರಕರಣ: ಸಿಐಡಿಗೆ ಹೇಳಿಕೆ ನೀಡಿದ ಸಂತ್ರಸ್ತೆ

**ಬೆಂಗಳೂರು:** ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ, ಹಲ್ಲೆ ಮಾಡಿ, ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ (51) ವಿರುದ್ಧ ದಾಖಲಾಗಿರುವ ಪ್ರಕರಣ ಸಂಬಂಧ ಸಂತ್ರಸ್ತೆಯಿಂದ ಸಿಐಡಿ ಅಧಿಕಾರಿಗಳು ಶನಿವಾರ ಮಾಹಿತಿ ಪಡೆದುಕೊಂಡರು.

ಮೈಸೂರಿನ ವಿಜಯನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲವು ಮಾಹಿತಿಗಳನ್ನು ನೀಡುವಂತೆ ಕೋರಿ ಸಿಐಡಿ ಅಧಿಕಾರಿಗಳು ಸಂತ್ರಸ್ತೆಗೆ ಪತ್ರ ಬರೆದಿದ್ದರು. ಅದರಂತೆ ನಗರದ ಸಿಐಡಿ ಕಚೇರಿಗೆ ಶನಿವಾರ ಬಂದಿದ್ದ ಸಂತ್ರಸ್ತೆ, ಕೃತ್ಯಕ್ಕೆ ಸಂಬಂಧಪಟ್ಟಂತೆ ಪುನಃ ಹೇಳಿಕೆ ನೀಡಿದ್ದಾರೆ.

‘ಪ್ರಕರಣದ ತನಿಖೆಗೆ ಸಂತ್ರಸ್ತೆ ಹೇಳಿಕೆ ಅಗತ್ಯವಿತ್ತು. ಹೀಗಾಗಿ, ಅವರಿಂದ ಹೇಳಿಕೆ ಪಡೆದು ತನಿಖೆ ಮುಂದುವರಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

# ‘ಚೌಕಟ್ಟಿಗೆ ಆಸರೆ ಇಲ್ಲದ್ದರಿಂದ ಅವಘಡ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ– ಮಗು ಮೃತಪಟ್ಟ ಪ್ರಕರಣದ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಿರುವ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ‘ಕಬ್ಬಿಣದ ಚೌಕಟ್ಟಿಗೆ ಆಸರೆಯಾಗಿ ಕಟ್ಟಲಾಗಿದ್ದ ಕಬ್ಬಿಣದ ಹಗ್ಗಗಳನ್ನು ತೆರವುಗೊಳಿಸಿದ ಬಳಿಕ ಒಂದು ದಿನ ಪೂರ್ತಿ ಅಸುರಕ್ಷಿತ ಸ್ಥಿತಿಯಲ್ಲೇ ಇತ್ತು. ಅನಾಹುತಕ್ಕೆ ಇದೇ ಕಾರಣ’ ಎಂದು ಅಭಿಪ್ರಾಯಪಟ್ಟಿದೆ.

ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಜೆ.ಎಂ. ಚಂದ್ರಕಿಶನ್ ನೇತೃತ್ವದ ತಂಡ 27 ಪುಟಗಳ ವರದಿ ಸಿದ್ಧಪಡಿಸಿದ್ದು, ಇ-ಮೇಲ್ ಮೂಲಕ ವರದಿಯನ್ನು ಬಿಎಂಆರ್‌ಸಿಎಲ್‌ಗೆ ಸಲ್ಲಿಸಿದೆ. 18 ಮೀಟರ್ ಎತ್ತರದ ಕಂಬಕ್ಕೆ ಯಾವುದೇ ಆಸರೆ ಇಲ್ಲದಿದ್ದರಿಂದ ರಸ್ತೆಗೆ ವಾಲಿದೆ ಎಂಬುದು ಪರಿಶೀಲನೆ ವೇಳೆ ಗೊತ್ತಾಗಿದೆ ಎಂದು ವರದಿಯಲ್ಲಿ ತಿಳಿಸಿದೆ.

ಈ ರೀತಿಯ ಕಂಬ ನಿರ್ಮಾಣ ಮಾಡುವಾಗ ಆಸರೆಗಾಗಿ ಕಬ್ಬಿಣದ ಹಗ್ಗಗಳಿಂದ ಬಿಗಿಯಲಾಗುತ್ತದೆ. ಅದನ್ನು ತೆರವುಗೊಳಿಸಿದ ತಕ್ಷಣ ವೃತ್ತಾಕಾರದ ಕಬ್ಬಿಣದ ಪ್ಲೇಟ್‌ಗಳನ್ನು ಜೋಡಿಸಬೇಕು. ಅಲ್ಲಿಯ ತನಕ ಸುರಕ್ಷತೆ ದೃಷ್ಟಿಯಿಂದ ಕ್ರೇನ್‌ನಿಂದ ಆಸರೆ ನೀಡಬೇಕಿತ್ತು. ಈಗ ಬಿದ್ದಿರುವ ಚೌಕಟ್ಟಿಗೆ ಈ ರೀತಿಯ ಯಾವುದೇ ಆಸರೆ ಇರಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಈ ರೀತಿಯ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ಕಾರ್ಮಿಕರಿಗೆ ತಿಳಿವಳಿಕೆ ನೀಡಬೇಕು. ಹೊಸದಾಗಿ ಬರುವ ಕಾರ್ಮಿಕರಿಗೆ ತರಬೇತಿ ನೀಡಬೇಕು ಎಂದು ವರದಿಯಲ್ಲಿ ತಿಳಿಸಿದೆ.

ಘಟನೆಗೆ ಕಾರಣ ಏನು ಎಂಬುದನ್ನಷ್ಟೇ ಐಐಎಸ್‌ಸಿ ತಂಡ ಹೇಳಿದ್ದು, ಯಾರು ಹೊಣೆ ಎಂಬುದು ಪೊಲೀಸ್ ಮತ್ತು ಬಿಎಂಆರ್‌ಸಿಎಲ್ ನಡೆಸುತ್ತಿರುವ ಹೆಚ್ಚುವರಿ ತನಿಖೆಯಿಂದ ಗೊತ್ತಾಗಬೇಕಿದೆ.

ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಜ. 10ರಂದು ಬೆಳಿಗ್ಗೆ ಬೈಕ್ ಮೇಲೆ ಉರುಳಿಬಿದ್ದಿತ್ತು. ಬೈಕ್‌ನಲ್ಲಿ ಹೊರಟಿದ್ದ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ಮೃತಪಟ್ಟಿದ್ದರು.

ಗುರು ರಾಘವೇಂದ್ರ ಬ್ಯಾಂಕ್ ಹಗರಣ

# ‘ಸಿಬಿಐಗೆ ವಹಿಸಿದರೆ ಸಾಕ್ಷ್ಯ ನೀಡುತ್ತೇವೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಗುರು ರಾಘವೇಂದ್ರ ಬ್ಯಾಂಕ್ ಹಗರಣವನ್ನು ಸಿಬಿಐಗೆ ವಹಿಸುವುದಾಗಿ ಸಹಕಾರ ಸಚಿವರು ಭರವಸೆ ನೀಡಿದ್ದಾರೆ. ಆದರೆ, ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪ ಆಗಿಲ್ಲ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಹೇಳಿದರು.

ಕೆಪಿಸಿಸಿ ವಕ್ತಾರರಾದ ರಮೇಶ್ ಬಾಬು ಮತ್ತು ಶಂಕರ್ ಗುಹಾ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬ್ಯಾಂಕಿನಲ್ಲಿ ಬಹುತೇಕ ಬೋಗಸ್ ಸಾಲ ನೀಡಲಾಗಿದೆ. ಅವರು ಯಾರು ಎಂದು ಸರ್ಕಾರಕ್ಕೂ ಗೊತ್ತಿದೆ. ವರದಕ್ಷಿಣೆ ಕಿರುಕುಳ ದೂರು ಬಂದರೆ ಇಡೀ ಮನೆಯವರನ್ನು ಪೊಲೀಸರು ಕರೆದೊಯ್ಯುತ್ತಾರೆ. ಆದರೆ, ಇಲ್ಲಿ ಸಾಲ ಮಾಡಿರುವವರ ಮನೆಯವರು ಹಾಗೂ ಅವರ ಆಸ್ತಿ ಯಾಕೆ ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ’ ಎಂದರು.

‘ಜನರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಸರಿಯಾದ ತನಿಖೆ ಮಾಡಿದರೆ ಸರ್ಕಾರ ಯಾರ ರಕ್ಷಣೆ ಮಾಡುತ್ತಿದೆ ಎಂದು ಗೊತ್ತಾಗುತ್ತದೆ. ಇಲ್ಲಿ ಕಾನೂನಾತ್ಮಕವಾಗಿ ಏನೂ ನಡೆದಿಲ್ಲ. ಇದರಲ್ಲಿ ದೊಡ್ಡವರ ಪಾತ್ರ ಇದೆ. ಸಿಬಿಐ ತನಿಖೆಗೆ ನೀಡಿದರೆ ನಾವು ನಮ್ಮ ಬಳಿ ಇರುವ ಸಾಕ್ಷ್ಯಗಳನ್ನು ನೀಡುತ್ತೇವೆ’ ಎಂದರು.

ಶಂಕರ್ ಗುಹಾ ಮಾತನಾಡಿ, ‘ಬ್ಯಾಂಕಿನಿಂದ ಸಾಲ ತೆಗೆದುಕೊಂಡಿರುವ ದಾಖಲೆ ಇದೆ. ಅದಕ್ಕೆ ನೀಡಿರುವ ಆಸ್ತಿ ದಾಖಲೆಯೂ ಇದೆ. ಆದರೆ, ಸಾಲದ ಹಣ ವರ್ಗಾವಣೆ ಆಗಿರುವ ದಾಖಲೆ ಇಲ್ಲ. ನಾನು ಹಲವು ಬಾರಿ ಸಿಬಿಐಗೆ ವಿಚಾರಣೆ ನೀಡಿ ಎಂದು ಮನವಿ ಮಾಡಿದರೂ ಪರಿಗಣಿಸಲಿಲ್ಲ. ಆದರೆ, ಈಗ ಮುಂದಾಗಿರುವುದು ರಾಜಕೀಯ ಪ್ರೇರಣೆಯೋ, ಅಥವಾ ಇಲ್ಲಿ ಏನೂ ಸಿಗಲ್ಲ ಎಂಬ ಖಚಿತತೆ ಸಿಕ್ಕಿದೆಯೇ ಗೊತ್ತಿಲ್ಲ’ ಎಂದರು.

‘ಪ್ರಕರಣವನ್ನು ಕೂಡಲೇ ಸಿಬಿಐ ತನಿಖೆಗೆ ನೀಡಿ ಠೇವಣಿದಾರರಿಗೆ ನ್ಯಾಯ ಒದಗಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಹಾಗೂ ಠೇವಣಿದಾರರಿಗೆ ಹಣ ವಾಪಸ್ ಸಿಗುವಂತೆ ಮಾಡಬೇಕು’ ಎಂದು ರಮೇಶ್ ಬಾಬು ಆಗ್ರಹಿಸಿದರು.

## ಅಪಘಾತ ಪ್ರಕರಣ: ಆರೋಪಿಗಳಿಗೆ ನ್ಯಾಯಾಂಗ ಬಂಧನ

**ಬೆಂಗಳೂರು:** ಬಾನೆಟ್ ಮೇಲೆ ಎರಗಿದ್ದ ಯುವಕರೊಬ್ಬರನ್ನು ಕಾರಿನ ಮೇಲೆ 4 ಕಿ.ಮೀ.ವರೆಗೂ ಹೊತ್ತೊಯ್ದು ಕೊಲೆಗೆ ಯತ್ನಿಸಿದ ಹಾಗೂ ಕಾರು ಚಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರತ್ಯೇಕ ಪ್ರಕರಣಗಳಲ್ಲಿ ಬಂಧಿಸಲಾಗಿದ್ದ ಐವರು ಆರೋಪಿಗಳನ್ನು ಫೆ.3ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

‘ಶುಕ್ರವಾರ (ಜ. 20) ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ದರ್ಶನ್ ಹಾಗೂ ಪ್ರಿಯಾಂಕಾ ಅವರ ಪತಿ ಪ್ರಮೋದ್, ದೂರು– ಪ್ರತಿದೂರು ನೀಡಿದ್ದರು. ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಪ್ರಿಯಾಂಕಾ, ದರ್ಶನ್ ಸೇರಿ ಐವರನ್ನು ಬಂಧಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

## ₹ 2.91 ಕೋಟಿ ವಂಚನೆ: ಡಿವೈಎಸ್ಪಿ ದಾಳಿ ಬೆನ್ನಲ್ಲೇ ಎಫ್‌ಐಆರ್

**ಬೆಂಗಳೂರು:** ಶೇಷಾದ್ರಿಪುರ ಠಾಣೆ ಮೇಲೆ ರಾಜ್ಯ ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ನೇತೃತ್ವದ ತಂಡ ದಾಳಿ ಮಾಡಿದ್ದ ಬೆನ್ನಲ್ಲೇ, ಅಕ್ರಮ ಬಂಧನದ ಸಂತ್ರಸ್ತ ಆರ್. ಶ್ರೀಧರ್ ವಿರುದ್ಧ ₹ 2.91 ಕೋಟಿ ವಂಚನೆ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

‘ಶೇಷಾದ್ರಿಪುರ ನಿವಾಸಿ ಶ್ರೀಧರ್ ಅವರನ್ನು ಪೊಲೀಸರು ಅಕ್ರಮವಾಗಿ ಬಂಧಿಸಿದ್ದಾರೆ’ ಎಂದು ಆರೋಪಿಸಿ ಅವರ ಮಗ ಚಂದರೇಶ್, ಆಯೋಗಕ್ಕೆ ದೂರು ನೀಡಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿದ್ದ ಆಯೋಗ, ತನಿಖೆ ನಡೆಸುವಂತೆ ಐಜಿಪಿ ಅವರಿಗೆ ಸೂಚಿಸಿತ್ತು. ಡಿವೈಎಸ್ಪಿ ನೇತೃತ್ವದ ತಂಡ ಠಾಣೆ ಮೇಲೆ ಶುಕ್ರವಾರ (ಜ. 20) ದಾಳಿ ಮಾಡಿ, ಶ್ರೀಧರ್ ಅವರನ್ನು ರಕ್ಷಿಸಿತ್ತು. ಠಾಣೆಯಲ್ಲಿದ್ದ ದಾಖಲೆಗಳನ್ನು ಜಪ್ತಿ ಮಾಡಿತ್ತು.

ದಾಳಿ ನಡೆದ ದಿನವೇ ಶ್ರೀಧರ್ ವಿರುದ್ಧ ಎನ್.ಕುಮಾರಸ್ವಾಮಿ ಎಂಬುವರು ದೂರು ನೀಡಿದ್ದಾರೆ. ಅದನ್ನು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಇದರಿಂದಾಗಿ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

**18 ಮಂದಿಗೆ ವಂಚನೆ:** ‘ಚೀಟಿ ವ್ಯವಹಾರ ನಡೆಸುತ್ತಿದ್ದ ಶ್ರೀಧರ್, ಪ್ರತಿ ತಿಂಗಳು ಜನರಿಂದ ಹಣ ಸಂಗ್ರಹಿಸುತ್ತಿದ್ದ. ಈತನ ಮಾತು ನಂಬಿ ನಾನು ಸಹ ಚೀಟಿ ಕಟ್ಟುತ್ತಿದ್ದೆ. ಬಿಡ್ ಮಾಡುತ್ತಿದ್ದ ಸದಸ್ಯರಿಗೆ ಚೀಟಿ ಮೊತ್ತವನ್ನು ಕೊಡದೇ ಸತಾಯಿಸುತ್ತಿದ್ದ’ ಎಂದು ಕುಮಾರಸ್ವಾಮಿ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ನಾನು ಸೇರಿದಂತೆ 18 ಮಂದಿ, ಚೀಟಿ ಹೆಸರಿನಲ್ಲಿ ಶ್ರೀಧರ್‌ಗೆ ₹ 2.97 ಕೋಟಿ ನೀಡಿದ್ದೆವು. ಇನ್ನು ಹಲವರು ಚೀಟಿ ಕಟ್ಟಿರುವ ಮಾಹಿತಿ ಇದೆ. ಯಾರಿಗೂ ಚೀಟಿ ಹಣ ನೀಡದೇ ವಂಚಿಸಿರುವ ಆರೋಪಿ, ಮನೆಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದಾನೆ. ಮೊಬೈಲ್ ಸಹ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ’ ಎಂದೂ ಅವರು ಹೇಳಿದ್ದಾರೆ.

ಪೊಲೀಸರು, ‘ಕುಮಾರಸ್ವಾಮಿ ನೀಡಿದ್ದ ದೂರು ಆಧರಿಸಿ ಶ್ರೀಧರ್ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತರಲಾಗಿತ್ತು. ಅಕ್ರಮ ಬಂಧನವೆಂದು ಹೇಳಿರುವ ಅವರ ಆರೋಪಕ್ಕೆ ಸಂಬಂಧಪಟ್ಟಂತೆ ಆಯೋಗಕ್ಕೆ ಸೂಕ್ತ ದಾಖಲೆಗಳನ್ನು ನೀಡಲಾಗುವುದು’ ಎಂದಿದ್ದಾರೆ.

## ಟಿಪ್ಪರ್ ಚಕ್ರದಡಿ ಸಿಲುಕಿ ಬಿ.ಕಾಂ ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಹಾಗೂ ಟಿಪ್ಪರ್ ನಡುವೆ ಅಪಘಾತ ಸಂಭವಿಸಿದ್ದು, ಟಿಪ್ಪರ್ ಚಕ್ರದಡಿ ಸಿಲುಕಿ ಸರಿತಾ (21) ಎಂಬುವವರು ಮೃತಪಟ್ಟಿದ್ದಾರೆ.

‘ವಿಜಯನಗರ ನಿವಾಸಿ ಸರಿತಾ, ಸ್ಥಳೀಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ಓದುವುದರಲ್ಲಿ ಆಸಕ್ತಿ ಇದ್ದಿದ್ದರಿಂದ, ಮದುವೆ ಬಳಿಕವೂ ಅವರು ವಿದ್ಯಾಭ್ಯಾಸ ಮುಂದುವರಿಸಿದ್ದರು’ ಎಂದು ಕೆಂಗೇರಿ ಸಂಚಾರ ಪೊಲೀಸರು ಹೇಳಿದರು.

‘ಸರಿತಾ ಅವರು ಸ್ನೇಹಿತೆ ಅನಿತಾ (20) ಜೊತೆ ಶುಕ್ರವಾರ ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಅನಿತಾ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಪಘಾತಕ್ಕೆ ಕಾರಣ ಎನ್ನಲಾದ ಟಿಪ್ಪರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಟಿಪ್ಪರ್ ಸ್ಥಳದಲ್ಲೇ ಬಿಟ್ಟು ಆತ ಪರಾರಿಯಾಗಿದ್ದಾನೆ’ ಎಂದು ತಿಳಿಸಿದರು.

**10 ಮೀಟರ್‌ವರೆಗೆ ಉಜ್ಜಿಕೊಂಡು ಹೋದ ಚಕ್ರ:** ‘ದೇವಸ್ಥಾನಕ್ಕೆ ಹೋಗಿದ್ದ ಸರಿತಾ ಹಾಗೂ ಅನಿತಾ, ವಾಪಸು ಮನೆಯತ್ತ ತೆರಳುತ್ತಿದ್ದರು. ಸರಿತಾ ಅವರೇ ವಾಹನ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಅನಿತಾ ಕುಳಿತಿದ್ದರು. ನೈಸ್ ರಸ್ತೆ ಕಡೆಯಿಂದ ಕೆಂಗೇರಿ ಕಡೆ ದ್ವಿಚಕ್ರ ವಾಹನ ಹೊರಟಿತ್ತು’ ಎಂದು ಪೊಲೀಸರು ಹೇಳಿದರು.

‘ಅದೇ ಮಾರ್ಗದಲ್ಲಿ ಹೊರಟಿದ್ದ ಆರೋಪಿತ ಚಾಲಕ, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಟಿಪ್ಪರ್ ಚಲಾಯಿಸಿದ್ದ. ಇದರಿಂದಾಗಿ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಗುದ್ದಿತ್ತು. ರಸ್ತೆಗೆ ಬಿದ್ದ ಸರಿತಾ ಮೇಲೆಯೇ ಟಿಪ್ಪರ್ ಚಕ್ರ ಹರಿದು, 10 ಮೀಟರ್ ವರೆಗೂ ಉಜ್ಜಿಕೊಂಡು ಹೋಗಿತ್ತು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ತೀವ್ರ ಗಾಯಗೊಂಡು ಸರಿತಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅನಿತಾ ಸ್ಥಿತಿಯೂ ಚಿಂತಾಜನಕವಾಗಿದೆ.

## ಇಂದು ಕ್ರೀಡಾಕೂಟ

**ರಾಜರಾಜೇಶ್ವರಿನಗರ:** ಮಲ್ಲತ್ತಹಳ್ಳಿಯ ಕನ್ಯಾಕುಮಾರಿ ಶಾಲಾ ಮೈದಾನದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಹಿರಿಯ ನಾಗರಿಕರಿಗೆ ಜ.22ರಂದು ಬೆಳಿಗ್ಗೆ 10ರಿಂದ ವಿವಿಧ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ ಎಂದು ಜ್ಞಾನಭಾರತಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಡಾ.ಎಚ್.ತುಕಾರಾಂ ತಿಳಿಸಿದ್ದಾರೆ.



### ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

| | |
|---|---|
| ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ | ₹58,660 |
| ಒಡವೆ ಚಿನ್ನ 1ಗ್ರಾಂ | ₹5,398 |
| ಬೆಳ್ಳಿ ಕೆ.ಜಿಗೆ | ₹70,100 |



### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹550 |
| 12 ಮೊಟ್ಟೆಗೆ | ₹70 |

ಮೈಸೂರು

| | |
|---|---|
| 100 ಮೊಟ್ಟೆಗೆ | ₹550 |



### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1610 (1615) |
| ಸೋಯಾ (ರಿಫೈನ್ಡ್) | ₹1210 (1220) |
| ಸೂರ್ಯಕಾಂತಿ (ರಿಫೈನ್ಡ್) | ₹1210 (1220) |
| ಪಾಮೋಲಿನ್ | ₹914 (917) |

### ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹544-690
ದ್ವಿತಳಿ (ಬಿ.ವಿ)
₹350-796


### ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹138 |
| ಆರ್‌ಎಸ್‌ಎಸ್-5 | ₹133 |
| ಗುಡ್ ಲಾಟ್ | ₹128 |

### ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

### ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1600-2000 |
| ಮಧ್ಯಮ | ₹1000-1500 |
| ಸಣ್ಣ | ₹500-1000 |

### ಮುದ್ರೆಮನೆ ಕಾಫಿ



(50 ಕೆಜಿಗೆ)

| | |
|---|---|
| ಎಪಿ | ₹14000 |
| ಎಸಿ | ₹6720 |
| ಆರ್‌ಪಿ | ₹8400 |
| ಆರ್‌ಸಿ | ₹4565 |

ಹಣಕಾಸು, ಐ.ಟಿ. , ದೂರಸಂಪರ್ಕ ವಲಯದ ಷೇರು ಮಾರಾಟ

# ಎಫ್‌ಪಿಐ: ಹೆಚ್ಚಿದ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಹಣಕಾಸು, ಐ.ಟಿ. ಮತ್ತು ದೂರಸಂಪರ್ಕ ವಲಯದ ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದರು.

ಇನ್ನೊಂದೆಡೆ, ಲೋಹ ಮತ್ತು ಗಣಿ ವಲಯದ ಷೇರುಗಳನ್ನು ಮಾತ್ರವೇ ವಿದೇಶಿ ಹೂಡಿಕೆದಾರರು ಖರೀದಿಸುತ್ತಿದ್ದಾರೆ ಎಂದು ಅವರು ಪ್ರಜಾವಾಣಿಗೆ ತಿಳಿಸಿದರು.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಜನವರಿ 20ರವರೆಗಿನ ಅವಧಿಯಲ್ಲಿ ₹15,425 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವರ್ಷದ ಆರಂಭದಲ್ಲಿಯೇ ನಿರಂತರವಾಗಿ ಮಾರಾಟ ಮಾಡುತ್ತಿರುವುದು ತುಸು ಅಚ್ಚರಿ ಮೂಡಿಸಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ 2022ರರಲ್ಲಿ ಗರಿಷ್ಠ ಮಟ್ಟದಲ್ಲಿ ಇದ್ದ ಡಾಲರ್ ಇದೀಗ ಇಳಿಕೆ ಕಾಣುತ್ತಿದೆ. ಡಾಲರ್ ಮೌಲ್ಯ ಇಳಿಕೆಯು ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳ ಪಾಲಿಗೆ ಅನುಕೂಲ ಮಾಡಿಕೊಡಲಿದೆ. ಈ ನಿಟ್ಟಿನಲ್ಲಿ ಭಾರತಕ್ಕೆ ವಿದೇಶಿ ಬಂಡವಾಳ ಒಳಹರಿವು ಆಗಬೇಕಿತ್ತು.


ಆದರೆ, ಮಾರುಕಟ್ಟೆ ಮೌಲ್ಯವು ಕಡಿಮೆ ಇರುವ ಚೀನಾ, ಹಾಂಗ್‌ಕಾಂಗ್, ದಕ್ಷಿಣ ಕೊರಿಯಾ ಮತ್ತು ಥಾಯ್ಲೆಂಡ್ ಮಾರುಕಟ್ಟೆಗಳಲ್ಲಿ ಅವರು ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಈ ಕಾರಣದಿಂದಾಗಿ ಭಾರತದಿಂದ ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ ಎಂದು ಅವರು ತಿಳಿಸಿದರು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬಂಡವಾಳ ಹಿಂದಕ್ಕೆ ಪಡೆಯುವುದು ಮುಂದುವರಿಸಿದ್ದಾರೆ. ಜನವರಿ 2 ರಿಂದ 20ರವರೆಗಿನ ವಹಿವಾಟಿನಲ್ಲಿ ₹19,880 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಇದೇ ಅವಧಿಯಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರು ₹16,180 ಕೋಟಿಗೂ ಅಧಿಕ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

**ಹೊರಹರಿವಿಗೆ ಕಾರಣ**

- ಜಾಗತಿಕ ಆರ್ಥಿಕ ಬೆಳವಣಿಗೆ ತಗ್ಗುವ ಆತಂಕ
- ಚೀನಾದಲ್ಲಿ ಮತ್ತೆ ವ್ಯಾಪಾರ ವಹಿವಾಟು ಆರಂಭ ಆಗಿರುವುದು
- ಭಾರತದ ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು




## ಕೋಟಕ್ ಬ್ಯಾಂಕ್ ಲಾಭ ಶೇ 31ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿ ವಲಯದ ಕೋಟಕ್ ಮಹೀಂದ್ರ ಬ್ಯಾಂಕ್, ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹2,792 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2,131 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 31ರಷ್ಟು ಹೆಚ್ಚಾಗಿದೆ.

ನಿವ್ವಳ ಬಡ್ಡಿ ವರಮಾನದಲ್ಲಿ (ಎನ್‌ಐಐ) ಸುಧಾರಣೆ ಕಂಡುಬಂದಿರುವುದರಿಂದ ಲಾಭದ ಪ್ರಮಾಣ ಹೆಚ್ಚಾಗಿದೆ ಎಂದು ಬ್ಯಾಂಕ್ ತಿಳಿಸಿದೆ. ಎನ್‌ಐಐ ಶೇ 30ರಷ್ಟು ಹೆಚ್ಚಾಗಿ ₹5,653 ಕೋಟಿಗೆ ತಲುಪಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹8,260 ಕೋಟಿಯಿಂದ ₹11,099 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬ್ಯಾಂಕ್‌ನ ಆಸ್ತಿ ಗುಣಮಟ್ಟಕ್ಕೆ ಸಂಬಂಧಿಸಿದಂತೆ, ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 2.71ರಿಂದ ಶೇ 1.90ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 0.79ರಿಂದ ಶೇ 0.43ಕ್ಕೆ ಇಳಿಕೆ ಕಂಡಿದೆ ಎಂದು ಬ್ಯಾಂಕ್ ತಿಳಿಸಿದೆ.

### ಕುಸಿದ ಯೆಸ್ ಬ್ಯಾಂಕ್ ಲಾಭ

ಮುಂಬೈ (ಪಿಟಿಐ): ಯೆಸ್ ಬ್ಯಾಂಕ್‌ನ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 79ರಷ್ಟು ಕುಸಿತ ಕಮಡು ₹55.07 ಕೋಟಿಗೆ ತಲುಪಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದಲ್ಲಿ ಭಾರಿ ಏರಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಬ್ಯಾಂಕ್ ಹೇಳಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹375 ಕೋಟಿಯಿಂದ ₹845 ಕೋಟಿಗೆ ಏರಿಕೆ ಆಗಿದೆ.

ನಿವ್ವಳ ಬಡ್ಡಿ ವರಮಾನ ಶೇ 11.7ರಷ್ಟು ಹೆಚ್ಚಾಗಿ ₹1,971 ಕೋಟಿಗೆ ತಲುಪಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಬಂಡವಾಳ ಲಭ್ಯತೆ ಪ್ರಮಾಣವು ಶೇ 21.29ರಿಂದ ಶೇ 19.66ಕ್ಕೆ ಇಳಿಕೆ ಆಗಿದೆ ಎಂದು ಹೇಳಿದೆ.

## ಐಸಿಐಸಿಐ ಬ್ಯಾಂಕ್ ಲಾಭ ₹8,312 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹8,312 ಕೋಟಿಯಷ್ಟು ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹6,194 ಕೋಟಿ ಲಾಭ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 34ರಷ್ಟು ಏರಿಕೆ ಕಂಡುಬಂದಿದೆ.

ನಿವ್ವಳ ಬಡ್ಡಿ ವರಮಾನದಲ್ಲಿ (ಎನ್‌ಐಐ) ಉತ್ತಮ ಬೆಳವಣಿಗೆ ಕಂಡಿರುವುದೇ ಲಾಭದಲ್ಲಿ ಹೆಚ್ಚಳಕ್ಕೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ. ಎನ್‌ಐಐ ಶೇ 34.6ರಷ್ಟು ಹೆಚ್ಚಾಗಿ ₹16,465 ಕೋಟಿಗೆ ತಲುಪಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹27,069 ಕೋಟಿಯಿಂದ ₹33,529 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ಮಾಹಿತಿ ನೀಡಿದೆ.

ಬ್ಯಾಂಕ್‌ನ ಆಸ್ತಿ ಗುಣಮಟ್ಟದಲ್ಲಿ ಸುಧಾರಣೆ ಕಂಡುಬಂದಿದೆ. ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 4.13 ರಿಂದ ಶೇ 3.07ಕ್ಕೆ ಇಳಿಕೆ ಕಂಡಿದೆ.

ನಿವ್ವಳ ಎನ್‌ಪಿಎ ಸಹ ಶೇ 0.84 ರಿಂದ ಶೇ 0.55ಕ್ಕೆ ಇಳಿಕೆ ಆಗಿದೆ ಎಂದು ತಿಳಿಸಿದೆ.

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಬಂಟ್ವಾಳ** | |
| ಕೋಕ | 12500-25000 |
| ಹಳತು | 48000-54500 |
| ಹೊಸತು | 22500-40000 |
| **ಚಿತ್ರದುರ್ಗ** | |
| ಆಪಿ | 46401-46809 |
| ಬೆಟ್ಟೆ | 34539-34999 |
| ಕೆಂಪುಗೋಟು | 29919-30359 |
| ರಾಶಿ | 45929-46369 |
| **ಕಾರ್ಕಳ** | |
| ಹೊಸತು | 30000-40000 |
| ಹಳತು | 40000-54500 |
| **ಕುಂದಾಪುರ** | |
| ಹಳೆಚಾಲಿ | 40000-49500 |
| ಹೊಸಚಾಲಿ | 30000-37500 |
| **ಸಿದ್ದಾಪುರ** | |
| ಬಿಳಿಗೋಟು | 27000-32819 |
| ಚಾಲಿ | 37299-41099 |
| ಕೋಕ | 27899-32909 |
| ಕೆಂಪುಗೋಟು | 30919-34699 |
| ರಾಶಿ | 42109-46009 |
| ತಟ್ಟಿಬೆಟ್ಟೆ | 37419-44709 |
| **ಶಿರಸಿ** | |
| ಬೆಟ್ಟೆ | 34809-42999 |
| ಬಿಳಿಗೋಟು | 21899-36900 |
| ಚಾಲಿ | 34399-42608 |
| ಕೆಂಪುಗೋಟು | 23896-35369 |
| ರಾಶಿ | 35699-45500 |
| **ಸೊರಬ** | |
| ಬಿಳಿಗೋಟು | 18989-20199 |
| ಕೋಕ | 16989-22989 |
| ಚಾಲಿ | 30699-35699 |
| ಗೊಬರಲು | 34009-34009 |
| ರಾಶಿ | 45299-46099 |

## 'ಉಕ್ರೇನ್–ರಷ್ಯಾ ಮಾತುಕತೆ: ಮೋದಿ ಪ್ರಮುಖ ಪಾತ್ರವಹಿಸಬಲ್ಲರು'

ವಾಷಿಂಗ್ಟನ್ (ಪಿಟಿಐ): ಉಕ್ರೇನ್ ಮತ್ತು ರಷ್ಯಾ ನಡುವೆ ಮಾತುಕತೆಗೆ ಯಾರಾದರೂ ವೇದಿಕೆ ಸಿದ್ಧಗೊಳಿಸಬೇಕು. ಈ ವಿಷಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಪ್ರಮುಖ ಪಾತ್ರ ವಹಿಸಬಲ್ಲರು ಎಂದು ಹಿರಿಯ ಫ್ರೆಂಚ್ ಪತ್ರಕರ್ತೆ ಲಾರಾ ಹೈಮ್ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿರುವ ಅವರು, ಸದ್ಯದ ಪರಿಸ್ಥಿತಿಯಲ್ಲಿ ಉಭಯ ದೇಶಗಳ ನಡುವೆ ಮಾತುಕತೆ ನಡೆಯುವುದು ಕಷ್ಟ ಎಂದು ಹೇಳಿದ್ದಾರೆ. ಪ್ರಸ್ತುತ ಅವರು ಎಲ್‌ಸಿಐ ಸುದ್ದಿ ವಾಹಿನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

'ರಷ್ಯಾದೊಂದಿಗೆ ಚರ್ಚೆ ನಡೆಸಲು ಉಕ್ರೇನ್ ಬಯಸುವುದಿಲ್ಲ. ಅಲ್ಲದೇ, ಯುದ್ಧ ಘೋಷಿಸಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಕ್ರಮ ಕುರಿತು ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ತೀರ್ಪು ಪ್ರಕಟಿಸಲಿ ಎಂಬುದು ಉಕ್ರೇನ್‌ನ ಬಯಕೆಯಾಗಿದೆ' ಎಂದು ಹೇಳಿದ್ದಾರೆ.

'ಅಮೆರಿಕದಲ್ಲಿ ಜನರು ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದ ಬಗ್ಗೆ ಮಾತನಾಡುತ್ತಿಲ್ಲ. ಇದು ನನಗೆ ಅಚ್ಚರಿ ಮೂಡಿಸಿದೆ. ಆದರೆ, ಉಕ್ರೇನ್ ಯುದ್ಧ ಅತ್ಯಂತ ದೀರ್ಘವಾಗಿರಲಿದೆ. ಯುರೋಪಿನಿಂದ ಬಂದ ನನಗೆ, ಅಮೆರಿಕದಲ್ಲಿ ಏನಾಗುತ್ತಿದೆ ಎಂದು ಹೇಳಲು ಮಾತುಗಳೇ ಹೊರಡುತ್ತಿಲ್ಲ. ಇಲ್ಲಿಯ ಜನರು ಅಧ್ಯಕ್ಷ ಬೈಡನ್, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಗ್ಗೆ ಮಾತನಾಡುತ್ತಾರೆ. ಯುರೋಪ್‌ನಲ್ಲಿ ಜನರು ಯುದ್ಧ ಬಗ್ಗೆ ಮತ್ತು ಏನು ನಡೆಯುತ್ತಿದೆ ಎಂಬುದರ ಬಗ್ಗೆ ಮಾತನಾಡುತ್ತಾರೆ' ಎಂದು ಅವರು ಹೇಳಿದ್ದಾರೆ.

## ಸೀಟ್‌ಬೆಲ್ಟ್ ತೆಗೆದ ಪ್ರಕರಣ: ಬ್ರಿಟನ್ ಪ್ರಧಾನಿ ರಿಷಿಗೆ ದಂಡ



ರಿಷಿ ಸುನಕ್

ಲಂಡನ್ (ರಾಯಿಟರ್ಸ್): ಕಾರಿನಲ್ಲಿ ಪ್ರಯಾಣಿಸುವಾಗ ಸೀಟ್ ಬೆಲ್ಟ್ ತೆಗೆದಿದ್ದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರಿಗೆ ಪೊಲೀಸರು ದಂಡ ವಿಧಿಸಿದ್ದಾರೆ.

ದೇಶದ ಉತ್ತರ ಭಾಗಕ್ಕೆ ಕಾರಿನಲ್ಲಿ ಪ್ರಯಾಣಿಸುವಾಗ ಸಾಮಾಜಿಕ ಮಾಧ್ಯಮಕ್ಕಾಗಿ ವಿಡಿಯೊ ಚಿತ್ರೀಕರಣ ಮಾಡಲು ತಾತ್ಕಾಲಿಕವಾಗಿ ಸುನಕ್ ಅವರು ಸೀಟ್ ಬೆಲ್ಟ್ ತೆಗೆದಿದ್ದರು. ಇದು ವಿವಾದಕ್ಕೀಡಾಗಿತ್ತು. ಈ ಪ್ರಮಾದಕ್ಕಾಗಿ ಅವರು ಕ್ಷಮೆಯನ್ನೂ ಕೇಳಿದ್ದರು.

ದಂಡ ಪಾವತಿಸುವಂತೆ ಸೂಚಿಸಿ ಸುನಕ್ ಅವರಿಗೆ ನೋಟಿಸ್ ನೀಡಿರುವುದನ್ನು ಲಂಕಾಶೈರ್ ಕೌಂಟಿಯ ಪೊಲೀಸರು ದೃಢಪಡಿಸಿದ್ದಾರೆ.

ಪೊಲೀಸರಿಂದ ದಂಡ ಹಾಕಿಸಿಕೊಂಡ ಬ್ರಿಟನ್‌ನ ಎರಡನೇ ಪ್ರಧಾನಿ ಎಂಬ ಅಪಖ್ಯಾತಿಗೆ ಸುನಕ್ ಒಳಗಾಗಿದ್ದಾರೆ. ಈ ಹಿಂದೆ ಬೋರಿಸ್ ಜಾನ್ಸನ್ ಅವರಿಗೆ ಪೊಲೀಸರು ದಂಡ ವಿಧಿಸಿದ್ದರು.

ಬ್ರಿಟನ್‌ನಲ್ಲಿ ವೈದ್ಯಕೀಯ ಕಾರಣಗಳನ್ನು ಹೊರತುಪಡಿಸಿ, ಕಾರಿನ ಸೀಟ್‌ಬೆಲ್ಟ್ ಧರಿಸದವರಿಗೆ ಸ್ಥಳದಲ್ಲೇ 100 ಪೌಂಡ್ (₹10 ಸಾವಿರಕ್ಕೂ ಹೆಚ್ಚು) ದಂಡ ವಿಧಿಸಲಾಗುತ್ತದೆ. ಪ್ರಕರಣ ನ್ಯಾಯಾಲಯಕ್ಕೆ ಹೋದರೆ ದಂಡ 500 ಪೌಂಡ್‌ಗಳಿಗೆ ಹೆಚ್ಚಲಿದೆ.

## ಬಿಬಿಸಿ ಸಾಕ್ಷ್ಯಚಿತ್ರ: ಯೂಟ್ಯೂಬ್ ವಿಡಿಯೊ, ಟ್ವಿಟರ್ ಪೋಸ್ಟ್‌ಗೆ ತಡೆ

ಒಂದನೇ ಪುಟದಿಂದ

'50ಕ್ಕೂ ಅಧಿಕ ಟ್ವೀಟ್‌ಗಳನ್ನು ತಡೆಹಿಡಿಯುವಂತೆ ಟ್ವಿಟರ್‌ಗೆ ನಿರ್ದೇಶಿಸಲಾಗಿದೆ. ಇದರಲ್ಲಿ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯಾನ್ ಅವರ ಟ್ವೀಟ್ ಕೂಡ ಸೇರಿದೆ' ಎಂದೂ ತಿಳಿಸಿವೆ.

ಸರ್ಕಾರದ ಈ ಕ್ರಮಕ್ಕೆ ವಿರೋಧ ಪಕ್ಷಗಳಿಂದ ಕಟು ಟೀಕೆ ವ್ಯಕ್ತವಾಗಿದೆ. 'ಮೋದಿ ಅವರು ಅಲ್ಪಸಂಖ್ಯಾತರನ್ನು ಎಷ್ಟು ದ್ವೇಷಿಸುತ್ತಾರೆ ಎಂಬುದು ಈ ಸಾಕ್ಷ್ಯಚಿತ್ರದಿಂದ ಜಗಜ್ಜಾಹೀರಾಗಿದೆ' ಎಂದು ಅವು ಹೇಳಿವೆ.

'ಜನಸಮೂಹ ವೀಕ್ಷಿಸದೇ ಇರುವ ಸಾಕ್ಷ್ಯಚಿತ್ರದ ಕುರಿತು ಕೇಂದ್ರ ಸರ್ಕಾರ ಏಕೆ ಇಷ್ಟೊಂದು ಗಾಬರಿಗೊಂಡಿದೆ. ಭಾರತದ ನಾಗರಿಕರು ಬಿಬಿಸಿ ಬಳಸಿರುವ ಇಂಗ್ಲಿಷ್ ಭಾಷೆಯನ್ನು ಅರ್ಥಮಾಡಿಕೊಳ್ಳಬಹುದು ಎಂಬ ಆತಂಕವೇ' ಎಂದು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಕೇಳಿದ್ದಾರೆ.

'ಬಿಬಿಸಿ ನಿರ್ಮಾಣ ಮಾಡಿರುವ ಹೊಸ ಸಾಕ್ಷ್ಯಚಿತ್ರವು ಅಪಪ್ರಚಾರದ ಉದ್ದೇಶ ಹೊಂದಿದೆ ಎಂದು ಪ್ರಧಾನಿ ಮೋದಿ ಹಾಗೂ ಅವರ ಬೆಂಬಲಿಗರು ಪ್ರತಿಪಾದಿಸುತ್ತಿದ್ದಾರೆ. 2002ರಲ್ಲಿ ಗುಜರಾತ್‌ನಲ್ಲಿ ನಡೆದಿದ್ದ ಗೋಧ್ರೋತ್ತರ ಹತ್ಯಾಕಾಂಡದ ನಂತರ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಮೋದಿ ಅವರಿಗೆ ರಾಜಧರ್ಮವನ್ನು ನೆನಪಿಸಿದ್ದೇಕೆ. ಅವರಿಂದ ರಾಜೀನಾಮೆ ಕೇಳಿದ್ದೇಕೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ರಿಲಯನ್ಸ್‌ನಿಂದ ಡಿಜಿಟಲ್ ಇಂಡಿಯಾ ಸೇಲ್

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಕಂಪನಿಯು ಶನಿವಾರದಿಂದ ಇದೇ 28ರವರೆಗೆ 'ಡಿಜಿಟಲ್ ಇಂಡಿಯಾ ಸೇಲ್' ಆರಂಭಿಸಿದೆ.

ಈ ಸೇಲ್‌ನಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ಮೇಲೆ ಭಾರಿ ಕೊಡುಗೆಗಳು ಮತ್ತು ರಿಯಾಯಿತಿಗಳು ಸಿಗಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ರಿಲಯನ್ಸ್ ಡಿಜಿಟಲ್, ಮೈ ಜಿಯೊ ಸ್ಟೋರ್ಸ್ ಹಾಗೂ www.reliancedigital.in.ನಲ್ಲಿ ಯಾವುದೇ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಬಳಸಿ ಖರೀದಿ ನಡೆಸಿದರೆ ₹20 ಸಾವಿರದವರೆಗೆ ರಿಯಾಯಿತಿ ಪಡೆಯಬಹುದು ಎಂದು ಹೇಳಿದೆ.

### ಕ್ರಿಸ್ ಹಿಪ್ಕಿನ್ಸ್ ನ್ಯೂಜಿಲೆಂಡ್ ಪ್ರಧಾನಿ ಅಭ್ಯರ್ಥಿ

ವೆಲ್ಲಿಂಗ್ಟನ್: ನ್ಯೂಜಿಲೆಂಡ್ ನೂತನ ಪ್ರಧಾನಿ ಅಭ್ಯರ್ಥಿಯಾಗಿ ಕ್ರಿಸ್ ಹಿಪ್ಕಿನ್ಸ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಆಡಳಿತಾರೂಢ ಲೇಬರ್ ಪಕ್ಷದ ಮೂಲಗಳು ತಿಳಿಸಿವೆ.

44 ವರ್ಷದ ಕ್ರಿಸ್ ಹಿಪ್ಕಿನ್ಸ್ ಅವರು ಪ್ರಸ್ತುತ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕ್ರಿಸ್ ಅವರ ಆಯ್ಕೆಗೆ ಸಂಸತ್‌ನಲ್ಲಿ ಅನುಮೋದನೆ ದೊರೆಯಬೇಕಿದೆ. ನಂತರ, ಅವರು ದೇಶದ 41ನೇ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವರು ಎಂದು ಮೂಲಗಳು ತಿಳಿಸಿವೆ.

ಜಸಿಂಡ ಆರ್ಡರ್ನ್ ಅವರು ಪ್ರಧಾನಿ ಸ್ಥಾನಕ್ಕೆ ದಿಢೀರ್ ರಾಜೀನಾಮೆ ಘೋಷಿಸಿದ ಬಳಿಕ, ಲೇಬರ್ ಪಕ್ಷ ಹಿಪ್ಕಿನ್ಸ್ ಅವರನ್ನು ಆಯ್ಕೆ ಮಾಡಿದೆ. ಅಕ್ಟೋಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ.

### ಮೃತರಿಗೆ ಝೆಲೆನ್‌ಸ್ಕಿ ಗೌರವ

ಕೀವ್ (ಎಪಿ): ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶನಿವಾರ ಭೇಟಿ ಮಾಡಿ, ಸಾಂತ್ವನ ಹೇಳಿದರು.

### ಮುಂಬೈ ಧಾರಣೆ

**ಶೇಂಗಾ**

21–1-2023

| | |
|---|---|
| ಜಾವಾ 70/80(ಹೊಸ) | 12150-12200 |
| ಜಾವಾ 80/90(ಹೊಸ) | 11150-11200 |
| ದಪ್ಪ ಮಧ್ಯಪ್ರದೇಶ(ಹೊಸ) | 10500-10550 |
| ದಪ್ಪ ಗುಜರಾತ್(ಹೊಸ) | 11600-11650 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1620 (1625) |
| ಒಂದು ವಾರದ ಡೆಲಿವರಿ | 1615 (1620) |
| ಸೋಯಾ ಕಚ್ಚಾ | 1130 (1150) |
| ಪಾಮ್ ವಾರದ ಡೆಲಿವರಿ | 912 (915) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1120 (1120) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
56,700 (56,800)
ಬೆಳ್ಳಿ ಕೆ.ಜಿ 68,200 (68,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಕಾನ್‌ಸ್ಟೆಬಲ್ ಹುದ್ದೆ: ಪಿಎಚ್‌.ಡಿ, ಎಂ.ಟೆಕ್ ಪಡೆದವರ ಅರ್ಜಿ!

ಅಮರಾವತಿ(ಪಿಟಿಐ): ಆಂಧ್ರ ಪ್ರದೇಶದಲ್ಲಿ 6,400 ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಪಿಎಚ್.ಡಿ ಪಡೆದ 10, ಎಂ.ಟೆಕ್‌ನ 930, ಎಂಬಿಎನ 5,284, ಎಂಎಸ್ಸಿಯ 4,365 ಹಾಗೂ ಎಲ್‌ಎಲ್‌ಬಿ ಪದವಿ ಪಡೆದ 94 ಮಂದಿ ಸೇರಿದಂತೆ ಒಟ್ಟು 5,03,486 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ಕಾನ್‌ಸ್ಟೆಬಲ್ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಇಂಟರ್‌ಮೀಡಿಯೆಟ್. ಆದರೆ, ಅರ್ಜಿ ಸಲ್ಲಿಸಿದವರಲ್ಲಿ ಒಟ್ಟು 13,961 ಸ್ನಾತಕೋತ್ತರ ಪದವೀಧರರು ಹಾಗೂ 1,55,537 ಪದವೀಧರರು ಇದ್ದಾರೆ. ಈ ಹುದ್ದೆಗಳಿಗೆ ಭಾನುವಾರ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಪೊಲೀಸ್ ನೇಮಕಾತಿ ಮಂಡಳಿ ತಿಳಿಸಿದೆ.

ಒಟ್ಟು 5,03,486 ಅಭ್ಯರ್ಥಿಗಳ ಪೈಕಿ 3,95,415 ಪುರುಷರು ಮತ್ತು 1,08,071 ಮಹಿಳೆಯರಾಗಿದ್ದಾರೆ.

'ಭ್ರಷ್ಟಾಚಾರ, ಸುಳ್ಳು ಭರವಸೆಗಳ ಪಕ್ಷ' ಎಂದು ಟೀಕಿಸಿದ ಕಾಂಗ್ರೆಸ್

# ಬಿಜೆಪಿ ವಿರುದ್ಧ ಆರೋಪ ಪಟ್ಟಿ


ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ 26ರಿಂದ ಪ್ರಾರಂಭವಾಗುವ 'ಹಾಥ್ ಸೆ ಹಾಥ್ ಜೋಡೊ' ಕಾರ್ಯಕ್ರಮದ ಭಾಗವಾಗಿ ಕಾಂಗ್ರೆಸ್ ಶನಿವಾರ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡಿದ್ದು, ಬಿಜೆಪಿಯನ್ನು 'ಭ್ರಷ್ಟ ಜುಮ್ಲಾ ಪಕ್ಷ' (ಭ್ರಷ್ಟಾಚಾರ ಮತ್ತು ಸುಳ್ಳು ಭರವಸೆಗಳ ಪಕ್ಷ) ಎಂದು ಬಣ್ಣಿಸಿದೆ.

ಎರಡು ತಿಂಗಳ ಈ ಅಭಿಯಾನದಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಆರೋಪಪಟ್ಟಿಯ ಪ್ರತಿ ಮತ್ತು ರಾಹುಲ್ ಗಾಂಧಿ ಅವರ ಸಂದೇಶವನ್ನು ತೆಗೆದುಕೊಂಡು ದೇಶದಾದ್ಯಂತ 6.5 ಲಕ್ಷ ಹಳ್ಳಿಗಳಿಗೆ ಭೇಟಿ ನೀಡುವರು.

ಭಾರತ್ ಜೋಡೊ ಯಾತ್ರೆ ಮುಕ್ತಾಯಕ್ಕೆ ನಾಲ್ಕು ದಿನಗಳ ಮೊದಲು ಈ ಅಭಿಯಾನ ಆರಂಭವಾಗಲಿದೆ.

'ಭ್ರಷ್ಟ ಜುಮ್ಲಾ ಪಾರ್ಟಿ' ಆಯ್ದ ಕೆಲವರೊಂದಿಗೆ ಮಾತ್ರ ಇದೆ. ಎಲ್ಲರಿಗೂ ಮೋಸ ಮಾಡುವ ಮೂಲಕ ತನ್ನ ಸ್ವಂತ ಲಾಭಕ್ಕಾಗಿ ಕೆಲಸಗಳನ್ನು ಮಾಡುತ್ತಿದೆ' ಎಂದು ಸರ್ಕಾರದ ವಿರುದ್ಧ ಆರೋಪಿಸಿದೆ.




ನವದೆಹಲಿಯಲ್ಲಿ 'ಹಾಥ್ ಸೆ ಹಾಥ್ ಜೋಡೊ' ಅಭಿಯಾನದ ಲಾಂಛನವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಉದ್ಯಮಿಯೊಬ್ಬರ ಖಾಸಗಿ ಜೆಟ್‌ನಲ್ಲಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಮೋದಿ ನವದೆಹಲಿಗೆ ತೆರಳಿದ್ದರು. ಈ ಆಪ್ತ ಸ್ನೇಹಿತನಿಗೆ ದೇಶದ ಶೇ 30ರಷ್ಟು ಬಂದರುಗಳು, ವಿಮಾನ ನಿಲ್ದಾಣಗಳು, ವಿದ್ಯುತ್ ಮತ್ತು ಕಲ್ಲಿದ್ದಲು ಘಟಕಗಳ ನಿರ್ವಹಣೆಯನ್ನು ಒಪ್ಪಿಸಲಾಗಿದೆ ಎಂದು ಅದು ಆರೋಪಿಸಿದೆ.

ಮೋದಿ ಅವರ ಸ್ನೇಹಿತರು ತೆಗೆದುಕೊಂಡ ₹72,000 ಕೋಟಿ ಸಾಲವನ್ನು ಸರ್ಕಾರ ಮನ್ನಾ ಮಾಡಿದೆ. ಆದರೆ, ಒಬ್ಬ ರೈತನ ಸಾಲ ಮನ್ನಾ ಮಾಡಿಲ್ಲ ಎಂದು ಹೇಳಿದೆ.

ಕಾಂಗ್ರೆಸ್ ಪಕ್ಷವು ಕುಟುಂಬ ರಾಜಕಾರಣ ಪೋಷಿಸುತ್ತಿದೆ ಎಂಬ ಬಿಜೆಪಿ ಆರೋಪಕ್ಕೆ ಕಾಂಗ್ರೆಸ್ ತಿರುಗೇಟು ನೀಡಿದೆ.

ಬಿಜೆಪಿಯ 20 ಸಚಿವರು, 14 ಸಂಸದರು ಮತ್ತು 31 ಶಾಸಕರು ಸೇರಿದಂತೆ 65 ಫಲಾನುಭವಿಗಳೊಂದಿಗೆ 'ಭಾಯಿ-ಭತಿಜಾ ಪಕ್ಷ'ವಾಗಿ ಮಾರ್ಪಟ್ಟಿದೆ ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ಅಮಿತ್ ಶಾ ಅವರ ಮಗ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯಾಗಿದ್ದರೆ, ಅಗ್ನಿವೀರರಿಗೆ ಸೆಕ್ಯುರಿಟಿ ಗಾರ್ಡ್ ಆಗಲು ಹೇಳಲಾಗಿದೆ ಎಂದು ಟೀಕಿಸಿದೆ.

### ಪ್ರಮುಖ ಪಕ್ಷಗಳು ಗೈರು ಸಾಧ್ಯತೆ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆ ಸಮಾರೋಪದ ಅಂಗವಾಗಿ ಜ.30ರಂದು ಶ್ರೀನಗರದಲ್ಲಿ ನಡೆಯಲಿರುವ ರ‍್ಯಾಲಿಯಲ್ಲಿ ತೃಣಮೂಲ ಕಾಂಗ್ರೆಸ್, ಸಿಪಿಎಂ ಮತ್ತು ಸಮಾಜವಾದಿ ಪಕ್ಷದ ಹಿರಿಯ ನಾಯಕರು ಗೈರು ಹಾಜರಾಗುವ ಸಾಧ್ಯತೆಯಿದೆ.

2024ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿ ಪ್ರತಿಪಕ್ಷಗಳ ನಡುವೆ ಒಗ್ಗಟ್ಟು ಪ್ರದರ್ಶಿಸುವ ಪ್ರಯತ್ನವಾಗಿ ನಡೆಯುವ ರ‍್ಯಾಲಿಯಲ್ಲಿ ಪಾಲ್ಗೊಳ್ಳುವಂತೆ ಕೋರಿ ಕಾಂಗ್ರೆಸ್ ಕಳೆದ ವಾರ 23 ಪಕ್ಷಗಳ ಅಧ್ಯಕ್ಷರಿಗೆ ಪತ್ರ ಬರೆದಿತ್ತು.

# 'ಹಿಂದೂಗಳಲ್ಲಿ ಆತಂಕ ಮೂಡಿಸಲು ಪ್ರವೀಣ್ ನೆಟ್ಟಾರು ಹತ್ಯೆ'

ಪ್ರಜಾವಾಣಿ ವಾರ್ತೆ



ಪ್ರವೀಣ್ ನೆಟ್ಟಾರು

ಮಂಗಳೂರು: ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ 2022ರ ಜುಲೈ 26ರಂದು ನಡೆದಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಬಂಧಿತ ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ (ಜ. 20) ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಆರೋಪ ಪಟ್ಟಿಯಲ್ಲಿರುವ ಪ್ರಮುಖ ಅಂಶಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

'ಹಿಂದೂ ಸಮುದಾಯದವರಲ್ಲಿ ಆತಂಕ ಹುಟ್ಟಿಸುವ ಉದ್ದೇಶದಿಂದಲೇ ಬಿಜೆಪಿಯ ಯುವ ಮೋರ್ಚಾದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಅವರನ್ನು ಆರೋಪಿಗಳು ಹತ್ಯೆ ಮಾಡಿದ್ದರು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಸದಸ್ಯರೇ ಈ ಕೃತ್ಯ ನಡೆಸಿದ್ದಾರೆ' ಎಂಬ ಸಂಗತಿಯನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ಸಮಾಜದಲ್ಲಿ ಕ್ಷೋಭೆಯನ್ನು ಸೃಷ್ಟಿಸುವ, ಭಯ ಮತ್ತು ಕೋಮು ದ್ವೇಷ ಹುಟ್ಟಿಸುವ ಭಾರಿ ಕಾರ್ಯಸೂಚಿಯ ಭಾಗವಾಗಿ ಪಿಎಫ್‌ಐ ಈ ಕೃತ್ಯ ನಡೆಸಿದೆ. 2047ರ ಹೊತ್ತಿಗೆ ಭಾರತವನ್ನು ಇಸ್ಲಾಂ ದೇಶ ಮಾಡುವ ಕಾರ್ಯಸೂಚಿಯನ್ನು ಮುಂದುವರಿಸುವುದು ಕೃತ್ಯದ ಹಿಂದಿನ ಉದ್ದೇಶವಾಗಿತ್ತು' ಎಂಬ ಅಂಶವೂ ಪಟ್ಟಿಯಲ್ಲಿದೆ.

### ಮುಖ್ಯಾಂಶಗಳು

- ಕೃತ್ಯಕ್ಕೆಂದು ಸರ್ವಿಸ್ ತಂಡ ರಚನೆ
- ತಂಡದ ಸದಸ್ಯರಿಗೆ ಶಸ್ತ್ರಾಸ್ತ್ರ ತರಬೇತಿ
- ಬೆಂಗಳೂರು, ಸುಳ್ಯ ಹಾಗೂ ಬೆಳ್ಳಾರೆಯಲ್ಲಿ ಸಂಚು

'ಬೆಂಗಳೂರಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತ ರುದ್ರೇಶ್ ಕೊಲೆ ಪ್ರಕರಣದಲ್ಲಿ ಪಿಎಫ್‌ಐ ಸಂಘಟನೆಯ ಬೆಂಗಳೂರು ನಗರ ಘಟಕದ ಅಧ್ಯಕ್ಷನ ಬಂಧನವಾಗಿತ್ತು. ಇದಾದ ಬಳಿಕ 'ಸರ್ವಿಸ್ ಟೀಮ್' ಎಂಬ ಹೆಸರಿನ ರಹಸ್ಯ ತಂಡಗಳನ್ನು ಪಿಎಫ್‌ಐ ರಚಿಸಿತ್ತು. ಈ ತಂಡಗಳ ಸದಸ್ಯರಿಗೆ ಶಸ್ತ್ರಾಸ್ತ್ರ ತರಬೇತಿ ಹಾಗೂ ಪರಿವೀಕ್ಷಣೆಯ ತರಬೇತಿ ನೀಡಲಾಗಿತ್ತು.'

'ಧಾರ್ಮಿಕ, ರಾಜಕೀಯ ಸಮುದಾಯಗಳ ಕೆಲ ಮುಖಂಡರನ್ನು ಹುಡುಕಿ, ಅವರ ಪಟ್ಟಿಯನ್ನು ತಯಾರಿಸಿ ಅವರ ಮೇಲೆ ನಿಗಾ ಇಡುವಂತೆ ತರಬೇತಿಯಲ್ಲಿ ಸೂಚಿಸಲಾಗಿತ್ತು. ಹೇಗೆ ಹಲ್ಲೆ ಮಾಡಬೇಕು ಹಾಗೂ ಹೇಗೆ ಕೊಲ್ಲಬೇಕು ಎಂಬ ಬಗ್ಗೆಯೂ ತರಬೇತಿ ನೀಡಲಾಗಿತ್ತು. ಈ ಸಂಚಿನ ಮುಂದುವರಿದ ಭಾಗವಾಗಿ ಪಿಎಫ್‌ಐ ಸದಸ್ಯರ ಮತ್ತು ನಾಯಕರ ಸಭೆಗಳು ಬೆಂಗಳೂರಿನಲ್ಲಿ, ಸುಳ್ಯ ಹಾಗೂ ಬೆಳ್ಳಾರೆ ಪಟ್ಟಣದಲ್ಲಿ ನಡೆದಿದ್ದವು' ಎಂದು ಮಾಹಿತಿ ಪಟ್ಟಿಯಲ್ಲಿದೆ.

'ಹಿಂದೂ ಸಮುದಾಯದ ಪ್ರಮುಖ ಸದಸ್ಯರನ್ನು ಹುಡುಕಿ, ಗುರುತಿಸಿ, ಅವರನ್ನು ಗುರಿಯಾಗಿಸಿ ನಿಗಾ ಇಡುವಂತೆ ಜಿಲ್ಲಾ ತಂಡದ ಮುಖ್ಯಸ್ಥನಾಗಿದ್ದ ಮುಸ್ತಾಫ ಪೈಚಾರುವಿಗೆ (ನಾಲ್ಕನೇ ಆರೋಪಿ) ಸೂಚಿಸಲಾಗಿತ್ತು. ಈ ಸೂಚನೆ ಮೇರೆಗೆ ಹಿಂದೂ ಸಮುದಾಯದ ಪ್ರಮುಖರನ್ನು ಹುಡುಕಿ ಅವರಲ್ಲಿ ನಾಲ್ವರು ವ್ಯಕ್ತಿಗಳನ್ನು ಗುರುತಿಸಲಾಗಿತ್ತು. ಅವರಲ್ಲಿ ಬಿಜೆಪಿ ಯುವಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಕೂಡ ಒಬ್ಬರಾಗಿದ್ದರು. ಮಾರಕಾಸ್ತ್ರಗಳನ್ನು ಬಳಸಿ ಸಾರ್ವಜನಿಕವಾಗಿ ಅವರನ್ನು ಹತ್ಯೆ ಮಾಡಲಾಗಿತ್ತು' ಎಂಬ ಸಂಗತಿಯೂ ಆರೋಪ ಪಟ್ಟಿಯಲ್ಲಿದೆ.

ಸುಭಾಸ್‌ಚಂದ್ರ ಬೋಸ್ ಜನ್ಮದಿನಾಚರಣೆ ಮುನ್ನ ಮಗಳು ಅನಿತಾ ಹೇಳಿಕೆ

# 'ನೇತಾಜಿ ಆದರ್ಶ ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ವ್ಯತಿರಿಕ್ತ'

ಕೋಲ್ಕತ್ತ (ಪಿಟಿಐ): ಆರ್‌ಎಸ್‌ಎಸ್‌ನ ಸಿದ್ಧಾಂತವು ಒಂದು ಧ್ರುವವಾದರೆ ನೇತಾಜಿ ಸುಭಾಸ್‌ಚಂದ್ರ ಬೋಸ್ ಅವರ ಆದರ್ಶಗಳು ಮತ್ತೊಂದು ಧ್ರುವ. ಅವೆರಡು ಒಂದಾಗಲು ಸಾಧ್ಯವೇ ಇಲ್ಲ ಎಂದು ಬೋಸ್ ಅವರ ಮಗಳು ಅನಿತಾ ಬೋಸ್ ಫಫ್ ಹೇಳಿದ್ದಾರೆ. ಬೋಸ್ ಅವರ ಜನ್ಮದಿನವನ್ನು ಸೋಮವಾರ ಅದ್ದೂರಿಯಾಗಿ ಆಚರಿಸಲು ಆರ್‌ಎಸ್‌ಎಸ್ ಸಿದ್ಧತೆ ನಡೆಸಿದೆ. ಹಾಗಾಗಿ, ಅನಿತಾ ಅವರ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಕೋಲ್ಕತ್ತದ ಶಹೀದ್ ಮಿನಾರ್ ಮೈದಾನದಲ್ಲಿ ಬೋಸ್ ಜನ್ಮದಿನ ಪ್ರಯುಕ್ತ ನಡೆಯಲಿರುವ ಸಾರ್ವಜನಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಲಿದ್ದಾರೆ.

ತಮ್ಮ ತಂದೆಯ ಜನ್ಮದಿನ ಆಚರಣೆಯಲ್ಲಿನ ಅದ್ದೂರಿತನವು 'ಭಾಗಶಃ ಅವರ (ಬಿಜೆಪಿ, ಆರ್‌ಎಸ್‌ಎಸ್) ಹಿತಾಸಕ್ತಿಗಾಗಿಯೇ ಇದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ದೇಶದಲ್ಲಿರುವ ಯಾವುದೇ ಪಕ್ಷಕ್ಕಿಂತ ಕಾಂಗ್ರೆಸ್‌ನ ಸಿದ್ಧಾಂತದಲ್ಲಿ ಬೋಸ್ ಅವರ ಸಿದ್ಧಾಂತದ ಹಲವು ಅಂಶಗಳು ಇವೆ ಎಂದಿದ್ದಾರೆ.

> **ಅತ್ಯಂತ ಸರಳವಾಗಿ ಹೇಳುವುದಾದರೆ, ಆರ್‌ಎಸ್‌ಎಸ್–ಬಿಜೆಪಿ ಬಲಪಂಥೀಯವಾದರೆ, ನೇತಾಜಿ ಎಡಪಂಥೀಯರಾಗಿದ್ದರು**
> **ಅನಿತಾ ಬೋಸ್ ಫಫ್,** ನೇತಾಜಿ ಮಗಳು

ಎಲ್ಲ ಧರ್ಮಗಳನ್ನೂ ಗೌರವಿಸಬೇಕು ಎಂದು ನೇತಾಜಿ ಬೋಧಿಸಿದ್ದರು. ಆದರೆ, ಈ ಚಿಂತನೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಲ್ಲಿ ಇಲ್ಲ. ಧರ್ಮನಿಷ್ಠ ಹಿಂದೂವಾಗಿದ್ದ ಬೋಸ್ ಅವರು ಎಲ್ಲ ಧರ್ಮಗಳನ್ನೂ ಗೌರವಿಸುತ್ತಿದ್ದರು. ವಿವಿಧ ಧರ್ಮಗಳ ಜನರ ನಡುವೆ ಸಹಕಾರ ಇರಬೇಕು ಎಂಬುದರ ಪರವಾಗಿ ಅವರು ಇದ್ದರು. ಆರ್‌ಎಸ್‌ಎಸ್ ಮತ್ತು ಬಿಜೆಪಿಯಲ್ಲಿ ಈ ಧೋರಣೆ ಕಾಣಿಸುವುದಿಲ್ಲ ಎಂದು ಅನಿತಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಜರ್ಮನಿಯಲ್ಲಿರುವ ಅನಿತಾ ಅವರು ದೂರವಾಣಿ ಮೂಲಕ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದ್ದಾರೆ.

'ನೇತಾಜಿಯವರ ಚಿಂತನೆ ಮತ್ತು ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಆರ್‌ಎಸ್‌ಎಸ್‌ಗೆ ಅನಿಸಿದ್ದರೆ ಅದು ನಿಜವಾಗಿಯೂ ಒಳ್ಳೆಯದು. ನೇತಾಜಿ ಅವರ ಜನ್ಮದಿನವನ್ನು ಹಲವು ಗುಂಪುಗಳು ವಿವಿಧ ರೀತಿಯಲ್ಲಿ ಆಚರಿಸಲು ಬಯಸಿವೆ. ಇವುಗಳಲ್ಲಿ ಹಲವು ಗುಂಪುಗಳು ನೇತಾಜಿ ಅವರ ಸಿದ್ಧಾಂತವನ್ನು ಒಪ್ಪುತ್ತವೆ' ಎಂದಿದ್ದಾರೆ.

ನೇತಾಜಿ ಅವರು ಆರ್‌ಎಸ್‌ಎಸ್‌ನ ಟೀಕಾಕಾರರಾಗಿದ್ದರೇ ಎಂಬ ಪ್ರಶ್ನೆಗೆ, 'ಉದ್ಧರಿಸಬಹುದಾದ ಅವರ ಮಾತುಗಳು (ಆರ್‌ಎಸ್‌ಎಸ್‌ಗೆ ಸಂಬಂಧಿಸಿ) ನನಗೆ ಗೊತ್ತಿಲ್ಲ. ಆರ್‌ಎಸ್‌ಎಸ್ ಸದಸ್ಯರ ಕುರಿತು ವಿಮರ್ಶಾತ್ಮಕವಾದ ಹೇಳಿಕೆಗಳನ್ನು ಅವರು ನೀಡಿದ್ದಿರಬಹುದು. ಆರ್‌ಎಸ್‌ಎಸ್ ಮತ್ತು ನೇತಾಜಿ ಅವರ ಜಾತ್ಯತೀತ ಸಿದ್ಧಾಂತ ಒಟ್ಟಾಗಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ನೇತಾಜಿ ಅವರನ್ನು ಗೌರವಿಸುವುದಕ್ಕಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕೈಗೊಂಡ ಹಲವು ಕ್ರಮಗಳನ್ನು ಅನಿತಾ ಮೆಚ್ಚಿಕೊಂಡಿದ್ದಾರೆ.

'ಇದರಲ್ಲಿ ಎರಡು ವಿಚಾರಗಳಿವೆ. ನೇತಾಜಿ ಕುರಿತಂತೆ, ಸ್ವಾತಂತ್ರ್ಯದ ಬಳಿಕ ಕಾಂಗ್ರೆಸ್ ಪಕ್ಷದ ನಿಲುವು ಮುಕ್ತವಾದದ್ದಾಗಿರಲಿಲ್ಲ. ಅಸಹಕಾರ ಚಳವಳಿಯೇ ದೇಶ ಸ್ವಾತಂತ್ರ್ಯ ಪಡೆಯಲು ಕಾರಣ ಎಂಬುದನ್ನೇ ಮುನ್ನೆಲೆಯಲ್ಲಿ ಇರಿಸಲು ಕಾಂಗ್ರೆಸ್ ಬಯಸಿತ್ತು. ಆದರೆ, ನೇತಾಜಿ ಅವರಿಗೆ ಸಂಬಂಧಿಸಿದ ಕಡತಗಳು ಬಹಿರಂಗವಾದ ಬಳಿಕ, ಇಂಡಿಯನ್ ನ್ಯಾಷನಲ್ ಆರ್ಮಿ (ಐಎನ್‌ಎ) ಸ್ವಾತಂತ್ರ್ಯ ಬರುವುದಕ್ಕಾಗಿ ವಹಿಸಿದ ಪಾತ್ರ ಏನು ಎಂಬುದು ಗೊತ್ತಾಗಿದೆ. ಎರಡನೆಯದಾಗಿ, ನೇತಾಜಿ ಅವರು ಇಂದಿಗೂ ಬದುಕಿದ್ದು, ಈಗ ಸರ್ಕಾರ ನಡೆಸುತ್ತಿರುವ ಪಕ್ಷದ ಸಿದ್ಧಾಂತಕ್ಕಿಂತ ಭಿನ್ನವಾದ ಸಿದ್ಧಾಂತ ಹೊಂದಿದ್ದರೆ ಅವರಿಗೆ ಗೌರವ ಕೊಡುವ ಕೆಲಸವನ್ನು ಬಿಜೆಪಿ ಮಾಡುತ್ತಿರಲಿಲ್ಲ. ಅವರ (ಆರ್‌ಎಸ್‌ಎಸ್–ಬಿಜೆಪಿ) ಹಿತಾಸಕ್ತಿಗಾಗಿಯೇ ಎಲ್ಲವೂ ನಡೆಯುತ್ತಿದೆ' ಎಂದು ಅನಿತಾ ಅವರು ವಿವರಿಸಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರವು ನೇತಾಜಿ ಅವರಿಗೆ ಸಂಬಂಧಿಸಿದ 64 ಕಡತಗಳನ್ನು 2015ರಲ್ಲಿ ಬಹಿರಂಗಪಡಿಸಿತ್ತು. ಅದರ ಮರುವರ್ಷ, ಕೇಂದ್ರ ಸರ್ಕಾರವು ನೂರು ಕಡತಗಳನ್ನು ಬಹಿರಂಗಪಡಿಸಿತ್ತು.

### ಭಿನ್ನ ವರದಿ

ನೇತಾಜಿ ಅವರು ನಿಗೂಢವಾಗಿ ಕಣ್ಮರೆಯಾಗಲು ಕಾರಣವೇನು ಎಂಬುದನ್ನು ಪತ್ತೆ ಮಾಡುವುದಕ್ಕಾಗಿ ಸ್ವಾತಂತ್ರ್ಯದ ಬಳಿಕ ಮೂರು ಆಯೋಗಗಳನ್ನು ಕೇಂದ್ರ ಸರ್ಕಾರ ನೇಮಿಸಿದೆ. ಶಾ ನವಾಜ್ ಆಯೋಗ ಮತ್ತು ಖೋಸ್ಲ ಆಯೋಗವನ್ನು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೇಮಿಸಲಾಗಿತ್ತು.

ತೈವಾನ್‌ನ ತಾಯ್‌ಹೊಕು ವಿಮಾನ ನಿಲ್ದಾಣದಿಂದ ಹೊರಟ ನೇತಾಜಿ ಅವರಿದ್ದ ವಿಮಾನವು ಸ್ವಲ್ಪ ಹೊತ್ತಿನಲ್ಲಿ ಪತನಗೊಂಡಿತು ಎಂದು ಈ ಎರಡೂ ಆಯೋಗಗಳು ಹೇಳಿವೆ. ಮೂರನೇ ಆಯೋಗವನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ನೇಮಿಸಲಾಗಿದೆ. ನೇತಾಜಿ ಅವರು ವಿಮಾನ ಪತನಗೊಂಡು ಮೃತಪಟ್ಟಿಲ್ಲ ಎಂದು ಈ ಆಯೋಗವು ಹೇಳಿದೆ.

# ಗಾಂಜಾ: ಮತ್ತಿಬ್ಬರು ವೈದ್ಯರು ಸೇರಿ 9 ಮಂದಿ ಸೆರೆ

ಒಂದನೇ ಪುಟದಿಂದ...

ಸುದ್ದಿಗಾರರ ಜೊತೆ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್, 'ಗಾಂಜಾ ಪ್ರಕರಣ ಸಂಬಂಧ 15 ಮಂದಿಯನ್ನು ಬಂಧಿಸಿದ್ದೆವು. ಈಗ ಮತ್ತೆ ಒಂಬತ್ತು ಆರೋಪಿಗಳನ್ನು ಬಂಧಿಸಿದ್ದೇವೆ. ಅವರು ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಅಗತ್ಯಬಿದ್ದರೆ ಪೊಲೀಸ್ ಕಸ್ಟಡಿಗೆ ಕೇಳುತ್ತೇವೆ' ಎಂದರು.

'ಆರೋಪಿಗಳೆಲ್ಲರೂ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಬಂಧಿತರಿಂದ ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದೇವೆ. ಅವುಗಳಲ್ಲಿ ಸಾಕಷ್ಟು ಪುರಾವೆಗಳು ಸಿಕ್ಕಿವೆ. ಗಾಂಜಾ ಮಾರಾಟದಲ್ಲಿ ಇವರ ಪಾತ್ರ ಏನಿತ್ತು ಎಂಬ ಬಗ್ಗೆ ತನಿಖೆ ಮುಂದುವರಿದಿದೆ. ಆರೋಪಪಟ್ಟಿಯಲ್ಲಿ ಎಲ್ಲವನ್ನೂ ವಿವರವಾಗಿ ಉಲ್ಲೇಖಿಸಲಿದ್ದೇವೆ' ಎಂದರು.

ಮಾದಕ ಪದಾರ್ಥ ದಂಧೆಯಲ್ಲಿ ತೊಡಗಿದ್ದ ಆರೋಪದಡಿ ಅನಿವಾಸಿ ಭಾರತೀಯ ನೀಲ್ ಕಿಶೋರಿಲಾಲ್ ರಾಮ್‌ಜಿ ಷಾ (38) ಎಂಬಾತನನ್ನು ಜ.7ರಂದು ಪೊಲೀಸರು ಬಂಧಿಸಿದ್ದರು. ಆತ ನೀಡಿದ ಮಾಹಿತಿ ಆಧಾರದಲ್ಲಿ ಇಬ್ಬರು ವೈದ್ಯರು, 10 ವೈದ್ಯ ವಿದ್ಯಾರ್ಥಿಗಳು ಸೇರಿ 14 ಮಂದಿಯನ್ನು ಪೊಲೀಸರು ಈ ಹಿಂದೆಯೇ ಬಂಧಿಸಿದ್ದರು.

'ಇದು, ಬಹಳ ಗಂಭೀರ ಪ್ರಕರಣ. ಹಿಂದಿನ ಕೆಲವು ಪ್ರಕರಣಗಳಲ್ಲಿ ಮಾದಕ ಪದಾರ್ಥ ಮಾರಾಟ ಜಾಲ ಇಷ್ಟೊಂದು ವ್ಯವಸ್ಥಿತವಾಗಿ ಇರುತ್ತಿರಲಿಲ್ಲ' ಎಂದು ಶಶಿಕುಮಾರ್ ಹೇಳಿದರು.

'ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದ ಅನೇಕರು ಈ ಪ್ರಕರಣದ ಮೊದಲ ಆರೋಪಿ (ನೀಲ್ ಕಿಶೋರಿಲಾಲ್ ರಾಮ್‌ಜಿ ಷಾ) ಜತೆ ಸಂಪರ್ಕದಲ್ಲಿದ್ದರು. ಅವರಲ್ಲಿ ಬಹುತೇಕರು ಈಗ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕಣ್ಮರೆಯಾಗಿದ್ದಾರೆ' ಎಂದು ತಿಳಿಸಿದರು.

# ಜಮ್ಮುವಿನಲ್ಲಿ ಅವಳಿ ಬಾಂಬ್ ಸ್ಫೋಟ: 9 ಜನರಿಗೆ ಗಾಯ

ಜಮ್ಮು (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆ ಜಮ್ಮು ತಲುಪುವ ಎರಡು ದಿನ ಮುನ್ನ, ಇಲ್ಲಿನ ಜನನಿಬಿಡ ಪ್ರದೇಶದಲ್ಲಿ ಶನಿವಾರ ಎರಡು ಕಾರುಗಳಲ್ಲಿ ಪ್ರಬಲ ಬಾಂಬ್ ಸ್ಫೋಟಗಳು ನಡೆದಿದ್ದು, ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನರ್ವಾಲ್‌ನ ಟ್ರಾನ್ಸ್‌ಪೋರ್ಟ್ ನಗರದ ಕಾರಿನ ರಿಪೇರಿ ಅಂಗಡಿಯಲ್ಲಿ ನಿಲ್ಲಿಸಿದ್ದ ಎಸ್‌ಯುವಿಯಲ್ಲಿ ಹಾಗೂ ಸಮೀಪದ ಇನ್ನೊಂದು ವಾಹನದಲ್ಲಿ ಅವಳಿ ಸ್ಫೋಟಗಳು ನಡೆದಿದ್ದು, ಸುಧಾರಿತ ಸ್ಫೋಟಕ ಸಾಧನಗಳನ್ನು (ಐಇಡಿ) ಬಳಸಿರುವ ಶಂಕೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆಯನ್ನು ತೀವ್ರವಾಗಿ ಖಂಡಿರುವ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, 'ತಪ್ಪಿತಸ್ಥರ ವಿರುದ್ಧ ತುರ್ತು ಕ್ರಮ ಕೈಗೊಳ್ಳುವಂತೆ' ಸೂಚಿಸಿದ್ದಾರೆ.

'ಬೆಳಿಗ್ಗೆ 11 ಗಂಟೆ ಸುಮಾರಿಗೆ ಬೊಲೆರೊ ಎಸ್‌ಯುವಿಯಲ್ಲಿ ಮೊದಲ ಸ್ಫೋಟ ಸಂಭವಿಸಿದ್ದು, ಐವರಿಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಮುಕೇಶ್ ಸಿಂಗ್ ತಿಳಿಸಿದ್ದಾರೆ.

'ಮೊದಲ ಸ್ಫೋಟ ಸಂಭವಿಸಿದ ಸ್ಥಳದಿಂದ 50 ಮೀಟರ್ ದೂರದಲ್ಲಿ 15 ನಿಮಿಷಗಳ ಅಂತರದಲ್ಲಿಯೇ ಮತ್ತೊಂದು ಸ್ಫೋಟ ಸಂಭವಿಸಿದ್ದು, ಒಬ್ಬರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಎರಡೂ ಸ್ಫೋಟಗಳಿಗೆ ಸಂಬಂಧಿಸಿದಂತೆ ತನಿಖೆ ಆರಂಭಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ಆದರೆ, 'ಸ್ಫೋಟದ ಬಳಿಕ ಆಸ್ಪತ್ರೆಗೆ ಒಂಬತ್ತು ಜನರನ್ನು ಕರೆತರಲಾಯಿತು' ಎಂದು ಸರ್ಕಾರಿ ವೈದ್ಯಕೀಯ ಕಾಲೇಜಿನ (ಜಿಎಂಸಿ) ವೈದ್ಯರು ತಿಳಿಸಿದ್ದಾರೆ. 'ಈ ಒಂಬತ್ತು ಜನರಲ್ಲಿ ಒಬ್ಬರಿಗೆ ಕಿಬ್ಬೊಟ್ಟೆ ನೋವಿದ್ದರೆ, ಇನ್ನಿಬ್ಬರ ಕಾಲಿಗೆ ಗಾಯಗಳಾಗಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಭಾರತ್ ಜೋಡೊ ಯಾತ್ರೆ ಹಾಗೂ ಗಣರಾಜ್ಯೋತ್ಸವ ಸಮೀಪಿಸುತ್ತಿರುವ ಕಾರಣ ಈ ಭಾಗದಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿದೆ. ಇದರ ನಡುವೆಯೂ ಭಯೋತ್ಪಾದಕರು ಅವಳಿ ಬಾಂಬ್ ಸ್ಫೋಟ ನಡೆಸಿದ್ದಾರೆ.

### ಸಂಕ್ಷಿಪ್ತ ಸುದ್ದಿ

## ಡ್ರೋನ್ ವಿಡಿಯೊ: ಟಿಟಿಡಿ ತನಿಖೆ

ಹೈದರಾಬಾದ್: ಡ್ರೋನ್ ಕ್ಯಾಮೆರಾದಲ್ಲಿ ಸೆರೆಹಿಡಿಯಲಾಗಿದೆ ಎನ್ನಲಾದ ತಿರುಮಲ ದೇವಸ್ಥಾನದ ಕಿರು ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿರುವ ಕುರಿತು ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ತನಿಖೆ ಆರಂಭಿಸಿದೆ.

'ಆಗಮ ಶಾಸ್ತ್ರಗಳ ಪ್ರಕಾರ ವೆಂಕಟೇಶ್ವರ ದೇವರ ದೇಗುಲದ ಮೇಲ್ಭಾಗದಲ್ಲಿ ಯಾವುದೇ ವಸ್ತುಗಳ ಹಾರಾಟಕ್ಕೆ ಅನುಮತಿ ಇಲ್ಲ' ಎಂದು ಮೂಲಗಳು ತಿಳಿಸಿವೆ.

ಬೇಡಿ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮುಖ್ಯ ದೇಗುಲದ ಎದುರು ಪಶ್ಚಿಮದ ಕಡೆಗೆ ಚಲಿಸಿ ದೇವಾಲಯದ ಗೋಪುರ, ಆನಂದ ನಿಲಯಂ, ಗರ್ಭಗುಡಿಯ ದೃಶ್ಯಗಳನ್ನು ಸೆರೆ ಹಿಡಿಯಲಾಗಿದೆ ಎಂದೂ ಹೇಳಿದೆ.

ಇನ್‌ಸ್ಟಾಗ್ರಾಂನಲ್ಲಿ ಈ ವಿಡಿಯೊ ಹರಿದಾಡಿದ ಬಳಿಕ ಭಕ್ತರು ಆಕ್ಷೇಪ ವ್ಯಕ್ತಪಡಿಸಿದ್ದರು.

'ಹೈದರಾಬಾದ್ ಮೂಲದ ಸಂಸ್ಥೆಯೊಂದು ಈ ವಿಡಿಯೊವನ್ನು ಪೋಸ್ಟ್ ಮಾಡಿದೆ. ಸಂಸ್ಥೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು' ಎಂದು ಟಿಟಿಡಿ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ತಿಳಿಸಿದ್ದಾರೆ.

ವಿಡಿಯೊ ತುಣುಕನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದೂ ಹೇಳಿದ್ದಾರೆ.

## ಟಿಎಂಸಿ ಮುಖಂಡ ಕುಂತಲ್ ಬಂಧನ

ಕೋಲ್ಕತ್ತ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್‌ನ ಯುವ ಮುಖಂಡ ಕುಂತಲ್ ಘೋಷ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಬಂಧಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿನಾರ್ ಪಾರ್ಕ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ರಾತ್ರಿಯಿಡೀ ಶೋಧ ನಡೆಸಿದ ನಂತರ ಘೋಷ್ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿದರು. ಈ ವೇಳೆ ಹಲವು ದಾಖಲೆ, ಡೈರಿ ವಶಪಡಿಸಿಕೊಳ್ಳಲಾಯಿತು ಎಂದು ತಿಳಿಸಿದರು.

## ಒಬ್ಬ ವ್ಯಕ್ತಿ, ಒಂದು ಕಾರು: ಅರ್ಜಿ ವಜಾ

ನವದೆಹಲಿ (ಪಿಟಿಐ): 'ಒಬ್ಬ ವ್ಯಕ್ತಿಗೆ ಒಂದು ಕಾರು' ನಿಯಮ ಜಾರಿ ಹಾಗೂ ವ್ಯಕ್ತಿ ಹೊಂದಿರುವ ಎರಡನೇ ಕಾರಿಗೆ ಪರಿಸರ ತೆರಿಗೆ ಹಾಕಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಅರ್ಜಿಯಲ್ಲಿನ ಅಂಶಗಳು ಸರ್ಕಾರದ ನೀತಿಗೆ ಸಂಬಂಧಿಸಿವೆ ಎಂದು ಕೋರ್ಟ್ ಹೇಳಿತು.


ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 22 ಜನವರಿ 2023

















# ಒಕ್ಕೂಟದ ಕಹಿ ಬಂಧ



ಕಲೆ: ಸಂತೋಷ್ ಸಸಿಹಿತ್ಲು

ಬಿ.ಎಸ್. ಅರುಣ್

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ತಮ್ಮ ರಾಷ್ಟ್ರೀಯ ಪಕ್ಷ 'ಭಾರತ ರಾಷ್ಟ್ರ ಸಮಿತಿ'ಗೆ ಚಾಲನೆ ನೀಡಲು ಜನವರಿ 18ರಂದು 'ಭಾರಿ ಬಹಿರಂಗ ಸಭೆ'ಯೊಂದನ್ನು ಆಯೋಜಿಸಿದ್ದರು. ಈ ಸಭೆಯಲ್ಲಿ ಮೂವರು ಮುಖ್ಯಮಂತ್ರಿಗಳು ಹಾಗೂ ಒಬ್ಬರು ಮಾಜಿ ಮುಖ್ಯಮಂತ್ರಿ ಭಾಗಿಯಾಗಿದ್ದರು. ಕೇರಳ, ತೆಲಂಗಾಣ, ತಮಿಳುನಾಡು, ದೆಹಲಿ ಸೇರಿದಂತೆ ಹಲವೆಡೆ ರಾಜ್ಯಪಾಲರ ಹುದ್ದೆಯ ದುರ್ಬಳಕೆ ಆಗುತ್ತಿರುವುದು ಈ ಮುಖಂಡರು ಸಭೆಯಲ್ಲಿ ಪ್ರಸ್ತಾಪಿಸಿದ ಸಾಮಾನ್ಯ ಅಂಶವಾಗಿತ್ತು.

> ಮತ್ತೊಂದು ಗಣರಾಜ್ಯೋತ್ಸವ ಬಂದಿದೆ. ಆದರೆ, ದೇಶದ ಗಣತಂತ್ರ ವ್ಯವಸ್ಥೆ ಹಿಂದೆಂದಿಗಿಂತಲೂ ಈಗ ಹೆಚ್ಚು ಸಂಘರ್ಷಗಳನ್ನು ಕಾಣುತ್ತಿದೆ. ದೇಶದಲ್ಲಿ ಅತೀ ಹೆಚ್ಚು ಚರ್ಚೆಯಾದ ವಿಷಯಗಳಲ್ಲಿ ಈ ವಿಷಯವೂ ಒಂದಾಗಿದೆ. ಹಾಗಾದರೆ ಕೇಂದ್ರ–ರಾಜ್ಯಗಳ ಸಂಘರ್ಷಕ್ಕೆ ಕೊನೆಯೇ ಇಲ್ಲವೆ?

ಭಾರತವು ಪ್ರಜಾತಂತ್ರ ವ್ಯವಸ್ಥೆಯಾದ ನಂತರದಲ್ಲಿ ಅತಿಹೆಚ್ಚು ಚರ್ಚೆಗೆ ಒಳಗಾದ ವಿಷಯಗಳಲ್ಲಿ ಕೇಂದ್ರ-ರಾಜ್ಯ ನಡುವಿನ ಸಂಬಂಧವೂ ಒಂದು. ಎರಡು ವಿಷಯಗಳನ್ನು ಮುಖ್ಯವಾಗಿ ಗಮನಿಸಿದಾಗ ಈ ವಿಚಾರವು ಇನ್ನಷ್ಟು ಸ್ಪಷ್ಟವಾಗಿ ಗೊತ್ತಾಗುತ್ತದೆ: ಕೇಂದ್ರದಲ್ಲಿ ಕಾಂಗ್ರೆಸ್ಸಿನ ಆಡಳಿತವಿದ್ದಾಗ ಹೆಚ್ಚಾಗಿ ನಡೆದ ರಾಜ್ಯ ಸರ್ಕಾರಗಳ ವಜಾ ಪ್ರಕ್ರಿಯೆ; ಬಿಜೆಪಿಯನ್ನು ವಿರೋಧಿಸುವ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಈಚಿನ ದಿನಗಳಲ್ಲಿ ರಾಜ್ಯಪಾಲರು ತೋರಿದ ವಿವಾದಾತ್ಮಕ ನಡೆ. ಹಣಕಾಸು ಮತ್ತು ಆಡಳಿತಾತ್ಮಕ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಹೆಚ್ಚಿನ ಅಧಿಕಾರದ ಹಂಚಿಕೆಯಾಗಬೇಕು ಎಂಬ ವಿಷಯವನ್ನು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಪ್ರಸ್ತಾಪಿಸಿವೆ. ಆದರೆ, ಅದಕ್ಕೆ ಹೆಚ್ಚಿನ ಗಮನ ಸಿಕ್ಕಿಲ್ಲ.

ಕಾಂಗ್ರೆಸ್ ಪಕ್ಷವು ದಶಕಗಳ ಕಾಲ ಪ್ರಬಲ ರಾಜಕೀಯ ಶಕ್ತಿಯಾಗಿದ್ದು ಕೇಂದ್ರದಲ್ಲಿ ಅಧಿಕಾರ ಚಲಾಯಿಸಿತು. 1980ರ ದಶಕದ ಕೊನೆಯಿಂದ ದುರ್ಬಲವಾಗುತ್ತ ಸಾಗಿತು. ಅಲ್ಲಿಯವರೆಗೆ ಪಕ್ಷವು ತನ್ನ ವಿರೋಧಿ ಪಕ್ಷದ ಅಧಿಕಾರ ಇರುವ ರಾಜ್ಯಗಳಲ್ಲಿ ಸರ್ಕಾರವನ್ನು ವಜಾಗೊಳಿಸುವ ವಿಚಾರದಲ್ಲಿ ಹಿಂದೆ-ಮುಂದೆ ನೋಡುತ್ತಿರಲಿಲ್ಲ. 1977ರಲ್ಲಿ ಕೇಂದ್ರದಲ್ಲಿ ಅಲ್ಪ ಅವಧಿಗೆ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರ ಕೂಡ ಕಾಂಗ್ರೆಸ್ಸಿನ ಕೊಳಕು ಕೆಲಸವನ್ನು ತಾನೂ ಮಾಡಲು ಹಿಂದೇಟು ಹಾಕಲಿಲ್ಲ. ಅದು ಕಾಂಗ್ರೆಸ್ ಆಡಳಿತವಿದ್ದ ಏಳು ರಾಜ್ಯ ಸರ್ಕಾರಗಳನ್ನು ವಜಾಗೊಳಿಸಿತು. ಕೇಂದ್ರ ಸರ್ಕಾರವು ಸಂವಿಧಾನದ 356ನೆಯ ವಿಧಿಯ ಮೂಲಕ ಮನಸೋಇಚ್ಛೆ ಚಲಾಯಿಸುತ್ತಿದ್ದ ಅಧಿಕಾರವು 'ಪ್ರಶ್ನೆಗೆ ಅತೀತವಾಗಿದ್ದೇನೂ ಅಲ್ಲ' ಎಂದು ಸುಪ್ರೀಂ ಕೋರ್ಟ್ 1994ರಲ್ಲಿ ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ ಸಾರಿತು. ಅದಾದ ನಂತರವಷ್ಟೇ ಪರಿಸ್ಥಿತಿ ಬದಲಾಯಿತು. 1987ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್, ಬೊಮ್ಮಾಯಿ ನೇತೃತ್ವದ ಜನತಾ ಪಕ್ಷದ ಸರ್ಕಾರವನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಬೊಮ್ಮಾಯಿ ಅವರು ಕೋರ್ಟ್ ಮೆಟ್ಟಿಲೇರಿದ್ದರು.

ಆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಚಾರಿತ್ರಿಕ ತೀರ್ಪು ಬಂದಿದ್ದು ಹಾಗೂ 1996ರ ನಂತರದಲ್ಲಿ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರಗಳ ಆಳ್ವಿಕೆ ಶುರುವಾಗಿದ್ದು ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದವರು ತಮ್ಮ ಅಧಿಕಾರವನ್ನು ಕೊಳಕಾಗಿ ಪ್ರದರ್ಶಿಸುವ ಈ ಪರಿಪಾಟಕ್ಕೆ ಕಡಿವಾಣ ಹಾಕಿತು. ಅಲ್ಲಿಯವರೆಗೆ ಕಾಂಗ್ರೆಸ್, ರಾಜ್ಯ ಸರ್ಕಾರಗಳನ್ನು ಬಹಳ ಸಹಜವೆಂಬಂತೆ ವಜಾಗೊಳಿಸುತ್ತಿತ್ತು. ಜಗತ್ತಿನ ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರಗಳ ಪೈಕಿ ಒಂದಾದ ಕೇರಳದ ಇ.ಎಂ.ಎಸ್. ನಂಬೂದರಿಪಾಡ್ ನೇತೃತ್ವದ ಸರ್ಕಾರವನ್ನು 1959ರಲ್ಲಿ ವಜಾಗೊಳಿಸುವ ಮೂಲಕ ಈ ಪರಿಪಾಟ ಆರಂಭವಾಗಿತ್ತು. ಆ ಸರ್ಕಾರ ಅಧಿಕಾರಕ್ಕೆ ಬಂದ ಎರಡೇ ವರ್ಷಗಳಲ್ಲಿ ವಜಾಗೊಂಡಿತ್ತು.

ಕಳೆದ ಕೆಲವು ವರ್ಷಗಳಿಂದ, ಅದರಲ್ಲೂ ಮುಖ್ಯವಾಗಿ ಕಳೆದ ಎರಡು ದಶಕಗಳಲ್ಲಿ, ರಾಜ್ಯಪಾಲರ ಪಾತ್ರ ಹಾಗೂ ಅವರು ಮತ್ತು ರಾಜ್ಯ ಸರ್ಕಾರಗಳು ಹೊಂದಿರುವ ಅಧಿಕಾರವು ಗಮನ ಸೆಳೆದಿದೆ. ಆಸಕ್ತಿಕರ ಅಂಶವೆಂದರೆ, ಹಣಕಾಸಿನ ಅನುದಾನವನ್ನು ರಾಜ್ಯಗಳಿಗೆ ನೀಡುವ ವಿಚಾರವಾಗಿ ರಾಜ್ಯ ಸರ್ಕಾರಗಳು ಅರೆ ಮನಸ್ಸಿನಿಂದ ಪ್ರಸ್ತಾಪಿಸಿದ್ದರ ಬಗ್ಗೆ ಸೂಕ್ತವಾದ ಚರ್ಚೆ ಅಥವಾ ಕೇಂದ್ರ ಸರ್ಕಾರದ ಕಡೆಯಿಂದ ಗಂಭೀರ ಕ್ರಮ ಆಗಿಲ್ಲ. ಆದರೆ, ರಾಜ್ಯಪಾಲರು ನಿಭಾಯಿಸಿದ ವಿವಾದಾತ್ಮಕ ಪಾತ್ರ ಮಾತ್ರ ಚರ್ಚೆಯ ಕೇಂದ್ರಸ್ಥಾನಕ್ಕೆ ಬಂದಿದೆ.

ಕೆಲವು ರಾಜ್ಯಪಾಲರು ಈಚಿನ ಕೆಲವು ವರ್ಷಗಳಲ್ಲಿ ತೆಗೆದುಕೊಂಡ ಕೆಲವು ಕ್ರಮಗಳನ್ನು ಗಮನಿಸಿದರೆ, ರಾಜ್ಯ ಹಾಗೂ ಕೇಂದ್ರದ ನಡುವಿನ ಸಂಬಂಧದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸುವ ನಡೆ ಅವಾಗಿದ್ದವು ಎಂಬುದು ಗೊತ್ತಾಗುತ್ತದೆ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷದ ಆಡಳಿತವಿರುವ ಯಾವ ರಾಜ್ಯವೂ ಅಲ್ಲಿನ ರಾಜ್ಯಪಾಲರ ವಿರುದ್ಧ ದೂರು ಹೇಳದೆ ಉಳಿದಿಲ್ಲ. ತಮಿಳುನಾಡು, ಕೇರಳ, ತೆಲಂಗಾಣ, ದೆಹಲಿ, ಜಾರ್ಖಂಡ್, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರ (ತೀರಾ ಈಚಿನವರೆಗೆ) ತಮ್ಮದೇ ಆದ ದೂರುಗಳನ್ನು ಹೊಂದಿದ್ದವು. ಕಿರಣ್ ಬೇಡಿ ಅವರು ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿದ್ದಾಗ ಇವೆಲ್ಲ ಶುರುವಾಗಿದ್ದು. ಬೇಡಿ ಅವರು ಅಲ್ಲಿನ ಮುಖ್ಯಮಂತ್ರಿ ವಿ. ನಾರಾಯಣಸ್ವಾಮಿ ಅವರೊಂದಿಗೆ ಸುದೀರ್ಘ ಜಗಳದಲ್ಲಿ ತೊಡಗಿದ್ದರು. ಆಮ್ ಆದ್ಮಿ ಪಕ್ಷವು ದೆಹಲಿಯಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಜೊತೆ ಜಗಳ ಇಲ್ಲದೆ ಒಂದು ದಿನವೂ ಕಳೆಯುವುದಿಲ್ಲ.

ಇಲ್ಲಿ ಆಸಕ್ತಿಕರ ವಿಷಯವೊಂದು ಇದೆ. ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳ ನಡುವಿನ ಹಗ್ಗ ಜಗ್ಗಾಟದಲ್ಲಿ ಕಂಡುಬರುವ ಸಾಮಾನ್ಯ ಸಂಗತಿಯೊಂದು ಇದೆ. ಅದು ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕ. ರಾಜ್ಯಪಾಲರು ವಿಶ್ವವಿದ್ಯಾಲಯಗಳ ಕುಲಾಧಿಪತಿಗಳೂ ಹೌದು. ಕುಲಪತಿಗಳ ನೇಮಕ ವಿಚಾರದಲ್ಲಿ ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ಕಿತ್ತುಕೊಳ್ಳಲು ಕೇರಳ, ಪಶ್ಚಿಮ ಬಂಗಾಳ ಹಾಗೂ ತೆಲಂಗಾಣ ರಾಜ್ಯಗಳು ಮುಂದಾಗಿವೆ. ಇದಕ್ಕೆ ಅಲ್ಲಿನ ರಾಜ್ಯಪಾಲರ ಕಡೆಯಿಂದ ವಿರೋಧವೂ ವ್ಯಕ್ತವಾಗಿದೆ. ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ನೇತೃತ್ವದ ಸರ್ಕಾರವು 24 ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡಿತು. ಆದರೆ ಆಗ ಅಲ್ಲಿ ರಾಜ್ಯಪಾಲರಾಗಿದ್ದ ಜಗದೀಪ್ ಧನಕರ್ ಅವರು (ಅಲ್ಲಿನ ಸರ್ಕಾರದ ಜೊತೆ ಅವರು ನಿರಂತರವಾಗಿ ಜಟಾಪಟಿ ನಡೆಸುತ್ತಿದ್ದರು) ಈ ನೇಮಕಕ್ಕೆ ಕಾನೂನಿನ ಮಾನ್ಯತೆ ಇಲ್ಲ ಎಂದರು. ಕೇರಳದ ಎಡರಂಗ ಸರ್ಕಾರವು ಅಲ್ಲಿನ ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ಅವರು ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಯನ್ನು ಮರುನೇಮಕ ಮಾಡಿದ್ದನ್ನು ಒಪ್ಪಲು ನಿರಾಕರಿಸಿತು. ಆದರೆ ಕೊನೆಯಲ್ಲಿ ರಾಜ್ಯಪಾಲರ ಆದೇಶಕ್ಕೆ ಮಣಿಯಿತು. ರಾಜ್ಯ ಸರ್ಕಾರದಿಂದ ನೇಮಕ ಆಗಿದ್ದ 10 ಕುಲಪತಿಗಳನ್ನು ಅಧಿಕಾರದಿಂದ ಕೆಳಗಿಳಿಸಿ ರಾಜ್ಯಪಾಲರು ಆದೇಶ ಹೊರಡಿಸಿದರು.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಅಲ್ಲಿನ ವಿಧಾನಸಭೆಯ ಅಧಿವೇಶನದಿಂದ ಹೊರನಡೆದಿದ್ದು ಈಚೆಗೆ ಸುದ್ದಿಯಾಯಿತು. ಹೊಸ ವರ್ಷದ ಮೊದಲ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವುದು ವಾಡಿಕೆ. ರಾಜ್ಯಪಾಲ ರವಿ ಅವರು ಭಾಷಣದಲ್ಲಿ ತಮ್ಮದೇ ಆದ ಕೆಲವು ಪದಗಳನ್ನು ಸೇರಿಸಿದರು. ರಾಜ್ಯದ ಸಚಿವ ಸಂಪುಟವು ಸಿದ್ಧಪಡಿಸಿ, ಅನುಮೋದನೆ ನೀಡಿ ತಮಗೆ ಕೊಟ್ಟಿದ್ದ ಭಾಷಣದಲ್ಲಿನ ಕೆಲವು ಪದಗಳನ್ನು ಕೈಬಿಟ್ಟರು. ರಾಜ್ಯ ಸರ್ಕಾರದ ಮುಖ್ಯಸ್ಥರಾಗಿ ರಾಜ್ಯಪಾಲರು, ನೀತಿಗಳಿಗೆ ಸಂಬಂಧಿಸಿದ ಹೇಳಿಕೆಯನ್ನು ಸರ್ಕಾರ ಬಯಸಿದ ರೀತಿಯಲ್ಲಿ ಓದಬೇಕಿರುವುದು ಸಂಪ್ರದಾಯ. ರವಿ ಅವರು ಭಾಷಣದಲ್ಲಿನ ಪದಗಳನ್ನು ಕೈಬಿಟ್ಟಿದ್ದುದು ಅಪೂರ್ವವಾದ ನಿದರ್ಶನ. ರವಿ ಅವರ ಕ್ರಮದ ಕಾರಣದಿಂದಾಗಿ ಆಡಳಿತಾರೂಢ ಡಿಎಂಕೆ ಪಕ್ಷವು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ರವಿ ಅವರನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಮನವಿ ಮಾಡಿತು.

ತಮಿಳುನಾಡು ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ನಡುವಿನ ಸಂಘರ್ಷ ಇಷ್ಟಕ್ಕೇ ಸೀಮಿತವಾಗಿಲ್ಲ. ರವಿ ಅವರು ಅಲ್ಲಿನ ವಿಧಾನಸಭೆಯ ಅಂಗೀಕಾರ ಸಿಕ್ಕಿರುವ ಹಲವು ಮಸೂದೆಗಳಿಗೆ ಅನುಮೋದನೆ ನೀಡದೆ ಕುಳಿತಿದ್ದಾರೆ. ನೀಟ್ ವಿಚಾರವಾಗಿ ಅಲ್ಲಿ ಸಮಸ್ಯೆ ತಲೆದೋರಿತ್ತು. ನೀಟ್ ಆಧಾರಿತ ಪ್ರವೇಶಗಳಿಂದ ತನ್ನ ವಿದ್ಯಾರ್ಥಿಗಳಿಗೆ ವಿನಾಯಿತಿ ಬೇಕು ಎಂದು ತಮಿಳುನಾಡು ಸರ್ಕಾರ ಬಯಸಿತು. ಇದಕ್ಕೆ ಸಂಬಂಧಿಸಿದ ಮಸೂದೆಯ ವಿಚಾರವಾಗಿ ನಿರ್ಣಯ ಕೈಗೊಳ್ಳದ ರವಿ ಅವರು ಅದನ್ನು ವಿಧಾನಸಭೆಗೆ ಮರಳಿಸಿದರು. ವಿಧಾನಸಭೆಯು ಆ ಮಸೂದೆಗೆ ಮತ್ತೆ ಅನುಮೋದನೆ ನೀಡಿತು.

11ನೇ ಪುಟಕ್ಕೆ...

# ಗೋಟಾ ಛೋಳೀರೋ...

ಕಷ್ಟಕೋಟಲೆಗಳು ಎಷ್ಟೇ ಇರಲಿ, ಬದುಕು ಸುಂದರವಾಗಿರಲಿ – ಇದು ಬಂಜಾರ ಸಮುದಾಯದ ಫಿಲಾಸಫಿ. ಕಾಯಕ ಪದದ ಮೂರ್ತರೂಪವಾಗಿರುವ ಕಲಬುರಗಿ ತಾಂಡಾಗಳಲ್ಲಿ ಒಂದು ಸುತ್ತು...



ಕಟಗಿ ತಂದು ಅಡಿಗೆ ಮಾಡ್ಬೇಕ್ರಿ... ಆಮ್ಯಾಲ ಹಣ್ಣು ಮಾರಾಕ ಹೋಕ್ಕೀವ್ರಿ ಸಾಹೇಬ್ರ...

ಚಿತ್ರಗಳು: ತಾಜುದ್ದೀನ್ ಆಜಾದ್



ಸಾಂಪ್ರದಾಯಿಕ ಉಡುಗೆ ತೊಟ್ಟ ಬಂಜಾರ ಸುಂದರಿ....

ರಾಹುಲ ಬೆಳಗಲಿ

'ಗೋಡೆ' ಎಂದು ಹೇಳಲಾಗುವ ಕಲ್ಲುಗಳನ್ನು ಜೋಡಿಸಿದ ರಚನೆ ಕಪ್ಪಿಟ್ಟಿದೆ. ಮೇಲಿರುವ ತಗಡಿನ ಶೀಟು ಸಹ ಇಲ್ಲಾಣದಿಂದ ತುಂಬಿದೆ. ಆ 'ಮನೆ'ಯಲ್ಲಿ ಉರಿಯುವ ಕಟ್ಟಿಗೆಯ ಒಲೆ ಎಷ್ಟೊಂದು ತೆರಪಿಲ್ಲದಂತೆ ಕೆಲಸ ಮಾಡಿದೆ ಎಂಬುದರ ಕಥೆಯನ್ನು ಈ ದೃಶ್ಯವೇ ಹೇಳುತ್ತದೆ. ಒಲೆಯ ಮುಂದೆ ಕುಳಿತ ಅಜ್ಜಿಗಂತೂ ಕೈತುಂಬ, ಮೈತುಂಬ ಕೆಲಸ. ಕಟ್ಟಿಗೆ ಆಯ್ದು ತರಬೇಕು, ಬುಟ್ಟಿ ಹೆಣೆಯಬೇಕು, ಕಾಡು ಹಣ್ಣುಗಳನ್ನು ಹೆಕ್ಕಿ ತರಬೇಕು, ಪಟ್ಟಣಕ್ಕೆ ಹೋಗಿ ಮಾರಿ ಬರಬೇಕು, ಮಧ್ಯೆ ಬಿಡುವು ಸಿಕ್ಕರೆ ಬಟ್ಟೆಗೆ ಹೆಣಿಗೆಯನ್ನೂ ಹಾಕಬೇಕು...

ಕಲಬುರಗಿ ಹತ್ತಿರದ ಕುಸನೂರು ತಾಂಡಾದ ಜನಜೀವನದ ಒಂದು ಪುಟ್ಟ ಝಲಕ್ ಇದು. ಇಲ್ಲೊಂದೇ ಅಲ್ಲ, ತಾಂಡಾಗಳೇ ಹೆಚ್ಚಾಗಿರುವ ಚಿಂಚೋಳಿ ತಾಲ್ಲೂಕಿನ ಬಂಜಾರ ಸಮುದಾಯದ ಯಾವುದೇ ಬಿಡಾರಗಳಿಗೆ ಹೋದರೂ ಇಂತಹದ್ದೇ ದೃಶ್ಯಗಳು ಸಾಮಾನ್ಯ. ಬೆಳಗಿನಿಂದ ರಾತ್ರಿವರೆಗೆ ಮೈತುಂಬ ಕೆಲಸಗಳಿದ್ದರೂ ಈ ಮಹಿಳೆಯರ ಜೀವನೋತ್ಸಾಹ ಎಂದಿಗೂ ಬತ್ತದಂಥದ್ದು. ಅರೆಕ್ಷಣವೂ ಖಾಲಿ ಕುಳಿತು ಹೊತ್ತು ಕಳೆಯದ ಅವರ ಮನೋಭಾವ ಇಂದಿನ ದಿನಮಾನದ ಅಚ್ಚರಿಗಳಲ್ಲೊಂದು.

ಆಧುನಿಕತೆಯ ದಟ್ಟಪ್ರಭಾವ ಮತ್ತು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ಜೀವನಶೈಲಿ ಮಧ್ಯೆಯೂ ನೈಜ ಅಸ್ತಿತ್ವ ಕಾಪಾಡಿಕೊಳ್ಳಲು ಹೆಣಗುತ್ತಿರುವ ಕೆಲವೇ ಸಮುದಾಯಗಳಲ್ಲಿ ಬಂಜಾರ ಸಮುದಾಯ ಕೂಡ ಒಂದು. ಜೀವನಶೈಲಿಯಲ್ಲಿ ಹಲವು ಸ್ವರೂಪದ ಬದಲಾವಣೆಗಳಾದರೂ ಶತಮಾನಗಳ ಪರಂಪರೆ, ಸಂಸ್ಕೃತಿ, ಸಂಪ್ರದಾಯವನ್ನು ಯಥಾವತ್ತು ಉಳಿಸಿಕೊಳ್ಳಬೇಕು ಎಂಬ ಕಾಳಜಿ ಆ ಸಮುದಾಯದ್ದು.

ಬ್ರಿಟಿಷರ ಆಳ್ವಿಕೆ ದಿನಗಳಿಂದಲೂ 'ಜಿಪ್ಸಿ' (ಅಲೆಮಾರಿಗಳು) ಎಂದು ಕರೆಯಲ್ಪಟ್ಟು ಹಲವು ತರಹದ ಸವಾಲು, ಸಮಸ್ಯೆಗಳನ್ನು ಎದುರಿಸುತ್ತ ಬದುಕು ಕಟ್ಟಿಕೊಂಡ ಬಂಜಾರ ಸಮುದಾಯದವರಿಗೆ ಲಂಬಾಣಿ, ಲಮಾಣಿ, ನಾಯ್ಕ, ಗೋರ್ ಮಾಟ, ಗೋರ ಎಂದೆಲ್ಲ ಚೆಂದದ ಹೆಸರುಗಳಿವೆ. ಲಿಪಿಯೇ ಇರದ ಲಂಬಾಣಿ ಭಾಷೆಯಲ್ಲೇ ಪರಸ್ಪರ ಸಂವಾದಿಸುವ ಅವರು ಪಕ್ಕಾ ಸ್ವಾಭಿಮಾನಿಗಳು. ಸೌಹಾರ್ದ ಮನೋಭಾವದವರು.

ಒಂದು ಕಡೆ ಸುಭದ್ರ ನೆಲೆ ಕಂಡುಕೊಳ್ಳದೇ ಮತ್ತು ಆಸ್ತಿಯನ್ನೂ ಮಾಡದೇ ಊರಿಂದೂರಿಗೆ ಅಲೆಯುವ ಅವರು, ದೇಶದ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಶೋಷಣೆಗೆ ಒಳಗಾಗುತ್ತಲೇ ಬಂದವರು. ಹಣ್ಣು, ತರಕಾರಿ, ಸೌದೆ ಸೇರಿದಂತೆ ಬಗೆಬಗೆಯ ವಸ್ತುಗಳನ್ನು ಮಾರುತ್ತಾ ಆಯಾ ದಿನದ ದುಡಿಮೆಯನ್ನೇ ನೆಚ್ಚಿಕೊಂಡು ಬಂದ ಲಂಬಾಣಿಯವರಿಗೆ ಬ್ರಿಟಿಷರು 'ಅಪರಾಧಿ ಬುಡಕಟ್ಟು ಜನಾಂಗ' ಎಂಬ ಹಣೆಪಟ್ಟಿ ಕಟ್ಟಿತ್ತು.

ಯಾರೂ ಅವರನ್ನು ಊರಿನೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಅವರು ಪ್ರತಿದಿನವೂ ಪೊಲೀಸರಿಗೆ ವರದಿ ಮಾಡಿಕೊಳ್ಳಬೇಕಿತ್ತು. 'ನಾವು ಯಾವುದೇ ರೀತಿಯ ಅಪರಾಧ ಮಾಡಿಲ್ಲ' ಎಂಬುದನ್ನು ಸಾಬೀತುಪಡಿಸಬೇಕಿತ್ತು. ಒಂದು ವೇಳೆ ಅವರನ್ನು ಯಾರಾದರೂ ಸಂಪರ್ಕಿಸಲು ಪ್ರಯತ್ನಿಸಿದರೆ, ಅವರನ್ನೇ ಅನುಮಾನದ ದೃಷ್ಟಿಯಿಂದ ನೋಡಲಾಗುತ್ತಿತ್ತು.

ದೇಶವು 1947ರ ಆಗಸ್ಟ್ 15ರಂದು ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾಯಿತು. ಆದರೆ, ಲಂಬಾಣಿಗರು 'ನಾವು ಅಪರಾಧಿಗಳು ಅಲ್ಲ. ನಾವು ಈ ದೇಶದ ಪ್ರಾಮಾಣಿಕ ಪ್ರಜೆಗಳು' ಎಂದು ಮುಕ್ತವಾಗಿ ಹೇಳಲು ಮತ್ತೆ ಐದು ವರ್ಷ ಕಾಯಬೇಕಾಯಿತು. 1952ರ ಆಗಸ್ಟ್ 31ರಂದು 'ಅಪರಾಧಿ ಬುಡಕಟ್ಟು ಜನಾಂಗ ಕಾಯ್ದೆ' ರದ್ದು ಆದ ಬಳಿಕ ಎಲ್ಲರಂತೆ ಬದುಕು ಕಂಡುಕೊಳ್ಳಲು ಸಾಧ್ಯವಾಯಿತು.

ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ತಾಂಡಾಗಳಲ್ಲಿ ವಾಸವಿರುವ ಲಂಬಾಣಿಗಳ ದೈನಂದಿನ ಬದುಕು ಸಣ್ಣಪುಟ್ಟ ವ್ಯಾಪಾರದ ಮೇಲೆಯೇ ನಿಂತಿದೆ. ಕಾಡು ಪ್ರದೇಶದಲ್ಲಿ ಸಿಗುವ ಕರ್ಚಿಕಾಯಿ, ಪೇರಲ, ಅಂಜೂರ ಮುಂತಾದ ಹಣ್ಣುಗಳನ್ನು ಲಂಬಾಣಿ ಮಹಿಳೆಯರು ಹೆಕ್ಕಿತಂದು ನಗರ ಪ್ರದೇಶದಲ್ಲಿ ಮಾರುವುದು ರೂಢಿ. ಲಂಬಾಣಿ ಮಿಶ್ರಿತ ಕನ್ನಡ ಮಾತನಾಡುವ ಅವರು, ಗ್ರಾಹಕರ ಮನ ಗೆದ್ದು, ರುಚಿಕಟ್ಟಾದ ಹಣ್ಣು ಹಂಪಲು ಮಾರುವುದರಲ್ಲೇ ಖುಷಿ ಕಾಣುವುದನ್ನು ನೋಡುವುದೇ ಚೆಂದ.

'ಬೆಳಗಾದರೆ ಸಾಕು, ಆಯಾ ದಿನದ ದುಡಿಮೆ ನಾವು ಕಂಡುಕೊಳ್ಳಬೇಕು. ಮನೆಯಿಂದ ಹೊರ ಹೋಗದಿದ್ದರೆ, ನಮಗೆ ಬದುಕಿಲ್ಲ. ಕಾಯಂ ಪಗಾರ ಕೂಡ ಇಲ್ಲ. ಒಂದಿಷ್ಟು ಜನರು ಹೊಲದಲ್ಲಿ ದುಡಿಯಲು ಹೋದರೆ, ಇನ್ನೂ ಕೆಲವರು ಹಣ್ಣುಹಂಪಲು, ತರಕಾರಿ ಮಾರಲು ಮಾರುಕಟ್ಟೆಗೆ ಹೋಗುತ್ತಾರೆ' ಎಂದು ಹಣ್ಣು ಮಾರಾಟಮಾಡುವ ಅಂಬಾಬಾಯಿ ಹೇಳುತ್ತಾರೆ.

ಅಂಬಾಬಾಯಿಯಂತೆ ವ್ಯಾಪಾರ ಮಾಡುವವರು ಕಲಬುರಗಿಯ ಸೂಪರ್ ಮಾರುಕಟ್ಟೆ ಅಥವಾ ಕಣ್ಣಿ ಮಾರುಕಟ್ಟೆಗೆ ತೆರಳಿ ವ್ಯಾಪಾರ ಮಾಡಿದರೆ, ಚಿಂಚೋಳಿ, ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ವಾಸವಿರುವ ತಾಂಡಾಗಳ ನಿವಾಸಿಗಳು ನೇರವಾಗಿ ಕಾಡಿನ ಹಾದಿ ಹಿಡಿಯುತ್ತಾರೆ. ಸೌದೆಯನ್ನು ಮಾರಾಟ ಮಾಡಿ ಅಥವಾ ಇನ್ನೊಬ್ಬರ ಜಮೀನಿನ ಗುತ್ತಿಗೆ ಪಡೆದು ಬೆಳೆ ಬೆಳೆದು ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ.

'ಬಹುತೇಕ ಅನಕ್ಷರಸ್ಥರೇ ಆಗಿರುವ ಲಂಬಾಣಿ ಸಮುದಾಯದವರು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕಿಂತ ತಮ್ಮದೇ ಆದ ಜೀವನಶೈಲಿ ಮತ್ತು ಸಂಸ್ಕೃತಿಯಲ್ಲಿ ಸಂತೃಪ್ತಿ ಕಾಣುತ್ತಾರೆ. ಹೀಗಾಗಿಯೇ ಅವರು ಎಲ್ಲರಂತೆ ಎಲ್ಲರೊಂದಿಗೆ ಪೂರ್ಣಪ್ರಮಾಣದಲ್ಲಿ ಬೆರೆಯುವುದು ಕಡಿಮೆ. ಇತ್ತೀಚಿನ ಕೆಲ ಯುವಜನರು ಶಿಕ್ಷಣ ಪಡೆದು, ಹೊಸ ಮಾರ್ಗ ಕಂಡುಕೊಂಡಿದ್ದು ಹೊರತುಪಡಿಸಿದರೆ ಸಮುದಾಯದ ಹಿರಿಯರು ಅದರಿಂದ ಹೊರಬರಲು ಇಷ್ಟ ಪಡುವುದಿಲ್ಲ' ಎಂದು ಲೇಖಕ ಕೆ.ಎಸ್.ನಾಯಕ ಅಭಿಪ್ರಾಯಪಡುತ್ತಾರೆ.

9ನೇ ಪುಟಕ್ಕೆ...



# ಹಾಸನದ 'ಮುಗಿಲ್‌ಪೇಟೆ'!



ಚಿದಂಬರಪ್ರಸಾದ

ಪ್ರವಾಸ


ಹಾಸನ ಜಿಲ್ಲೆ ಐತಿಹಾಸಿಕ ಸ್ಮಾರಕಗಳ ತವರೂರು. ಶಿಲ್ಪಕಲೆಯಿಂದ ವಿಶ್ವವಿಖ್ಯಾತಿ ಪಡೆದಿರುವ ಜಿಲ್ಲೆಯು ಪ್ರವಾಸಿಗರ ಪ್ರಮುಖ ಆಕರ್ಷಣೆ. ಜಿಲ್ಲೆಯ ಮಲೆನಾಡು ಭಾಗ ಪ್ರಕೃತಿ ಸೌಂದರ್ಯದ ಸೊಬಗಿನಿಂದ ಎಲ್ಲರನ್ನೂ ಸೆಳೆಯುತ್ತಿದೆ. ಅದರಲ್ಲೂ ಸಕಲೇಶಪುರ ತಾಲ್ಲೂಕು ಪ್ರಕೃತಿ ಪ್ರವಾಸೋದ್ಯಮಕ್ಕೆ ತೆರೆದುಕೊಂಡಿದೆ. ಪ್ರತಿವಾರ ಸಾವಿರಾರು ಪ್ರವಾಸಿಗರು ಈ ಭಾಗಕ್ಕೆ ಬರುತ್ತಿದ್ದು, ಇಂತಹ ಪ್ರವಾಸಿಗರನ್ನು ಸೆಳೆಯುತ್ತಿರುವ ತಾಣಗಳಲ್ಲಿ ಉಚ್ಚಂಗಿ ಗವಿ ಬೆಟ್ಟ ಕೂಡ ಒಂದಾಗಿದೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಯಸಳೂರು ಹೋಬಳಿಯ ಚಂಗಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಚ್ಚಂಗಿ ಗವಿಬೆಟ್ಟ, ಅದ್ಭುತ ಪ್ರಕೃತಿ ರಮಣೀಯ ತಾಣ. ಚಾರಣಿಗರಿಗೂ ಅತ್ಯಂತ ಪ್ರಿಯವಾಗಬಲ್ಲ ಪ್ರದೇಶ. ಒಂದರ ಮೇಲೊಂದರಂತೆ ಜೋಡಿಸಿಟ್ಟ ಬೃಹತ್ ಗಾತ್ರದ ಬಂಡೆಗಳು, ಗವಿಗಳು, ಹಸಿರು ಬೆಟ್ಟ ಸಿರಿ, ದಟ್ಟ ಅರಣ್ಯ ಮತ್ತು ವಿಶಾಲವಾದ ಮೈದಾನ ಇಲ್ಲಿನ ಪ್ರಮುಖ ಆಕರ್ಷಣೆಗಳು. ಸಿನಿಮಾ ಚಿತ್ರೀಕರಣಕ್ಕೆ ಹೇಳಿ ಮಾಡಿಸಿದಂತಹ ಜಾಗವಿದು.

ಮುಖ್ಯ ರಸ್ತೆಯಿಂದ 3-4 ಕಿ.ಮೀ ದೂರದಲ್ಲಿದೆ, ಆದರೆ ರಸ್ತೆ ಅಷ್ಟೇನೂ ಚೆನ್ನಾಗಿಲ್ಲ. ಕೇವಲ ಬೈಕ್ ಅಥವಾ ಜೀಪುಗಳ ಮೂಲಕ ಇಲ್ಲಿ ತಲುಪಬಹುದಾಗಿದ್ದು, ಹೀಗಾಗಿಯೇ ಇರಬಹುದು ಈವರೆಗೆ ಇಲ್ಲಿಗೆ ಹೆಚ್ಚು ಜನರು ಭೇಟಿ ನೀಡಿಲ್ಲ. ಆದರೆ ಈಗ ಸ್ಥಳೀಯವಾಗಿ ಖಾಸಗಿ ಜೀಪುಗಳು ಪ್ರವಾಸಿಗರನ್ನು ಕರೆದೊಯ್ಯಲು ಲಭ್ಯವಿದ್ದು, ಸಣ್ಣ ತಂಡಗಳು ಹೋಗಿ, ದಿನ ಕಳೆದು ಬರಬಹುದಾಗಿದೆ.

ಗವಿ ಬೆಟ್ಟಕ್ಕೆ ಸೇರಿದ ಜಮೀನು ಹುಲಗತ್ತೂರು ಗ್ರಾಮಕ್ಕೆ ಸೇರುತ್ತದೆ. ಹಿಂದೆ ಇಲ್ಲಿ ಉಚ್ಚ ಶೃಂಗ ಎಂಬ ಮುನಿ ತಪಸ್ಸು ಮಾಡುತ್ತಿದ್ದ ಕಾರಣ ಈ ಊರಿಗೆ ಉಚ್ಚಂಗಿ ಎಂಬ ಹೆಸರು ಬಂತೆಂಬುದು ಇಲ್ಲಿನ ಜನರ ನಂಬಿಕೆ. ಗವಿ ಬೆಟ್ಟ ಎಂದೇ ಖ್ಯಾತಿಯಾಗಿರುವ ಈ ಬೆಟ್ಟವನ್ನು ಸ್ಥಳೀಯರು, ಉಚ್ಚಂಗಿ ಬೆಟ್ಟ, ಹುಲಗತ್ತೂರು ಬೆಟ್ಟ, ಹೇರೂರು ಬೆಟ್ಟ ಮತ್ತಿತರ ಹೆಸರುಗಳಿಂದಲೂ ಕರೆಯುತ್ತಾರೆ. ಈ ಎಲ್ಲ ಊರುಗಳಲ್ಲೂ ಬೆಟ್ಟ ಹರಡಿಕೊಂಡಿರುವುದರಿಂದ ಸುಲಭವಾಗಿ ಗುರುತಿಸಲು ಹಾಗೂ ತಮ್ಮೂರಿನೊಂದಿಗಿನ ನಂಟು ಜೋಡಿಸಿಕೊಳ್ಳಲು ಹೀಗೆ ಕರೆಯುತ್ತಾರೆ.

ಬೆಟ್ಟದ ಸಮೀಪದ ನಾಗನಹಳ್ಳಿವರೆಗೂ ಅತ್ಯುತ್ತಮವಾದ ರಸ್ತೆಯಿದೆ. ಕಡೆಯ 3-4 ಕಿ.ಮೀ. ರಸ್ತೆ ಇನ್ನಷ್ಟು ಅಭಿವೃದ್ಧಿ ಕಾಣಬೇಕಾಗಿದೆ. ಬೈಕ್‌ಗಳಾದರೆ ಹಾದಿ ಸಲೀಸು, ನಡೆದೂ ತಲುಪಬಹುದಾದ ಮಾರ್ಗವಾಗಿದೆ. ಒಡಳ್ಳಿ ಗ್ರಾಮದ ಮೂಲಕವೂ ಇಲ್ಲಿಗೆ ಪ್ರವಾಸಿಗರು ಬರುತ್ತಿದ್ದು, ಅಲ್ಲಿಯೂ ದುರ್ಗಮ ಹಾದಿಯೇ ಇದೆ.



ಗವಿಬೆಟ್ಟದಲ್ಲಿರುವ ಕಡಿದಾದ ದಾರಿ.

ಬೃಹತ್ ಬಂಡೆಗಳ ಸಾಲಿನಲ್ಲಿ ಹಲವು ಸಣ್ಣ-ದೊಡ್ಡ ಗುಹೆಗಳು, ಗವಿಗಳು ಇವೆ. ಇಂತಹದೊಂದು ದೊಡ್ಡ ಗವಿಯಲ್ಲಿ ನೆಲೆಸಿದ್ದಾನೆ ಆ ಗವಿರುದ್ರೇಶ್ವರ. ಇದೇ ಕಾರಣದಿಂದ ಬೆಟ್ಟಕ್ಕೆ ಗವಿಬೆಟ್ಟ ಎಂದೂ ಹೆಸರು ಬಂದಿದೆ. ಹಿಂದೆ ಅನೇಕ ಋಷಿ ಮುನಿಗಳು ಇಲ್ಲಿ ನೆಲೆಸಿ ತಪಸ್ಸು ಮಾಡಿದ್ದಾರೆ ಎಂಬ ಪ್ರತೀತಿ ಇದೆ.

ಜೀಪು ಅಥವಾ ದ್ವಿಚಕ್ರ ವಾಹನ ಅಥವಾ ಚಾರಣದ ಮೂಲಕ ಬೆಟ್ಟದ ಮೇಲ್ಭಾಗಕ್ಕೆ ಬಂದರೆ ಅಲ್ಲೇ ಪಕ್ಕದಲ್ಲಿ ಗವಿರುದ್ರೇಶ್ವರ ಜಾಗಕ್ಕೆ ತೆರಳುವ ಹೆಬ್ಬಾಗಿಲು ಸಿಗಲಿದೆ. ಅಲ್ಲಿ ಕಡಿದಾದ ಕಾಲುಹಾದಿಯಲ್ಲಿ ಸಾಗಿದರೆ ಬೃಹತ್ ಬಂಡೆಗಳು ಎದುರಾಗುತ್ತವೆ. ಬಾಗಿ ಮುಂದೆ ಹೋದರೆ ತೆವಳಿಕೊಂಡು ಸಾಗಬಹುದಾದ ಸಣ್ಣ ಕಿಂಡಿಯಂತಹ ಜಾಗ ಸಿಗುತ್ತದೆ. ಅದನ್ನು ಅಂಬೆಗಾಲಿನಲ್ಲಿ ದಾಟಿದರೆ, ಮತ್ತೆ ಮುಂದೆ ಕಲ್ಲು ಬಂಡೆಗಳ ನಡುವೆ ಗುಹೆಯಂತಹ ಹಾದಿ ಸಿಗುತ್ತದೆ. ಬಹುತೇಕ ಕತ್ತಲು ಅವರಿಸಿರುವ ಈ ಮಾರ್ಗದಲ್ಲಿ ಮುಂದೆ ನಡೆದರೆ ಗುಹೆಯಂತಹ ಜಾಗದಲ್ಲಿ ಪೂಜೆಗೆ ನೇತು ಹಾಕಿರುವ ಒಂದೆರೆಡು ಗಂಟೆಗಳು ಕಾಣಿಸುತ್ತವೆ. ಅಲ್ಲೇ ಮುಂಭಾಗ ಅತ್ಯಂತ ಕಿರಿದಾದ ಗುಹೆಯಲ್ಲಿ ಗವಿರುದ್ರೇಶ್ವರ ಗುಡಿ ಇದೆ. ಇಲ್ಲಿ ಪ್ರತಿವರ್ಷ ಸುತ್ತಮುತ್ತಲ ಊರಿನ ಜನರಿಂದ ಪ್ರತ್ಯೇಕ ಪೂಜೆ ನಡೆಯುತ್ತದೆ.

ಪ್ರತಿವರ್ಷ ಕಾರ್ತಿಕ ಪೂಜೆಯ ದಿನ ಸಂಜೆ ನಂತರ ಈ ಬೆಟ್ಟದ ಮೇಲೆ ಊರಿನ ಜನರಿಂದ ದೀಪೋತ್ಸವ ನಡೆಯುತ್ತದೆ, ಅದು ಸುತ್ತೂರಿನ ದೂರದವರೆಗೂ ಕಾಣುತ್ತದೆ, ಜನರು ಅಲ್ಲಿಂದಲ್ಲೇ ಭಕ್ತಿಯಿಂದ ಕೈಮುಗಿಯುತ್ತಾರೆ.

ಸ್ಥಳೀಯ ಒಡಳ್ಳಿ ಗ್ರಾಮದ ಸತೀಶ್, ಮತ್ತಿತರರು ಆಸಕ್ತ ಪ್ರವಾಸಿಗರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಜೀಪ್‌ಗಳ ನೆರವನ್ನು ಒದಗಿಸುತ್ತಿದ್ದಾರೆ. ಅದಷ್ಟು ಶೀಘ್ರ ಇಲ್ಲಿಗೊಂದು ಉತ್ತಮ ರಸ್ತೆ ಸಂಪರ್ಕ ಹಾಗೂ ಪ್ರವಾಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂಬುದು ಸ್ಥಳೀಯರ ಅಭಿಪ್ರಾಯ. ಬರುವ ಪ್ರವಾಸಿಗರು ಇಲ್ಲಿನ ಸೊಬಗನ್ನು ಸವಿದು ಪರಿಸರಕ್ಕೆ ಯಾವು ಹಾನಿ ಮಾಡದೇ ತೆರಳಬೇಕು ಎಂದು ಸ್ಥಳೀಯ ಗ್ರಾಮಸ್ಥರು ಮನವಿ ಮಾಡುತ್ತಾರೆ.

ಅಕ್ಕ ಪಕ್ಕದ ಗ್ರಾಮಗಳ ಪ್ರಮುಖರು ಸೇರಿ ಗವಿಶ್ರೀ ರುದ್ರಗಿರಿ ಅಭಿವೃದ್ಧಿ ಟ್ರಸ್ಟ್ ರಚಿಸಿಕೊಂಡಿದ್ದು, ಬೆಟ್ಟವನ್ನು ಪ್ರವಾಸಿಗರ ತಾಣವಾಗಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ರಸ್ತೆ ಹಾಗೂ ಕನಿಷ್ಠ ಮುಲಸೌಕರ್ಯ ಒದಗಿಸುವಂತೆ ಸಮಿತಿಯ ಅಧ್ಯಕ್ಷ ಮಂಜುನಾಥ್, ಸದಸ್ಯರಾದ ಪುಟ್ಟೇಗೌಡ, ಕೆ.ಸಿ ಕಿಸನ್, ಮಲ್ಲೇಶ್ ಬಿ.ಸಿ, ತಿಮ್ಮೇಗೌಡ, ಜೋಯಪ್ಪ, ಜಗದೀಶ್, ವಕೀಲ ಆನಂದಕುಮಾರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬೆಕ್ಕನಹಳ್ಳಿ ನಾಗರಾಜು ಮತ್ತಿತರರು ಮನವಿ ಮಾಡುತ್ತಾರೆ. ಜೊತೆಗೆ ಸ್ಥಳೀಯ ಜನರನ್ನು ಒಗ್ಗೂಡಿಸಿ, ಸ್ವಚ್ಛತೆಗೆ ಆದ್ಯತೆ ನೀಡುತ್ತಿದ್ದಾರೆ. ಅವರ ಪ್ರಯತ್ನಕ್ಕೆ ಇತರರು ಕೈ ಜೋಡಿಸಿದರೆ ಗವಿ ಬೆಟ್ಟ ಮುಂದೊಂದು ದಿನ ರಾಜ್ಯದ ಪ್ರಮುಖ ಜನಾಕರ್ಷಣೆ ತಾಣ ಆಗುವುದರಲ್ಲಿ ಅನುಮಾನವಿಲ್ಲ. ❖

## ಗಮನ ಸೆಳೆಯುವ ಸಿಂಬಿ ಗಲ್ಲು

**'ಸಿಂಬಿ'** ಎಂದರೆ ಭಾರವಾದ ವಸ್ತುವನ್ನು ಸಮತೋಲನವಾಗಿ ಇರಿಸಿಕೊಳ್ಳಲು ಇರುವ ಒತ್ತು. ತಲೆ ಮೇಲೆ ನೀರು ಹೊರಲು ಬಿಂದಿಗೆ ಮತ್ತು ತಲೆಯ ನಡುವೆ ಇಡುವಂತಹ ಮೆತ್ತನೆ ಬಟ್ಟೆಯ ವೃತ್ತ ಅಥವಾ ಅಂತಹದೇ ವಸ್ತುವನ್ನು ಸಿಂಬಿ ಎಂದು ಕರೆಯುವುದನ್ನು ಗಮನಿಸಿದ್ದೇವೆ. ಹೀಗೆ ಒಂದರ ಮೇಲೊಂದರಂತೆ ಐದು ಕಲ್ಲುಗಳು ಸಮತೋಲನದಲ್ಲಿ ಇರುವ ಕಂಬದಂತಹ ಆಕೃತಿ ಈ ಬೆಟ್ಟದಲ್ಲಿದೆ. ಅದಕ್ಕೆ 'ಸಿಂಬಿಗಲ್ಲು' ಎಂದು ಸ್ಥಳೀಯರು ಕರೆಯುತ್ತಾರೆ. ಸಣ್ಣ ಕಲ್ಲಿನ ಮೇಲೆ ಬೃಹತ್ ಗಾತ್ರದ ಬಂಡೆಗಳೂ ನಿಂತಿವೆ. ಶತಶತಮಾನ ಕಳೆದರೂ, ಬಿರುಗಾಳಿ, ಮಳೆ ಭೋರ್ಗರೆದರೂ ಒಂದಿಷ್ಟೂ ಅಲುಗಾಡದೇ ಹಾಗೇ ತಟಸ್ಥವಾಗಿದೆ ಈ ಸಿಂಬಿಗಲ್ಲು. ಇದಕ್ಕೆ ಹೊಂದಿಕೊಂಡಿರುವ ಭಾರಿ ಗಾತ್ರದ ಬಂಡೆಗಳ ಸಾಲುಗಳ ರಾಶಿಯೂ ನಯನ ಮನೋಹರವಾಗಿವೆ.

**ಭೂದೃಶ್ಯ ವೀಕ್ಷಣೆ:** ಗವಿ ಬೆಟ್ಟದ ಪಕ್ಕದಲ್ಲಿ ಇರುವ ಮತ್ತೊಂದು ಹಾಸುಗಲ್ಲಿನ ಬೆಟ್ಟ, ಸುತ್ತಮುತ್ತಲ ಭೂದೃಶ್ಯಗಳ ವೀಕ್ಷಣೆಗೆ ಅತ್ಯಂತ ಪ್ರಶಸ್ತ ಸ್ಥಳವಾಗಿದೆ. ಕೊಡಗು ಜಿಲ್ಲೆ ಹಾಗೂ ಸಕಲೇಶಪುರ ತಾಲ್ಲೂಕಿನ ಎರಡೂ ಭಾಗಗಳ ಪ್ರಕೃತಿ ಸೌಂದರ್ಯವನ್ನು ಇಲ್ಲಿ ಕುಳಿತು ಸವಿಯಬಹುದು. ಇದೂ ಕೂಡ ಪ್ರವಾಸಿ ಆಕರ್ಷಣೆ ಹೊಂದಿದೆ.

# ಗೋಟಾ ಘೋಳೇರೊ...



8ನೇ ಪುಟದಿಂದ...

ಲಂಬಾಣಿ ಸಮುದಾಯದವರಿಗೆ ದೀಪಾವಳಿ ಮತ್ತು ಹೋಳಿ ದೊಡ್ಡ ಹಬ್ಬಗಳು. ಹೋಳಿ ಹಬ್ಬವನ್ನು ಒಂದು ವಾರ ಆಚರಿಸಿದರೆ, ದೀಪಾವಳಿ ಹಬ್ಬವನ್ನು ತಿಂಗಳುಪೂರ್ತಿ ಆಚರಿಸುವುದು ಸಂಪ್ರದಾಯ. ಬಂಜಾರ ಗೀತೆಗಳನ್ನು ಹಾಡುತ್ತ ಸಂಭ್ರಮಿಸುತ್ತಾರೆ. ಅದರಲ್ಲೇ ಮಗ್ನರಾಗುತ್ತಾರೆ.

ತಾಂಡಾದ ಸಂಪ್ರದಾಯದಂತೆ ಹಬ್ಬದ ಹಿಂದಿನ ದೀಪಾವಳಿ ಅಮಾವಾಸ್ಯೆಯ ರಾತ್ರಿ ದೀಪಗಳನ್ನು ಹಚ್ಚಿ ಯುವತಿಯರು 'ಸೇವಾಲಾಲ್ ತೂ ಮೇರಾ ದಾದಿ, ದಾದಾ, ತೂ ಮೇರಾ ವರ್ಷೇ ದಾಡೇರ್ ದವಾರೆ ಮರೇಮ್ಮ ತೂ ಮೇರಾ' ಎಂಬ ಬಂಜಾರ ಹಾಡು ಹಾಡುತ್ತ ತಾಂಡಾದ ಎಲ್ಲ ಮನೆಗಳಿಗೆ ಹೋಗಿ ಮಲಗಿದ್ದವರಿಗೆ ಎಚ್ಚರಿಸಿ ದೀಪ ತೋರಿಸಿ ಅವರಿಂದ ಹಣ ಪಡೆದುಕೊಳ್ಳುತ್ತಾ ಹೋಗುತ್ತಾರೆ. ಈ ಪರಿಪಾಟ ಬೆಳಗಿನವರೆಗೆ ನಡೆಯುತ್ತದೆ.

ಬೆಳಿಗ್ಗೆ ಕುಮಾರಿಯರು (ಮದುವೆಯಾಗದವರು) ಮಡಿಯುಟ್ಟು ದೇವಿ ದೇಗುಲಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ಲಂಬಾಣಿ ಸಂಸ್ಕೃತಿ ಬಿಂಬಿಸುವ ಉಡುಪು ತೊಟ್ಟು, ತಲೆ ಮೇಲೆ ಗಣ್ಯೋಪುಲ್ಯೊ ಧರಿಸಿ ಅದರ ಮೇಲೆ ಹೂವು ತರುವ ಬುಟ್ಟಿ ಇಟ್ಟುಕೊಂಡು ಉರುಮೆ ಮುಂತಾದ ವಾದ್ಯಗಳ ಸದ್ದಿಗೆ ನೃತ್ಯ ಮಾಡುತ್ತಾರೆ. ಇವರೊಂದಿಗೆ ಗ್ರಾಮದ ಹಿರಿಯ ಮಹಿಳೆಯರು ಹೆಜ್ಜೆ ಹಾಕುತ್ತಾರೆ.

ಬಳಿಕ ಹಿರಿಯರ ಪೂಜೆಗೆ ಹೂವು ತರಲು ಹೊರಟ ಯುವತಿಯರನ್ನು ಪೋಷಕರು ಊರ ಬಾಗಿಲವರೆಗೆ ಬಂದು ಕಳುಹಿಸಿಕೊಡುತ್ತಾರೆ. ಈ ರೀತಿ ಹೊರಟ ಹುಡುಗಿಯರು ಲಂಬಾಣಿ ಭಾಷೆಯಲ್ಲಿ ಹಬ್ಬದ ಮಹತ್ವ ಸಾರುವ ಹಾಡುಗಳ ಜತೆಗೆ ಪೂಜೆಗೆ ಹೂವು ಕೀಳಲು ಬಂದ ತಮ್ಮನ್ನು ಬಯ್ಯಬೇಡಿ ಎಂದು ಹೊಲದ ಮಾಲೀಕರಿಗೆ ಮನವಿ ಮಾಡಿಕೊಳ್ಳುವ ಹಾಡು ಹಾಡುತ್ತಾ ಹೂವುಗಳನ್ನು ಕಿತ್ತು ಬುಟ್ಟಿಯಲ್ಲಿ ಸಂಗ್ರಹಿಸಿಕೊಳ್ಳುತ್ತಾರೆ.

ಪ್ರಕೃತಿಯನ್ನು ಜೀವಾಳ ಆಗಿಸಿಕೊಂಡಿರುವ ಲಂಬಾಣಿ ಸಮುದಾಯದವರು, ನಿಸರ್ಗ ಮಾತೆಗೆ ಹಾನಿ ಮಾಡಲು ಬಯಸುವುದಿಲ್ಲ. ಮಾತುಗಳನ್ನು ಉಳಿಸಿಕೊಳ್ಳುವಲ್ಲಿ ಅಷ್ಟೇ ಬದ್ಧತೆಯುಳ್ಳವರು. ತಮ್ಮ ತಾಂಡಾಗಳ ಸುತ್ತಮುತ್ತ ಇರುವ ಬೇವಿನ ಮರವನ್ನೇ ಅವರು ದೇವತೆಯನ್ನಾಗಿ ನಂಬುತ್ತಾರೆ. ತಾಂಡಾದಲ್ಲಿ ಏನಾದರೂ ಜಗಳ, ಮುನಿಸು, ಹೊಡೆದಾಟ ನಡೆದರೆ, ತಾಂಡಾದವರು ಆ ಬೇವಿನ ಮರವನ್ನೇ ಸಾಕ್ಷಿಯಾಗಿಸಿಕೊಂಡು ನ್ಯಾಯ ಪಂಚಾಯಿತಿ ಮಾಡಿಕೊಳ್ಳುತ್ತಾರೆ.

ಈಗ ಕೋರ್ಟ್, ಪೊಲೀಸ್ ವ್ಯವಸ್ಥೆಯಿದ್ದರೂ ಬಹುತೇಕ ತಾಂಡಾಗ ಳಲ್ಲಿ ನ್ಯಾಯ ಪಂಚಾಯಿತಿಯೇ ಮೊದಲ ಆದ್ಯತೆ. ಅಲ್ಲಿ ಬಗೆಹರಿಯದಿದ್ದರೆ ಮಾತ್ರ ಕೋರ್ಟ್, ಪೊಲೀಸ್ ಠಾಣೆಯ ಮೆಟ್ಟಿಲು ಹತ್ತುತ್ತಾರೆ.

ಲಂಬಾಣಿ ಸಮುದಾಯದಲ್ಲಿ ಮದುವೆ ಶಾಸ್ತ್ರ ಕೂಡ ವಿಭಿನ್ನ ಮತ್ತು ವಿಶಿಷ್ಟವಾದದ್ದು. ಮದುವೆಯಲ್ಲಿ ಎಕ್ಕದ ಗಿಡ ಮತ್ತು ನೇಗಿಲು ಅಥವಾ ಕೃಷಿ ಉಪಕರಣಗಳಿಗೆ ಪೂಜಿಸುವ ಪದ್ಧತಿ ಇದೆ. ಈ ಹಿಂದೆ ಮಂಗಳ ಸೂತ್ರ ಧರಿಸುತ್ತಿರಲಿಲ್ಲ. ಈಗ ಕೆಲವರ ಕೊರಳಲ್ಲಿ ಮಂಗಳಸೂತ್ರ ಕಾಣುತ್ತದೆ. ಸಾಂಪ್ರದಾಯಿಕ ಉಡುಪು ಮೊದಲೆಲ್ಲ ಕಡ್ಡಾಯವಾಗಿತ್ತು. ಈಗ ಕೊಂಚ ಬದಲಾವಣೆ ಆಗಿದೆ. ವರನ ಮನೆಯಲ್ಲಿ ಯಾರಾದರೂ ಸಾಂಪ್ರದಾಯಿಕ ಉಡುಪು ಧರಿಸುತ್ತಿದ್ದರೆ, ಅಂತಹವರಿಗೆ ಮಾತ್ರ ಆ ಉಡುಪನ್ನು ವಧುವಿನ ಕಡೆಯವರು ನೀಡುತ್ತಾರೆ. ಇಲ್ಲದಿದ್ದರೆ, ಸಾಧಾರಣ ಉಡುಪುಗಳಲ್ಲೇ ಜೀವನ ಸಾಗಿಸುತ್ತಾರೆ.

'ದೇಶವು ಸ್ವಾತಂತ್ರ್ಯಗೊಂಡ 70 ವರ್ಷಗಳ ಮೇಲೂ ಲಂಬಾಣಿ ಸಮುದಾಯದವರು ದೊಡ್ಡ ಮಟ್ಟದಲ್ಲಿ ಬದಲಾವಣೆ ಕಂಡುಕೊಂಡಿಲ್ಲ. ಎಷ್ಟೇ ಪ್ರಭಾವ, ಒತ್ತಡ, ಸವಾಲು ಮತ್ತು ಸಮಸ್ಯೆಗಳು ಎದುರಾದರೂ ತಮ್ಮ ಪೂರ್ವಜರು ತೋರಿದ ದಾರಿ ಮತ್ತು ನೀಡಿದ ಮಾರ್ಗದರ್ಶನದಿಂದ ಅವರು ವಿಮುಖರಾಗಿಲ್ಲ. ಅವರು ಒಮ್ಮೆಲೇ ಬದಲಾಗಲು ಬಯಸುವುದೂ ಇಲ್ಲ. ಕೆಲ ತಾಂಡಾಗಳಲ್ಲಿ ಇನ್ನೂ ಮೌಢ್ಯ ಉಳಿದಿದೆ. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಕಾಲಕ್ಕೆ ಅನುಸಾರ ಅವರು ತಮ್ಮ ಬದುಕು ಸುಧಾರಿಸಿಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಮ್ಮ ಛಾಪು ಉಳಿಸಿಕೊಳ್ಳಬೇಕು. ಇದು ಅಗತ್ಯ ಮತ್ತು ಅನಿವಾರ್ಯ' ಎನ್ನುತ್ತಾರೆ ಕೆ.ಎಸ್.ನಾಯಕ.

ಇಂತಹ ಕಥೆಗಳನ್ನೆಲ್ಲಾ ಕೇಳಿ ತಾಂಡಾದಿಂದ ಹೊರಬರುವಾಗ ಗೋಟಾ ಘೋಳೇರೊ(ಬೆಲ್ಲದ ಪಾನಕ ಬಂತು) ಹಾಡು ಅಲೆ ಅಲೆಯಾಗಿ ತೇಲಿಬರುತ್ತಿತ್ತು.

(ಪೂರಕ ಮಾಹಿತಿ: ಜಗನ್ನಾಥ ಶೇರಿಕಾರ)



## ಮುನ್ನೋಟ 22-01-2023 ರಿಂದ 28-01-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ವೃತ್ತಿಯಲ್ಲಿ ನಿರೀಕ್ಷಿತ ಬೆಳವಣಿಗೆಯಿಂದ ತೃಪ್ತಿಹೊಂದುವಿರಿ. ವಾಹನಗಳ ಮಾರಾಟದ ವ್ಯವಹಾರವನ್ನು ಮಾಡುವವರಿಗೆ ನಿರೀಕ್ಷಿತ ಲಾಭವಿರುತ್ತದೆ. ವಿಪರೀತ ಕೆಲಸಗಳಿಂದ ದೇಹಾಲಸ್ಯ ಉಂಟಾಗಿ ಸ್ವಲ್ಪ ವಿಶ್ರಾಂತಿ ಬಯಸುವಿರಿ. ನ್ಯಾಯಾಲಯದಲ್ಲಿದ್ದ ವಿಚಾರ ಇತ್ಯರ್ಥಗೊಂಡು ಸಮಾಧಾನವೆನಿಸುತ್ತದೆ. ದಂತವೈದ್ಯರಿಗೆ ಹೆಚ್ಚು ಸಂಪಾದನೆ ಆಗುವ ಸಂದರ್ಭವಿದೆ. ದೈವ ಕಾರ್ಯಗಳಿಗಾಗಿ ಹಣ ಮೀಸಲಿಡುವಿರಿ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಮಾಜದಲ್ಲಿ ಈಗಿನ ಕಾಲಘಟ್ಟಕ್ಕೆ ತಕ್ಕಂತೆ ಸ್ಥಾನಮಾನಗಳನ್ನು ಪಡೆಯಲು ಪ್ರಯತ್ನಪಡುವಿರಿ. ಜವಳಿ ವ್ಯಾಪಾರಿಗಳಿಗೆ ಪರಿಚಯದವರ ಮೂಲಕ ವ್ಯಾಪಾರ ವೃದ್ಧಿಸುತ್ತದೆ. ಕಟ್ಟಡ ಗುತ್ತಿಗೆದಾರರಿಗೆ ಸ್ವಲ್ಪಮಟ್ಟಿನ ಹಿನ್ನಡೆ ಆಗಬಹುದು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಕೆಲಸಗಳ ಬಗ್ಗೆ ಅಧಿಕಾರಿ ವರ್ಗದಲ್ಲಿ ಚರ್ಚೆಯಾಗುವ ಸಂದರ್ಭವಿದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭವಿರುತ್ತದೆ.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಔಷಧಿ ತಯಾರಿಕಾ ಕಂಪನಿಗಳಿಗೆ ಮುನ್ನಡೆ ಇರುತ್ತದೆ ಹಾಗೂ ಅವರಿಗೆ ಬೇಕಾದ ಕಚ್ಚಾ ವಸ್ತುಗಳು ದೊರೆಯುತ್ತವೆ. ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚು ಸಾಧನೆ ಮಾಡುವಿರಿ. ನೀರಾವರಿ ನಿರ್ವಹಣೆಯಲ್ಲಿ ಸಾಧನೆ ಮಾಡಿತೋರುವಿರಿ. ಆದಾಯ ಕಡಿಮೆ ಇದ್ದರೂ ಹಣದ ನಿರ್ವಹಣೆಯನ್ನು ಅಗತ್ಯಕ್ಕೆ ತಕ್ಕಂತೆ ಮಾಡುವಿರಿ. ಸಂಬಂಧಿಕರ ಆಗಮನದಿಂದ ಮನೆಯಲ್ಲಿ ಸಂಭ್ರಮ ಹೆಚ್ಚುವುದು.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಕಾರ್ಮಿಕರು ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡುವುದರಿಂದ ಇದ್ದ ತೊಂದರೆಗಳು ನಿವಾರಣೆಯಾಗುತ್ತದೆ. ಕೆಲವು ರಾಜಕೀಯ ವ್ಯಕ್ತಿಗಳಿಗೆ ಅವರ ಪಕ್ಷದ ವ್ಯಕ್ತಿಗಳ ಕುತಂತ್ರದಿಂದಾಗಿ ತೊಂದರೆ ಆಗಬಹುದು. ವಿದೇಶದಲ್ಲಿ ಶಿಕ್ಷಣದ ಪ್ರಯತ್ನವನ್ನು ಈಗ ಮಾಡಿದಲ್ಲಿ ಅವಕಾಶಗಳು ಪ್ರಾಪ್ತಿಯಾಗುವ ಸಂಭವವಿದೆ. ಹೆಸರಾಂತ ವಕೀಲರಿಗೆ ಕೆಲವೊಮ್ಮೆ ಪಾಪಪ್ರಜ್ಞೆ ಕಾಡಬಹುದು.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೃಷಿಕರಿಗೆ ಬಹಳ ಉತ್ತಮವಾದ ವಾರ. ಕೃಷಿಯಿಂದ ಹೆಚ್ಚು ಆದಾಯ ಬರುತ್ತದೆ. ವ್ಯವಹಾರಗಳ ಬಗ್ಗೆ ಹೆಚ್ಚಿನ ಗಮನ ಮತ್ತು ಹೆಚ್ಚು ನಿಗಾವಹಿಸುವುದು ಉತ್ತಮ. ಧನ ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಒಡಹುಟ್ಟಿದವರೊಡನೆ ಮುಸುಕಿನ ಗುದ್ದಾಟಗಳಿರುತ್ತವೆ. ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಹೆಚ್ಚು ಮುನ್ನಡೆ ಇರುತ್ತದೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಗಣ್ಯ ವ್ಯಕ್ತಿಗಳಿಗೆ ಸನ್ಮಾನ ದೊರೆಯುವ ಸಂದರ್ಭವಿದೆ. ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳ ಸಂದರ್ಶನ ಮಾಡುವ ಅವಕಾಶ ದೊರೆಯುತ್ತದೆ. ಮಿತ್ರರೊಡನೆ ವಾಗ್ವಾದ ಏರ್ಪಡದಂತೆ ಎಚ್ಚರಿಕೆವಹಿಸುವುದು ಬಹಳ ಒಳ್ಳೆಯದು. ಆದಾಯ ಕಡಿಮೆ ಇದ್ದು ಹಣ ನಿರ್ವಹಣೆ ಮಾಡಬೇಕಾದ ಅನಿವಾರ್ಯವಿರುತ್ತದೆ, ಇಲ್ಲವಾದಲ್ಲಿ ಸಾಲದ ಹೊರೆ ಹೆಚ್ಚಾಗುವ ಸಂದರ್ಭವಿದೆ.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ದೇವರ ಬಗ್ಗೆ ಹೆಚ್ಚು ಒಲವು ಮೂಡುತ್ತದೆ. ನೀವು ಆರಿಸಿಕೊಂಡ ಮಾರ್ಗದಲ್ಲಿನ ತಪ್ಪುಒಪ್ಪುಗಳು ಈಗ ಗೊತ್ತಾಗುತ್ತದೆ. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಿರುತ್ತದೆ. ನಿಮ್ಮ ಸಂಸ್ಥೆಯ ಮೇಲಧಿಕಾರಿಗಳ ವಿಶ್ವಾಸ ಸಂಪಾದಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗುವಿರಿ. ಮಗನ ವಿದ್ಯಾಭ್ಯಾಸಕ್ಕೆ ಸಾಮಾಜಿಕ ಸಂಸ್ಥೆಗಳಿಂದ ನೆರವು ದೊರೆಯುತ್ತದೆ. ವೃತ್ತಿಯಲ್ಲಿ ಒತ್ತಡ ಹೆಚ್ಚಾದಂತೆ ಕಾಣಬಹುದು.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ

ಗುರಿ ಸಾಧಿಸಬೇಕೆಂಬ ಛಲ ನಿಮ್ಮಲ್ಲಿ ಸಾಕಷ್ಟು ಇರುತ್ತದೆ. ಕಾರ್ಮಿಕರಿಗೆ ಬಹಳ ದಿನದಿಂದ ಆಶಿಸುತ್ತಿದ್ದ ಕೆಲವು ಸವಲತ್ತುಗಳು ಈಗ ಸಿಗುತ್ತವೆ. ವ್ಯವಹಾರಗಳಲ್ಲಿ ಸಾಕಷ್ಟು ಹಿಡಿತ ಪಡೆಯಲು ಪ್ರಯತ್ನಪಡುವಿರಿ. ನಿಮ್ಮ ಮನೋಭಾವಕ್ಕೆ ನಿಮ್ಮ ಕುಟುಂಬದವರು ಹೊಂದಿಕೊಂಡು ಸಹಕಾರ ನೀಡುವರು.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಾಕಿ ಉಳಿದಿದ್ದ ಕೆಲವು ಕೆಲಸ ಕಾರ್ಯಗಳು ಸದ್ಯದಲ್ಲೇ ಪೂರ್ಣಗೊಳ್ಳುತ್ತವೆ. ಬಂದಿದ್ದ ಸಮಸ್ಯೆಯನ್ನು ಸರಾಗವಾಗಿ ಪರಿಹಾರ ಮಾಡಿಕೊಳ್ಳುವಿರಿ. ನೀವು ಮಾಡುವ ಕೆಲಸದಲ್ಲಿ ತಪ್ಪು ಹುಡುಕುವವರು ಇದ್ದೇ ಇರುತ್ತಾರೆ. ಅವರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ವೈರಿಗಳನ್ನು ಹಲವಾರು ತಂತ್ರಗಳನ್ನು ಬಳಸಿ ಪರಾಕ್ರಮದಿಂದ ಎದುರಿಸಿ ಮಣಿಸುವಿರಿ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಗಳಿಗೆ ಹೆಚ್ಚು ಬೆಲೆಕೊಡುವಿರಿ. ಹೆಚ್ಚಿನ ಪರಿಣಿತಿ ಪಡೆದ ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆ ಹೆಚ್ಚಾಗುತ್ತದೆ. ಯಾವುದೇ ಹೊಸ ಉದ್ಯೋಗವನ್ನು ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ಅದರ ವಿವರವನ್ನು ಸಂಪೂರ್ಣವಾಗಿ ತಿಳಿಯಿರಿ.


**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಕೆಲವೊಂದು ಹಣಕಾಸಿನ ವ್ಯವಹಾರಗಳಲ್ಲಿ ಪಾಲುದಾರಿಕೆ ದೊರೆಯುವ ಸಾಧ್ಯತೆ ಇದೆ. ಯುವಕರು ಪ್ರಯಾಣದ ಸಮಯದಲ್ಲಿ ತಮ್ಮ ಆಲಸೀತನದಿಂದ ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ, ಎಚ್ಚರವಹಿಸಿರಿ. ಕೆಲವರಿಗೆ ವಿಚಾರ ಸಂಕೀರ್ಣದಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎಂಜಿನಿಯರಿಂಗ್ ವಿದ್ಯೆಯನ್ನು ಕಲಿಯುತ್ತಿರುವವರಿಗೆ ಸೂಕ್ತ ಪ್ರೋತ್ಸಾಹ ದೊರೆಯುತ್ತದೆ. ವೈದ್ಯ ವೃತ್ತಿಯನ್ನು ನಡೆಸುತ್ತಿರುವವರಿಗೆ ಸೂಕ್ತ ವರಮಾನದ ಯೋಗವಿದೆ. ಹಣದ ಹರಿವು ಮಂದಗತಿಯಲ್ಲಿರುತ್ತದೆ. ವಿದೇಶದಿಂದ ಕುಟುಂಬಸ್ಥರು ಹಣಕಾಸಿನ ಸಹಕಾರ ನೀಡಬಹುದು.

## ಪದಬಂಧ 2773



**ಮೇಲಿನಿಂದ ಕೆಳಕ್ಕೆ**

1. ನೇಸರನು ಪಶ್ಚಿಮದಲ್ಲಿ ಮುಳುಗುತ್ತಿದ್ದಂತೆ ಆವರಿಸುವ ರಕ್ತ ವರ್ಣ 4
2. ದಕ್ಷಿಣ ಕನ್ನಡದ ಕಿನ್ನರ ಸೋದರರ ಗೇಯ ನಾಟಕ 4
3. ಆತಂಕ ಮತ್ತು ಚರ್ಚೆಗೆ ಒಳಪಟ್ಟ ವಿಷಯ 4
4. ಒಂದು ಪ್ರಕಾರದಲ್ಲಿ ಬದುಕಿನಲ್ಲಿ ಅನುಸರಿಸುವ ರಿವಾಜು ಮತ್ತು ನಿಯಮಗಳ ನಡೆವಳಿಕೆ 4
6. ನುಡಿಸಿದರೂ ಮಿಡಿಯದ ಶಿಲೆಯಂತಹ ಹೃದಯ ವಾದ್ಯ 4
7. ಜನರ ಮುಂದಾಳತ್ವ ವಹಿಸಿರುವ ಮುಖ್ಯಸ್ಥರು 4
9. ಶ್ರೇಷ್ಠವಾದ ಬೆಟ್ಟದೊಡೆಯ ಅರ್ಥಾತ್ ತಿರುಪತಿಯ ವೆಂಕಟರಮಣ 5
12. ವಿರಳವಾದ ತಾವರೆಯ ನಾಭಿಯಿಂದ ಹುಟ್ಟಿದ ಮಹಾವಿಷ್ಣು 5
13. ಇದೀಗ ಸಂಕ್ರಾಂತಿಗೆ ಸೂರ್ಯ ಪ್ರವೇಶ ಮಾಡಿದ ರಾಶಿ 3
15. ದ್ರವದಂತೆ ಹರಿಯುವ ಹಣ 3
19. ನ್ಯಾಯಾಂಗದಲ್ಲಿ ಅಪರಾಧಿ ನಿಲ್ಲುವ ಚೌಕ 4
20. ಮಾರ್ಗದರ್ಶಕನೇ ಭಗವಂತ 4
21. ಬಂಗಾಳ ನಾಡು 4
22. ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಬದಲಾವಣೆ 4
24. ತಮಾಷೆ ಮಾಡುವ ಲಲನೆ 4
25. ಭೂಮಿಯ ಬುದ್ಧಿಯುಳ್ಳವಳು 4

**ಎಡದಿಂದ ಬಲಕ್ಕೆ**

1. ಧೃತರಾಷ್ಟ್ರನಿಗೆ ಮಹಾಭಾರತದ ಕತೆಯನ್ನು ಕಾಮೆಂಟರಿಯಂತೆ ಹೇಳಿದವ 3
3. ಪ್ರವಾಹದಂತೆ ಧುಮಿಕ್ಕಿ ದೀರ್ಘವಾಗಿ ಹರಿಯುವ ವಾಣಿ 3
5. ಒಂದು ಘಳಿಗೆಯ ಆನಂದ 3
7. ನಾರಾಯಣ ನಾರಾಯಣನೆನುತ ತ್ರಿಲೋಕ ಸಂಚರಿಸಿದ ಮುನಿ 3
8. 'ಪುಟ ತಿರುಗಿಸಿ ನೋಡು' ಎನ್ನುವುದಕ್ಕೆ ಆಕರವಾಗಿರುವ ಗೋಕುಲ ನಿರ್ಗಮನದ ಕವಿ 3
10. ವಿವರಣೆಗೆ ಬರುವ ನೋಟಗಾರ 3
11. ಕೆತ್ತನೆ ಮಾಡುವ ಅಲ್ಪಪ್ರಾಣದ ಶಿಲ್ಪಿ 3
13. ಮುಖನೋಡಿ ಹಾಕುವ ಪೀಠ 2
14. ಮಹಾಶಿವ ಉಗ್ರರೂಪಿ 2
16. ಬೆದೆಗೆ ಬಂದ ಹೆಂಗರು 3
17. ರಾಮನ ನೆನದು ವಿಶ್ರಾಂತಿ 3
18. ಹಿಂದು ಮುಂದಾದ ಹಸ್ತ 2
20. ಸ್ವಭಾವದ ವಾಚಕ 2
21. ಕುಲಕ್ಕೆ ಸೇರಿದವ 3
23. ಹೋರಾಟದ ಗಂಡು ಕುರಿ 3
24. ಪದವಿ ಗೌರವಗಳಿಗೆ ಹೆಸರಾದ ಸಂವ 3
26. ರಾಟೆಗೆ ಸಿಕ್ಕಿ ಹಾಕಿಕೊಳ್ಳುವ ಕೋಪದ ಕಿಡಿ 3
27. ವರವಾಗಿ ಬಂದ ಸುದ್ದಿ 3
28. ಶಾರೋಟಿನ ಪ್ರಿಯ 3
29. ನಿರ್ಬಂಧಗೊಳಿಸುವ ನೇಮ 3

## ಪದಬಂಧ ಉತ್ತರ -2772

**ಮೇಲಿಂದ ಕೆಳಕ್ಕೆ**

1. ಸುಜನ 2.ಲಕ್ಷಣ 3.ಸಂಕಲನ 4.ತಿಲ 6.ತಲತಲಾಂತರ 8.ವಘರಾ 9.ಒಣಬೇಸಾಯ 10.ಪುರಭವನ 11.ಅಂಕೆ 12.ಉತ್ತಮಪುರುಷ 14.ಮನ 16.ಪವಿತ್ರ 19.ಜಯಗಾನ 20.ಮಂಟಪ 21.ಯಕಾರ 23.ನವ

**ಎಡದಿಂದ ಬಲಕ್ಕೆ**

1.ಸುಗ್ಗೀಕಾಲ 3.ಸಂಕ್ರಾಂತಿ 5.ಲಕ್ಷ್ಮೀಕಾಂತ 7.ನಡುವಣ 9.ಒನಪು 11.ಅಂಕಿತ 12.ಉತ್ತರಾಯಣ 13.ರವಿಕೆ 14.ಮನಸಾ 15.ವರೋಪಚಾರ 17.ಪುದೀನ 18.ಯಜನ 20.ಮಂತ್ರಮಯ 22.ಷಡಾನನ 24.ವದನ 25.ಪರಿಹಾರ

# ಯುದ್ಧ ವಿರೋಧಿ ನವಿಲು ಪುರಾಣ

**ಯುದ್ಧವೆಂಬುದು ಯಾವ ದೇಶವನ್ನೂ ಯಾವ ಸ್ಥಳವನ್ನೂ ಬಿಟ್ಟಿಲ್ಲ ಎನ್ನುವ ಕಥಾನಾಯಕ, ಯುದ್ಧದ ಬೀಕರತೆಯನ್ನು ತೆರೆದಿಡುತ್ತಾನೆ. ನೋಡುಗರ ಮನಸ್ಸು ಶಾಂತಿಗಾಗಿ ಹಂಬಲಿಸುತ್ತದೆ**

ಗೌರಿ ಚಂದ್ರಕೇಸರಿ



ಹಿರೋಷಿಮಾದ ಮೇಲೆ ಅಣು ಬಾಂಬ್ ಬೀಳುವ ಸನ್ನಿವೇಶ ಪರದೆಯ ಮೇಲೆ ಮೂಡುವ ಮೂಲಕ ಆರಂಭವಾಗುತ್ತದೆ 'ನವಿಲು ಪುರಾಣ' ನಾಟಕ. ಯುದ್ಧದ ಘೋರ ಪರಿಣಾಮಕ್ಕೆ ತುತ್ತಾಗಿ ಅಂಗವಿಹೀನರಾದ ಮಕ್ಕಳು ತರಗತಿಯೊಂದರಲ್ಲಿ ಕುಳಿತು ಆ ಅಣು ಬಾಂಬ್ ಸೃಷ್ಟಿಸಿದ ನಷ್ಟದ ಕುರಿತು ಪಾಠವನ್ನು ಕೇಳುವ ದಾರುಣ ಪರಿಸ್ಥಿತಿ. ಇದು ವಿಪರ್ಯಾಸವಷ್ಟೇ ಅಲ್ಲ, ಯುದ್ಧದ ಕ್ರೂರ ವ್ಯಂಗ್ಯವೂ ಹೌದು. ಯುದ್ಧ ವಿರೋಧಿ ಅಂಶಗಳನ್ನಿಟ್ಟುಕೊಂಡು ಹೆಣೆದ 'ನವಿಲು ಪುರಾಣ' ನಾಟಕ ಪುರಾಣ ಕಾಲದಿಂದಲೂ ಯುದ್ಧಕ್ಕೆ ಜೀವಂತ ಸಾಕ್ಷಿಯಾದ ನವಿಲೊಂದರ ಅಳಲು.

ನಾಟಕದ ಕಥಾ ನಾಯಕ ಲೇಖಕನೂ ಹೌದು, ನಿರೂಪಕನೂ ಹೌದು. ಯುದ್ಧಗಳನ್ನು ನೋಡಿ, ಅದರ ದುಷ್ಪರಿಣಾಮಗಳನ್ನು ಎದುರಿಸಿ ನೊಂದು, ಬೆಂದು, ಬಸವಳಿದವ. ಯುದ್ಧಗಳು ಮನುಷ್ಯನಿಗೆ ಅನಿವಾರ್ಯವೇ ಎಂದು ಪ್ರಶ್ನಿಸುವ ಮೂಲಕ ಪುರಾಣ, ಇತಿಹಾಸ, ವರ್ತಮಾನ ಕಾಲಘಟ್ಟಗಳ ಯುದ್ಧಗಳನ್ನು ಜರಿಯುತ್ತ ವಿಷಾದ ವ್ಯಕ್ತಪಡಿಸುತ್ತಾನೆ. ಮಹಾಭಾರತದ ಕುರುಕ್ಷೇತ್ರ, ರಾಮ-ರಾವಣರ ಯುದ್ಧದ ಪರಿಣಾಮ ಕೊನೆಯಲ್ಲಿ ವಿನಾಶವೇ ಆಗಿದ್ದರೂ ಅದರಿಂದ ಪಾಠವನ್ನು ಕಲಿಯದ ಮಾನವ ಮತ್ತೆ ಮತ್ತೆ ಯುದ್ಧಕ್ಕೆಳೆಸುತ್ತಲೇ ಇದ್ದಾನೆ.

ಸಮುದ್ರ ಮಾರ್ಗವಾಗಿ ಅಮೆರಿಕ, ಇರಾಕ್ ದೇಶವನ್ನು ಸದೆ ಬಡಿಯಲು ಬರುವಾಗ, ಇರಾಕ್ ತನ್ನಲ್ಲಿರುವ ಸಾವಿರ ಸಾವಿರ ಗ್ಯಾಲನ್ ಕಚ್ಚಾ ತೈಲವನ್ನು ಸಮುದ್ರಕ್ಕೆ ಸುರಿದು ವೈರಿ ಪಡೆಯನ್ನು ಹಿಮ್ಮೆಟ್ಟಿಸುತ್ತದೆ. ಆದರೆ ಅದರ ಘೋರ ಪರಿಣಾಮವನ್ನು ಎದುರಿಸಿದ್ದು ಸಮುದ್ರದಲ್ಲಿನ ಮೂಕ ಜಲಚರಗಳು. ಸುಮಾರು 600 ಕಿ.ಮೀ.ಯಷ್ಟು ಉದ್ದದವರೆಗೆ ಸಮುದ್ರದುದ್ದಕ್ಕೂ ತೈಲ ಹರಡಿ ಕೋಟಿ ಕೋಟಿ ಸಮುದ್ರ ಜೀವಿಗಳ ನಿರ್ನಾಮಕ್ಕೂ ಆ ಯುದ್ಧ ಕಾರಣವಾಯಿತು. ಉಳ್ಳವರ ಯುದ್ಧ ದಾಹಕ್ಕೆ ಸದಾ ಬೆಲೆ ತೆರುವುದು ದುರ್ಬಲರು, ಬಡವರು, ಮುಗ್ಧರು.

ಯುದ್ಧವೆಂಬುದು ಯಾವ ದೇಶವನ್ನೂ, ಯಾವ ಸ್ಥಳವನ್ನೂ ಬಿಟ್ಟಿಲ್ಲ ಎಂದು ಹೇಳುತ್ತಾನೆ ಕಥಾ ನಾಯಕ. ರಾಜಸ್ಥಾನದ ಒಂದು ಸುಂದರ ನಗರಿ, ಅಲ್ಲಿನ ಶಾಸ್ತ್ರೀಯ ಸಂಗೀತ, ನೃತ್ಯ, ಉದ್ಯಾನಗಳಲ್ಲಿ ಆಡಿಕೊಂಡಿರುವ ಸುಂದರ ನವಿಲುಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿದ್ದವು. ಪೋಖ್ರಾಣ್‌ನಲ್ಲಿ 1974ರಲ್ಲಿ ಪರೀಕ್ಷಾರ್ಥ ಅಣು ಬಾಂಬ್ ಸ್ಫೋಟಿಸಿದಾಗ ಬೆದರಿದ ನವಿಲುಗಳು ಆರ್ತನಾದ ಮಾಡುತ್ತ ಗಾಬರಿಯಿಂದ ಎತ್ತರೆತ್ತರಕ್ಕೆ ದಿಕ್ಕು ತಪ್ಪಿ ಹಾರಾಡುತ್ತಿದ್ದವು. ಶಾಂತಿ, ಸೌಹಾರ್ದ, ಸೌಂದರ್ಯದ ಪ್ರತೀಕದಂತಿದ್ದ ನವಿಲುಗಳು ಅಲ್ಲಿ ಈಗ ಬೆರಳೆಣಿಕೆಯಷ್ಟು ಉಳಿದಿವೆ ಎಂದೂ ಆತ ವಿಷಾದ ವ್ಯಕ್ತಪಡಿಸುತ್ತಾನೆ.

ಕುರುಕ್ಷೇತ್ರದ ಯುದ್ಧಾನಂತರ ಪಾಂಡವರನ್ನು ನಿರ್ಮೂಲನೆ ಮಾಡುವ ಪಣತೊಟ್ಟು ಬಸಿರು ಹೊತ್ತ ಹೆಂಗಸರ ಭ್ರೂಣಗಳೆಲ್ಲವನ್ನೂ ತನ್ನ ಬ್ರಹ್ಮಾಸ್ತ್ರದಿಂದ ನಾಶ ಮಾಡುತ್ತಾನೆ ಅಶ್ವತ್ಥಾಮ. ಆಗ ಕುಪಿತನಾದ ಕೃಷ್ಣ ಅಶ್ವತ್ಥಾಮನಿಗೆ 'ಮೂರು ಸಾವಿರ ವರ್ಷಗಳ ಕಾಲ ಕಾಡು-ಮೇಡು ಅಲೆಯುತ್ತಿರು. ನಿನ್ನ ದೇಹದ ಮೇಲಿನ ಗಾಯಗಳು ಮಾಯದೇ ವ್ರಣವಾಗಿ, ಯಾರೂ ನಿನ್ನನ್ನು ಹತ್ತಿರ ಸೇರಿಸದಿರಲಿ' ಎಂದು ಶಪಿಸುತ್ತಾನೆ. ಅದೇ ಅಶ್ವತ್ಥಾಮ ಯುದ್ಧದ ರೂಪ ತಳೆದು ಅಲೆದಾಡುತ್ತಲೇ ಇದ್ದಾನೆ. ಅವನ ಪಾಪ ಪರಿಹಾರದ ಆ ಮೂರು ಸಾವಿರ ವರ್ಷಗಳು ಅದೆಂದು ಕೊನೆಯಾಗುತ್ತವೆ ಎಂಬುದು ನಾಟಕದ ನಾಯಕನ ಯಕ್ಷ ಪ್ರಶ್ನೆ.

ಅತೀ ಸರಳ ರಂಗ ಪರಿಕರಗಳನ್ನು ಒಳಗೊಂಡ ನಾಟಕದಲ್ಲಿ ಆರಂಭದಿಂದ ಅಂತ್ಯದುದ್ದಕ್ಕೂ ಮುಖವಾಡಗಳನ್ನು ಬಳಸಿಕೊಳ್ಳಲಾಗಿದೆ. ಅಣುಬಾಂಬ್, ಪ್ರಾಣಿ-ಪಕ್ಷಿಗಳು, ರಾಜಕೀಯ ನಾಯಕರು, ಮಹಾಭಾರತದ ಪಾತ್ರಗಳ ಮುಖವಾಡಗಳು ನಾಟಕವನ್ನು ಇನ್ನಷ್ಟು ಪರಿಣಾಮಕಾರಿಯನ್ನಾಗಿಸಿವೆ. ನಾಟಕದುದ್ದಕ್ಕೂ ಬರುವ ನವಿಲಿನ ಹಿಂಡಿನ ಪರಿಕಲ್ಪನೆ ಮತ್ತು ಅವುಗಳ ನೃತ್ಯ ಅನನ್ಯ.

ನಾಟಕದುದ್ದಕ್ಕೂ ಸುರೇಶ ಆನಗಳ್ಳಿ ಅವರ ಚಾಕಚಕ್ಯತೆ ಎದ್ದು ಕಾಣುತ್ತದೆ. ನಿರ್ದೇಶಕರು ನಾಟಕವನ್ನು ಕೇವಲ ಸಂಭಾಷಣೆಗಳ ಮೂಲಕ ಒಪ್ಪಿಸದೇ ಒಂದು ವಿಭಿನ್ನ ಮಾದರಿಯನ್ನು ಬಳಸಿಕೊಂಡಿದ್ದಾರೆ. ಪಂಚತಂತ್ರದ ಕತೆಗಳನ್ನು ಕೇಳುವಾಗ ಮನದ ಪರದೆಯ ಮೇಲೆ ಮೂಡುವ ಪ್ರಾಣಿ-ಪಕ್ಷಿಗಳಂತೆ ಇಡೀ ನಾಟಕದಲ್ಲಿ ಮುಖವಾಡಗಳನ್ನು ಧರಿಸಿದ ಪಾತ್ರಧಾರಿಗಳು ಬಂದು ಹೋಗುತ್ತಾರೆ. ಅಲ್ಲಲ್ಲಿ ಬರುವ ಸುಮಧುರ ಸಂಗೀತ, ನೆರಳು ಬೆಳಕಿನಾಟ, ಸೂಕ್ತ ಪ್ರಸಾಧನ, ಎಲ್ಲರ ಪ್ರಬುದ್ಧ ಅಭಿನಯ ಪ್ರೇಕ್ಷಕರ ಮೆಚ್ಚುಗೆ ಗಳಿಸುತ್ತದೆ. ಆಗಾಗ ಪರದೆಯ ಮೇಲೆ ಮೂಡುತ್ತಿದ್ದ ಸಾಕ್ಷ್ಯಚಿತ್ರಗಳ ನೈಜಬಿಂಬದ ತುಣುಕುಗಳು ಯುದ್ಧಗಳ ಭೀಕರತೆಯನ್ನು ಹೇಳುವಲ್ಲಿ ಮುಖ್ಯ ಪಾತ್ರವಹಿಸುತ್ತವೆ.

ಹೆಸರಾಂತ ಉರ್ದು ಲೇಖಕ ಇಂತಿಜಾರ್ ಹುಸೇನ್ ರಚಿಸಿದ ಮೂಲ ಕತೆಯನ್ನಿಟ್ಟುಕೊಂಡು ಪ್ರೊ.ಕೆ.ಇ.ರಾಧಾಕೃಷ್ಣ ಅವರು ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಶಿವಮೊಗ್ಗದ ಸಮುದಾಯದ ಸಹಯೋಗದಲ್ಲಿ ಬೆಂಗಳೂರಿನ 'ಅನೇಕ' ರಂಗತಂಡ ಈ ನಾಟಕವನ್ನು ಅಭಿನಯಿಸಿದೆ.



ನವಿಲು ಪುರಾಣ ನಾಟಕದ ಒಂದು ದೃಶ್ಯ



ಪು: 480 ₹550

**ಶಿರೋಮಣಿ**
ಪ್ರಧಾನ ಸಂ.: ಎಲ್.ಎನ್. ಮುಕುಂದರಾಜ್
ಪ್ರ:ಸ್ನೇಹಾ ಪಬ್ಲಿಷಿಂಗ್ ಹೌಸ್

## ಬದುಕಿನ ಮಜಲು ಕಾಣಿಸುವ ಮಣಿ

**ಕನ್ನಡದ** ಪ್ರಮುಖ ಲೇಖಕಿಯರಲ್ಲಿ ಒಬ್ಬರಾದ ಪ್ರೊ.ಅಂಬಾಮಣಿ ಮೂರ್ತಿಯವರ ಬದುಕು, ಬರಹವನ್ನು ಸಮಗ್ರವಾಗಿ ಕಟ್ಟಿಕೊಟ್ಟಿದೆ ಶಿರೋಮಣಿ. ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳು, ಪ್ರೊ.ಮೂರ್ತಿಯವರ ಕುರಿತು ಅಭಿಮಾನದ ನುಡಿಗಳು, ಕಾವ್ಯಗಳು, ಜೀವನದ ಮಜಲುಗಳ ಗುಣಗಾನದ ಬರಹಗಳು ಕೃತಿಯಲ್ಲಿವೆ. ಲೇಖಕಿಯವರ ಬಾಲ್ಯದ ನೆನಪುಗಳು, ಬೆಳವಣಿಗೆ, ಶಿಕ್ಷಣ, ವೃತ್ತಿ ಬದುಕು ಇತ್ಯಾದಿ ಅವರ ಆತ್ಮಕಥನ ಭಾಗದಲ್ಲಿವೆ. ಕ್ಯಾನ್ಸರ್ ಕುತ್ತಿನಿಂದ ಪಾರಾದ ಸನ್ನಿವೇಶವಂತೂ ಮನಸ್ಸು ತಟ್ಟುತ್ತದೆ. ಕವನಗಳನ್ನು ಬರೆಯುತ್ತಿದ್ದ ಲೇಖಕಿ ಮುಂದೆ ಪ್ರಚಲಿತ ವಿಷಯಗಳ ಬಗ್ಗೆ ಪ್ರಬಲವಾಗಿ ಧ್ವನಿಯೆತ್ತುವ, ಅನ್ಯಾಯದ ವಿರುದ್ಧ ಪ್ರತಿಭಟಿಸುವ, ಸಿಡಿದೇಳುವ ಗುಣವನ್ನು ಬೆಳೆಸಿಕೊಂಡ, ಅದನ್ನು ಪ್ರಜಾವಾಣಿ ಸಹಿತ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸಿದ ಬಗೆಗೂ ವಿವರಗಳಿವೆ. ನಾಡಿನ ಗಣ್ಯರ, ಖ್ಯಾತನಾಮರ, ಮಠಾಧೀಶರ ನುಡಿಗಳೂ ಕೃತಿಯಲ್ಲಿವೆ.

ಹೆಚ್ಚಿನ ಲೇಖನಗಳು ಅಂಬಾಮಣಿ ಅವರ ಕೃತಿಗಳನ್ನು, ಮಾಧ್ಯಮ ಬರಹಗಳನ್ನು ಪೂರ್ಣ ಓದಿ ವಿಶ್ಲೇಷಕ ನೋಟದಿಂದ ಬರೆದಂತಿವೆ. ಹಿರಿಯ ಲೇಖಕಿಯೊಬ್ಬರ ಜೀವನಗಾಥೆಯನ್ನು ಕಟ್ಟಿಕೊಡುವ ನೆಪದಲ್ಲಿ ಹಲವು ವೈಚಾರಿಕ ಹೊಳಹುಗಳನ್ನು ನಾಡಿನ ಪ್ರಮುಖ ಬರಗಾರರ ಮೂಲಕ ತೆರೆದಿಟ್ಟಿದೆ ಈ ಕೃತಿ.

# ನವ್ಯ ಸಾಹಿತ್ಯದ ಮೌಲ್ಯಗಳ ಶೋಧನೆ


ಎಚ್.ದಂಡಪ್ಪ

ವಿಮರ್ಶೆ

**'ನವ್ಯ ಸಾಹಿತ್ಯ'** ಎಂಬ ಕೃತಿಯನ್ನು 'ಕನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ಮಾಲಿಕೆಗಾಗಿ ಎಸ್.ಆರ್. ವಿಜಯಶಂಕರ ಅವರು ಬರೆದಿದ್ದಾರೆ. ಸಾಹಿತ್ಯದಲ್ಲಿ ಜೀವನ ಮೌಲ್ಯಗಳ ಬಗ್ಗೆ ಚರ್ಚಿಸುವುದೆಂದರೆ ಒಂದು ವಾದಗ್ರಸ್ತ ಪ್ರಶ್ನೆಗೆ ಉತ್ತರಿಸಿದಂತಾಗುತ್ತದೆ. ಜೀವನ ಮೌಲ್ಯಗಳು, ನೈತಿಕ ಮೌಲ್ಯಗಳು, ಆದರ್ಶಗಳನ್ನು ಒಳಗೊಳ್ಳುವಂತೆ ಸಾಹಿತ್ಯ ಕೃತಿಯನ್ನು ಚರ್ಚೆ ಮಾಡಬೇಕಾದ ಸಂದರ್ಭದಲ್ಲಿ ಮತ್ತಷ್ಟು ತೊಡಕುಗಳು ಎದುರಾಗುತ್ತವೆ.

ನವ್ಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ವಿವರಿಸುವಾಗ ಈ ಎಚ್ಚರಿಕೆ ಇರಬೇಕಾಗುತ್ತದೆ. ಜೊತೆಗೆ ನವ್ಯ ಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಜೀವನ ಮೌಲ್ಯಗಳು ಯಾವ ಸ್ವರೂಪದಲ್ಲಿರುತ್ತವೆ ಎಂಬ ವಿಚಾರವೂ ಮುಖ್ಯವಾಗುತ್ತದೆ. ಇಲ್ಲದಿದ್ದರೆ ದಾರಿ ತಪ್ಪುವ ಸಂಭವಗಳಿರುತ್ತವೆ. ಅದರಲ್ಲೂ ನವ್ಯ ಕಾವ್ಯ, ಕಾದಂಬರಿ, ನಾಟಕದ ಪ್ರಕಾರಗಳ ಲಕ್ಷಣಗಳಲ್ಲಿ ಕಂಡು ಬರುವ ನವ್ಯತೆಯು ಬೇರೆ ಬೇರೆಯಾಗಿರುವುದನ್ನು ಕಾಣಬಹುದು.

ಅನುಭವವನ್ನು ಕೆದಕಿ ನೋಡುವುದು, ಭಾವನೆ ಮತ್ತು ಬುದ್ಧಿಯ ಪ್ರಾಧಾನ್ಯ, ಅನುಭವದ ಅಭಿವ್ಯಕ್ತಿಯ ಪ್ರಾಮಾಣಿಕತೆ, ಭಾಷೆ, ವೈಯಕ್ತಿಕತೆ, ಅಂತರ್ಮುಖತೆ, ದುರ್ಬಲತೆ, ಸಂದಿಗ್ಧತೆ ಮತ್ತು ದ್ವಂದ್ವ, ಭ್ರಷ್ಟತನದಲ್ಲಿ ತಾನೂ ಭಾಗಿ ಎಂಬ ತಿಳಿವಳಿಕೆ, ಮೌಲ್ಯಗಳ ಪುನರ್ವಿಮರ್ಶೆ, ತಂತ್ರನಾವೀನ್ಯತೆ, ಮನೋವಿಜ್ಞಾನದ ಪ್ರಭಾವ-ಇತ್ಯಾದಿ ಲಕ್ಷಣಗಳನ್ನು ನವ್ಯತೆಯಲ್ಲಿ ಗುರುತಿಸಬಹುದು. ಜೀವನ ಮೌಲ್ಯಗಳನ್ನು ನವ್ಯ ಸಾಹಿತ್ಯದಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಯಾವ ಲಕ್ಷಣಗಳನ್ನು ಅನ್ವಯಿಸಿ ಅಧ್ಯಯನ ಮಾಡಬೇಕೆಂಬ ಎಚ್ಚರಿಕೆಯೂ ಇರಬೇಕಾಗುತ್ತದೆ.



ಪು: 158 ₹100

**ನವ್ಯ ಸಾಹಿತ್ಯ**
ಲೇ: ಎಸ್.ಆರ್. ವಿಜಯಶಂಕರ್
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಸಂ: 080-22211730

ಪ್ರಸ್ತುತ ಕೃತಿಯಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳಿವೆ. ಪ್ರವೇಶ ಮತ್ತು ಜೀವನ ಮೌಲ್ಯವೆಂದರೇನು? ನವ್ಯ ಸಾಹಿತ್ಯ: ಹುಟ್ಟು ಬೆಳವಣಿಗೆ, ತಾತ್ವಿಕತೆ, ನವ್ಯದ ಮುಖ್ಯ ಧ್ವನಿಗಳು, ಉಪಸಂಹಾರ ಎಂಬ ವಿಭಾಗಗಳಡಿಯಲ್ಲಿ ಜೀವನ ಮೌಲ್ಯಗಳನ್ನು ಶೋಧಿಸಲು ಪ್ರಯತ್ನಿಸಲಾಗಿದೆ. ನವ್ಯ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಮತ್ತು ಕಾಣುವ ಕ್ರಮ, ಆಧುನಿಕ ಮಾನವನಿಗೆ ಅನಿವಾರ್ಯವಾದ ದ್ವಂದ್ವ ಸ್ಥಿತಿ, ಸ್ವಂತಿಕೆ ಮತ್ತು ಅಸ್ಮಿತೆ, ವ್ಯಕ್ತಿತ್ವ ರೂಪಿಸಿಕೊಳ್ಳಲು ಬೇಕಾದ ಸಮಾನತೆಯ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಸಾಕ್ಷಿಪ್ರಜ್ಞೆ, ಅಸ್ತಿತ್ವವಾದಿ ನೆಲೆ, ಸಮಾನತೆ, ಶ್ರೇಷ್ಠತೆ, ಬೌದ್ಧಿಕತೆ, ವೈಚಾರಿಕ ನೆಲೆಗಳ ಕಡೆಗಿನ ಚಲನೆ, ತಂತ್ರಜ್ಞಾನ, ಕೌಶಲ್ಯ ಜ್ಞಾನ ಮತ್ತು ವೈಚಾರಿಕತೆಯಿಂದ ಹುಟ್ಟುವ ಜ್ಞಾನಗಳ ನಡುವಿನ ವ್ಯತ್ಯಾಸ, ನೀತಿ ಬೋಧೆ ಮತ್ತು ಜೀವನ ಮೌಲ್ಯಗಳ ನಡುವಿನ ವ್ಯತ್ಯಾಸ ಹಾಗೂ ಶೋಧನಾ ಪ್ರಜ್ಞೆ - ಈ ಅಂಶಗಳ ಹಿನ್ನೆಲೆಯಲ್ಲಿ ಮುಂದಿನ ಭಾಗಗಳಲ್ಲಿ ಜೀವನ ಮೌಲ್ಯಗಳನ್ನು ವಿವರಿಸಲಾಗಿದೆ.

ಜೀವನ ಮೌಲ್ಯವೆಂದರೇನು ಎಂಬುದನ್ನು ವಿವರಿಸಿರುವ ಕ್ರಮವೂ ಕೃತಿಯಲ್ಲಿರುವ ವಿಚಾರಗಳಿಗೆ ಪೂರಕವಾಗಿದೆ. ನವ್ಯ ಸಾಹಿತ್ಯದ ಹುಟ್ಟು, ಬೆಳವಣಿಗೆ, ತಾತ್ವಿಕತೆ ಎಂಬ ಭಾಗದಲ್ಲಿ ನವೋದಯ ಘಟ್ಟದಿಂದ ನವ್ಯತೆಗೆ ಹೊರಳಿದ ಸಂದರ್ಭ ಸನ್ನಿವೇಶವನ್ನು ಹಾಗೂ ಸಾಂಸ್ಕೃತಿಕ ಸಂದರ್ಭವನ್ನು ವಿವರಿಸುವಾಗ ಎರಡೂ ಘಟ್ಟಗಳ ಪ್ರಮುಖ ಲೇಖಕರಾದ ಕುವೆಂಪು, ಗೋಕಾಕ, ಅಡಿಗರ ವಿಚಾರಗಳನ್ನು ಮಂಡಿಸಿ ನವೋದಯದವರಾದ ಕುವೆಂಪು ಅವರ ವಿಚಾರಗಳು, ನವ್ಯದ ಹುಟ್ಟು ತಾತ್ವಿಕತೆಗೆ ಹೇಗೆ ಪೂರಕವಾಗಿದ್ದವು ಎಂಬುದರ ವಿವರಣೆ ನೀಡಿರುವುದು ಸೂಕ್ತವಾಗಿದೆ.

ನವ್ಯದ ಮುಖ್ಯ ಧ್ವನಿಗಳು ಎಂಬ ಭಾಗದಲ್ಲಿ ವಿ.ಕೃ. ಗೋಕಾಕ, ಅಡಿಗ, ಅನಂತಮೂರ್ತಿ, ಕಂಬಾರ, ಕಾರ್ನಾಡ, ಲಂಕೇಶ್, ಚಿತ್ತಾಲ, ತೇಜಸ್ವಿ, ಶಾಂತಿನಾಥ ದೇಸಾಯಿ, ರಾಮಚಂದ್ರ ಶರ್ಮ, ಕೆಎಸ್‌ನ, ರಾಮಾನುಜನ್, ತಿರುಮಲೇಶ್, ಚಂಪಾ ಸೇರಿದಂತೆ 18 ಪ್ರಸಿದ್ಧ ಲೇಖಕರ ಕೃತಿಗಳಲ್ಲಿನ ಜೀವನ ಮೌಲ್ಯಗಳು ಯಾವ ರೀತಿ ಅಭಿವ್ಯಕ್ತಿ ಪಡೆದಿವೆ ಎಂಬುದನ್ನು ವಿವರಿಸಲಾಗಿದೆ. ಹಾಗೆಯೇ ರಾಜಲಕ್ಷ್ಮಿ ಎನ್. ರಾವ್, ವೀಣಾ ಶಾಂತೇಶ್ವರ, ವೈದೇಹಿ, ವಿಜಯಾ ದಬ್ಬೆ ಮುಂತಾದ ಲೇಖಕಿಯರ ಕೃತಿಗಳಲ್ಲಿ ವ್ಯಕ್ತವಾಗಿರುವ ಜೀವನ ಮೌಲ್ಯಗಳನ್ನು ಸಮೀಕ್ಷೆ ಮಾಡಲಾಗಿದೆ. ಪುಟಗಳ ಮಿತಿ ಇದ್ದುದರಿಂದ ಈ ಭಾಗ ಹಕ್ಕಿನೋಟವೆಂದು ಲೇಖಕರೇ ಹೇಳಿರುವುದು ಗಮನಾರ್ಹ.

ಕನ್ನಡದ ಸಾಂಸ್ಕೃತಿಕ ಸಂದರ್ಭದ ಅಗತ್ಯತೆಗೆ ಅನುಗುಣವಾಗಿ ಹುಟ್ಟಿಕೊಂಡ ನವ್ಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಹೇಗೆ ವ್ಯಕ್ತವಾಗಿವೆ ಎಂಬುದನ್ನು ಪಾಶ್ಚಾತ್ಯ ಮತ್ತು ಭಾರತೀಯ ಚಿಂತಕರ ಚಿಂತನೆಗಳ ಹಿನ್ನೆಲೆಯಲ್ಲಿ ತೌಲನಿಕವಾಗಿ ವಿವರಿಸಲಾಗಿದೆ. ಸಾಹಿತ್ಯದಲ್ಲಿ ಶ್ರೇಷ್ಠತೆ ಎಂಬ ಪರಿಕಲ್ಪನೆಯ ಬಗ್ಗೆ ನಡೆದ ಚರ್ಚೆಯನ್ನು ಅದರ ಎಲ್ಲಾ ಆಯಾಮಗಳೊಂದಿಗೆ ವಿವರಣೆಗೆ ಒಳಪಡಿಸಿರುವುದು ಈಗಿನ ಓದುಗರಿಗೆ ಉಪಯುಕ್ತ ಮಾಹಿತಿಯಾಗಿದೆ. ಮುಕ್ತಾಯ ಎಂಬ ಕೊನೆಯ ಭಾಗದಲ್ಲಿ ಮತ್ತೆ ಜೀವನ ಮೌಲ್ಯಗಳ ಬಗ್ಗೆ ನೈತಿಕತೆಯ ಬಗ್ಗೆ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರಾದ ಎಂ. ಹಿರಿಯಣ್ಣ, ಡಿವಿಜಿ, ರಿಚರ್ಡ್ಸ್, ಲಿವೀಸ್, ಟ್ರಿಲಿಂಗ್, ಎಲಿಯಟ್, ಪಣಿಕ್ಕರ್ ಮುಂತಾದವರ ವಿಚಾರಗಳನ್ನು ಸಂಗ್ರಹಿಸಿ ಕೊಟ್ಟಿರುವುದು ಓದುಗರಿಗೆ ಅನುಕೂಲವಾಗಿದೆ.

## ಮೊದಲ ಓದು


## ಬೇಸಾಯದ ಬರಹಗಳಲ್ಲಿ ಮಣ್ಣಿನ ಘಮಲು

**ಈ** ಕೃತಿಯನ್ನು ಕೈಗೆತ್ತಿಕೊಂಡು ಪುಟ ತಿರುವಿದರೆ ಹಲವು ಬೆಳೆ ಬೆಳೆಯುವ ತೋಟ, ಗದ್ದೆಗಳಲ್ಲಿ ರೈತನೊಬ್ಬನ ಜೊತೆ ಚರ್ಚಿಸುತ್ತಾ, ಸ್ವಾರಸ್ಯಕರ ಘಟನೆಗಳನ್ನು ಕೇಳುತ್ತಾ ಸುತ್ತಾಡಿಬಂದ ಅನುಭವ.

ನೀರಿನಿಂದ ಪ್ರಾರಂಭವಾಗಿ ರೈತರ ಆತ್ಮಹತ್ಯೆ, ಸಾವಯವ ಕೃಷಿ, ಹಸಿರುಬೇಲಿ, ಕೃಷಿಯಲ್ಲಿನ ಕೆಲವು ಬೇಡವುಗಳು, ವಿಶಿಷ್ಟ ಬೇಸಾಯ ಪದ್ಧತಿಗಳು, ಕೃಷಿಕರ ಅನುಭವಗಳು ಹಾಗೂ ಅವರ ಪುಟ್ಟ ಸಂದರ್ಶನಗಳು... ಹೀಗೆ ಕೃಷಿಯಲ್ಲಿರುವ ವೈವಿಧ್ಯವನ್ನೇ ಇಲ್ಲಿನ ಬರಹಗಳಲ್ಲೂ ಕಾಣಬಹುದು. ಪ್ರಸ್ತುತ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿರುವ ಕೃಷ್ಣಮೂರ್ತಿ ಬಿಳಿಗೆರೆಯವರು ಸಾವಯವ ಕೃಷಿ ಮತ್ತು ಮಳೆನೀರಿನ ಚಳವಳಿಗಳಲ್ಲಿ ಕ್ರಿಯಾಶೀಲರಾಗಿರುವವರು. ಮಕ್ಕಳ ನಾಟಕಗಳು, ಮಕ್ಕಳ ಕಥೆ, ಹಾಡುಗಳ ಸಾಹಿತ್ಯಕೃಷಿಯಲ್ಲಿ ತೊಡಗಿದ್ದ ಇವರು ಕೆಲ ಕೃಷಿ ಸಾಹಿತ್ಯಕ್ಕೂ ಲೇಖನಿ ಹಿಡಿದಿದ್ದಾರೆ. ಮಣ್ಣಿನ ಜೊತೆಗಿನ ನಂಟು ಇವರನ್ನು ಹೊಲ-ಗದ್ದೆ-ತೋಟಗಳಲ್ಲಿ ಸುತ್ತಾಡಿಸಿದೆ.

ಕೃತಿಯ ಆರಂಭದಲ್ಲಿ ಪ್ರಸ್ತುತ ಜಾಗತಿಕವಾಗಿ ಚರ್ಚೆಯಲ್ಲಿರುವ ನೀರಿನ ಕೊರತೆಯ ನಾನಾ ಮಗ್ಗಲುಗಳನ್ನು ಅವರು ಅನಾವರಣಗೊಳಿಸುತ್ತಾ ಸಾಗಿದ್ದಾರೆ. ಉಳುವವನ ಕೈಯಲ್ಲಿರುವ ಭೂಮಿ ಹವ್ಯಾಸಿ ಕೃಷಿಕರ, ಕ್ಷಣಕಾಲದ ಹಸಿರು ಪ್ರೀತಿ ಹೊತ್ತವರ ಕೈಸೇರುತ್ತಿರುವುದ ಅಪಾಯವನ್ನೂ ಸೂಕ್ಷ್ಮವಾಗಿ ಬಿಳಿಗೆರೆಯವರು ಇಲ್ಲಿ ಉಲ್ಲೇಖಿಸಿದ್ದಾರೆ. 'ಕಾವೇರಿಯ ಸಾವಿಗೆ...' ಅಧ್ಯಾಯದಲ್ಲಿ ಲೇಖಕರು ಮುಂದಿಟ್ಟಿರುವ ಒಳನೋಟ ಗಂಭೀರವಾಗಿ ಚಿಂತಿಸಬೇಕಾದ ವಿಷಯ. 'ಕೋತಿ ಹಿಡಿಸಿದ ಕತೆ'ಯಲ್ಲಿ ಕೋತಿಗಳ ಸ್ವಾರಸ್ಯಕರ ಗುಂಪುಗಾರಿಕೆಯನ್ನು ಅವರು ವರ್ಣಿಸಿದ್ದಾರೆ. ಬರಹಗಳಲ್ಲಿ ಆಪ್ತತೆ ಇದೆ.

ಕೃಷಿ ಸಾಹಿತ್ಯದಲ್ಲಿ ಇದೊಂದು ಉಲ್ಲೇಖಾರ್ಹ ಕೃತಿ. ಸುಸ್ಥಿರ ಕೃಷಿ ಪಯಣಕ್ಕೆ ಹೆಜ್ಜೆ ಇಡಲು ಇಚ್ಛಿಸುವವರಿಗೆ ಪಥ್ಯದಂತಿರುವ ಈ ಕೃತಿ, ಕೃಷಿ ಆಸಕ್ತರಿಗೂ ಮಣ್ಣಿನ ಪರಿಮಳ ನೀಡಿದೆ.



ಪು: 222 ₹200

**ಮಣ್ಣು ಕಥನ**
ಲೇ: ಕೃಷ್ಣಮೂರ್ತಿ ಬಿಳಿಗೆರೆ
ಪ್ರ: ನಮ್ಮ ಪ್ರಕಾಶನ, ಬಿಳಿಗೆರೆ
ಸಂ: 9481490975

# ಸಂಗೀತದ ನೆಂಟಸ್ತಿಕೆಯ ಹುಡುಕಾಟ


ಪುರುಷೋತ್ತಮ ಬಿಳಿಮಲೆ

ಒಳನೋಟ

**ಸಾಹಿತ್ಯ** ಮತ್ತು ಸಂಗೀತ ಎರಡೂ ಭಿನ್ನ ಮತ್ತು ಸ್ವತಂತ್ರ ಪ್ರಕಾರಗಳೇ ಹೌದಾದರೂ ಅವೆರಡೂ ಒಟ್ಟು ಸೇರಿದಾಗ ಮೂರನೆಯದಾದ ಒಂದು ಹೊಸ ಪ್ರಕಾರ ಹುಟ್ಟಿಕೊಳ್ಳುತ್ತದೆ. ಗ್ರೀಕ್ ಮತ್ತು ಭಾರತೀಯ ತತ್ವಶಾಸ್ತ್ರದಲ್ಲಿ ಈ ಕುರಿತಾದ ಮಹತ್ವದ ಚರ್ಚೆಗಳು ನಡೆದಿವೆ. ಭಾಷೆಯಲ್ಲಿ ತಾನೇ ತಾನಾಗಿ ಹುದುಗಿಕೊಂಡಿರುವ ಸಂಗೀತ ಮತ್ತು ಸಂಗೀತದಲ್ಲಿ ಕಾಣಿಸಿಕೊಳ್ಳುವ ಪದಗಳ ಬಗ್ಗೆ ಭರತ, ಭಾಮಹ, ಅಭಿನವಗುಪ್ತ, ಸಾರಂಗದೇವನೂ ಸೇರಿದಂತೆ ಅನೇಕರು ಬಹಳ ಮಹತ್ವದ ಚರ್ಚೆಗಳನ್ನು ನಡೆಸಿದ್ದಾರೆ.

19 ಮತ್ತು 20ನೆಯ ಶತಮಾನದ ಮುಖ್ಯ ಲೇಖಕರಾದ ಬ್ಲೇಕ್, ಕೀಟ್ಸ್, ಟೆನ್ನಿಸನ್, ಯೇಟ್ಸ್, ರವೀಂದ್ರನಾಥ್ ಟ್ಯಾಗೋರ್, ಕುವೆಂಪು, ಬೇಂದ್ರೆ ಮೊದಲಾದವರೆಲ್ಲ ನಾದ, ವರ್ಣ, ಪದ, ಸಂಕೇತ, ಅಲಂಕಾರ, ಧ್ವನಿ, ವಾಕ್ಯ ಮತ್ತು ದೈನಂದಿನ ವ್ಯವಹಾರಗಳ ನಡುವಣ ಸಂಬಂಧಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಪಿ. ಕಾಳಿಂಗ ರಾಯರು ತಮ್ಮ ಸಂಗೀತಾನುಭವದಿಂದ ಆಧುನಿಕ ಕನ್ನಡ ಕಾವ್ಯಕ್ಕೆ ಹೊಸ ಆಯಾಮವನ್ನೇ ಕೊಟ್ಟದ್ದು ಈಗ ಇತಿಹಾಸ. ಮುಂದೆ ವಿದ್ಯಾಭೂಷಣರೂ ಸೇರಿದಂತೆ ಅನೇಕರು ಅವರ ಪರಂಪರೆಯನ್ನು ಮುಂದುವರಿಸಿದ್ದುಂಟು. ಇತ್ತೀಚೆಗೆ ಈ ಕುರಿತ ಅಧ್ಯಯನಗಳು ಬಹಳ ಕಡಿಮೆಯಾಗುತ್ತಿರುವಾಗ ಆ ಕೊರತೆಯನ್ನು ನೀಗಲೆಂಬಂತೆ ಶ್ಯಾಮಲಾ ಪ್ರಕಾಶ್ ಅವರ ಪ್ರಸ್ತುತ ಪುಸ್ತಕ ಪ್ರಕಟವಾಗಿದೆ.

ತನ್ನ ಪುಸ್ತಕದ ಮುಖ್ಯ ಉದ್ದೇಶದ ಬಗ್ಗೆ ಲೇಖಕಿ ಶ್ಯಾಮಲಾ ಅವರು ಹೀಗೆ ಹೇಳಿದ್ದಾರೆ: 'ಕವಿ-ಕಾವ್ಯಗಳ ಅಧ್ಯಯನದಲ್ಲಿ ಕಾವ್ಯದ ಕಲಾವಿಚಾರಗಳು ಹೊರಗುಳಿಯುತ್ತವೆ. ಇಂತಹ ಕೊರತೆಯನ್ನು ನೀಗಿಸುವ ಉದ್ದೇಶದಿಂದಲೇ ಕಾವ್ಯಗಳಲ್ಲಿನ ಸಂಗೀತ ಭಾಗಗಳನ್ನು ಅಧ್ಯಯನಕ್ಕೊಳಪಡಿಸಿ ಪ್ರತೀ ಕನ್ನಡ ಕವಿಯ ಸಂಗೀತ ಪ್ರೇಮವನ್ನು ಬೆಳಕಿಗೆ ತರುವ ಪ್ರಯತ್ನ ಈ ಪುಸ್ತಕದ್ದಾಗಿದೆ. ಈ ಮಾತುಗಳು ನಮ್ಮ ಸಾಹಿತ್ಯ ಚರಿತ್ರೆಗಳ ಮಿತಿ ಹೇಗೋ ಹಾಗೇ ಸಂಗೀತ ಶಾಸ್ತ್ರಜ್ಞರ ಮಿತಿಗಳ ಬಗ್ಗೆಯೂ ಬೆಳಕು ಚೆಲ್ಲುತ್ತವೆ. 'ನಮ್ಮಲ್ಲಿ ಸಂಗೀತ ಶಾಸ್ತ್ರಜ್ಞರ ಸಂಖ್ಯೆ ಕಡಿಮೆ, ಹಲವರಿಗೆ ಕನ್ನಡ ವಾಙ್ಮಯದಲ್ಲಿ ಸಂಗೀತವನ್ನು ಕುರಿತಂತೆ ಎಂತಹ ಅಪೂರ್ವ ಸಾಮಗ್ರಿಯಿದೆ ಎಂಬುದರ ಕಲ್ಪನೆಯೂ ಇರಲಾರದು' ಎಂಬ ಅವರ ಮಾತು ಬಹಳ ಮಹತ್ವದ್ದು.



ಪು: 684 ₹500

**ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಸಾಹಚರ್ಯ**
ಲೇ: ಡಾ. ವಿದುಷಿ ಶ್ಯಾಮಲಾ ಪ್ರಕಾಶ್
ಪ್ರ: ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ
ಸಂ: 9930515123


ಈ ತಿಳಿವಳಿಕೆಯಲ್ಲಿ ಪ್ರಸ್ತುತ ಪುಸ್ತಕವನ್ನು ಬರೆಯಲಾಗಿದೆ. ತಮ್ಮ ಅಧ್ಯಯನಕ್ಕೆ ಪೂರಕವಾಗಿ ಶ್ಯಾಮಲಾ ಅವರು ಕನ್ನಡ ಸಾಹಿತ್ಯದ ಸುದೀರ್ಘ ಪರಂಪರೆಯನ್ನು ಪರಿಚಯಿಸಿದ್ದಾರೆ. ಭಾರತೀಯ ಸಂಗೀತದ ಎರಡು ಪ್ರಧಾನ ಧಾರೆಗಳಾದ ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತಕ್ಕೆ ಸಂಬಂಧಿಸಿದ ಪ್ರಮುಖ ಶಾಸ್ತ್ರಕೃತಿಗಳನ್ನು ಪರಾಮರ್ಶಿಸಿದ್ದಾರೆ. ಹಳಗನ್ನಡಕ್ಕೆ ಪ್ರಧಾನ ಕೊಡುಗೆಯನ್ನು ನೀಡಿದವರು ಜೈನರೇ ಹೌದಾದರೂ ಶ್ಯಾಮಲಾ ಅವರ ವಿಶ್ಲೇಷಣೆಗಳು ವೇದ ಕಾಲ ಮತ್ತು ವೇದ ಪೂರ್ವ ಕಾಲ ಎಂಬ ಚೌಕಟ್ಟಿನಲ್ಲಿ ವೈದಿಕ ಸಂಗೀತವನ್ನೇ ತನ್ನ ಕೇಂದ್ರದಲ್ಲಿರಿಸಿಕೊಂಡಿದೆ. ಹಳಗನ್ನಡದ ಪ್ರಧಾನ ಛಂದೋರೂಪವಾದ ಚಂಪೂ ಕರ್ನಾಟಕದಲ್ಲಿಯೇ ಹುಟ್ಟಿದೆ ಮತ್ತು ಅದರ ಕೆಲವು ಅಂಶಗಳು ಈಗಲೂ ಜನಪದ ಮಹಾಕಾವ್ಯಗಳಲ್ಲಿ ಕಂಡು ಬರುತ್ತವೆ ಎಂಬ ಅಂಶವನ್ನು ಇಲ್ಲಿ ಪರಿಗಣಿಸಲಾಗಿಲ್ಲ.

ಪ್ರಸ್ತುತ ಪುಸ್ತಕದ ಬಹಳ ಮುಖ್ಯವಾದ ಭಾಗಗಳೆಂದರೆ ಅಧ್ಯಾಯ ನಾಲ್ಕು ಮತ್ತು ಐದು. ಇಲ್ಲಿ ಲೇಖಕಿ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಲ್ಲಿ ದೊರಕುವ ಸಂಗೀತ ವಿವರಗಳನ್ನು ಬಹಳ ಜಾಗ್ರತೆಯಿಂದ ಶ್ರಮವಹಿಸಿ ಸಂಗ್ರಹಿಸಿದ್ದಾರೆ. ಸಹಜವಾಗಿಯೇ ನಡುಗನ್ನಡಕ್ಕೆ ಇಲ್ಲಿ ಹೆಚ್ಚು ಒತ್ತು ಕೊಡಲಾಗಿದೆ. ವಚನಗಳು ಮತ್ತು ದಾಸ ಸಾಹಿತ್ಯದ ಸಂಗೀತ ಸಾಹಚರ್ಯವನ್ನು ಪ್ರಬುದ್ಧವಾಗಿ ವಿಶ್ಲೇಷಿಸಲಾಗಿದೆ.

ದೇಸೀ ಛಂದೋಪ್ರಕಾರಗಳಾದ ತ್ರಿಪದಿ, ಸಾಂಗತ್ಯ, ಷಟ್ಪದಿಗಳು ಕನ್ನಡ ಕಾವ್ಯಗಳಿಗೆ ತಂದುಕೊಟ್ಟ ವಿಸ್ತಾರಗಳನ್ನು ಸೂಕ್ಷ್ಮವಾಗಿ ಪರಿಶೀಲನೆಗೆ ಒಳಪಡಿಸಲಾಗಿದೆ. ಇವು ಕನ್ನಡ ಕಾವ್ಯಗಳನ್ನು ಜನರ ಹತ್ತಿರ ಕೊಂಡೊಯ್ದವು. ಅಂಶಗಣಗಳ ಸಾಂಗತ್ಯವು ಮೂಲತಃ ಕರ್ನಾಟಕ ಜನಪದ ಪರಂಪರೆಗೆ ಸೇರಿದ್ದು, ಬಹುಮಟ್ಟಿಗೆ ತ್ರಿಪದಿಯ ವಿಸ್ತರಣೆಯಾಗಿದೆ. ಸಾಂಗತ್ಯವು ಹಾಡುಗಬ್ಬದ ಪ್ರಕಾರಕ್ಕೆ ಸೇರಿದ್ದರಿಂದ ಅರ್ಥ ಸ್ವಾರಸ್ಯಕ್ಕಾಗಿ ಮತ್ತು ಹಾಡಿನ ಸೌಲಭ್ಯಕ್ಕಾಗಿ ವಿಷ್ಣುಗಣದ ಸ್ಥಾನದಲ್ಲಿ ಬ್ರಹ್ಮವೋ ರುದ್ರವೋ ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುವೋ ರುದ್ರವೋ ಪರ್ಯಾಯವಾಗಿ ಬರುವುದುಂಟು. ಈ ಜನಪದ ಛಂದಸ್ಸನ್ನು ಮಹಾಕಾವ್ಯದ ಹಂತಕ್ಕೆ ಏರಿಸಿದವನು ರತ್ನಾಕರವರ್ಣಿ.

ಯಕ್ಷಗಾನಗಳಲ್ಲಿ ಸಾಂಗತ್ಯವನ್ನು ಅಷ್ಟತಾಳ, ಆದಿ ತಾಳ, ಏಕ ತಾಳ, ಝಂಪೆ ತಾಳ, ತ್ರಿವುಡೆ ತಾಳ, ರೂಪಕ ತಾಳ-ಹೀಗೆ ಹಲವು ತಾಳಗಳಲ್ಲಿ ಹಾಡುತ್ತಾರೆ. ಕಥನಗಳ ನಿರೂಪಣೆಗೆ ಸಾಂಗತ್ಯದಷ್ಟು ಒಳ್ಳೆಯ ಮಟ್ಟು ಬೇರೆ ಇಲ್ಲ. ಏನೇ ಇರಲಿ, ಒಡೆಯರ ಕಾಲದ ಸಾಹಿತ್ಯದ ಪರಿಗಣನೆಯೊಂದಿಗೆ ಶ್ಯಾಮಲಾ ಅವರ ಅಧ್ಯಯನ ಕೊನೆಯಾಗುತ್ತದೆ. ಸ್ವತಃ ಒಳ್ಳೆಯ ಸಂಗೀತಗಾರ್ತಿಯಾಗಿರುವ ಶ್ಯಾಮಲಾರಿಗೆ ಸಾಹಿತ್ಯ ಮತ್ತು ಸಂಗೀತಗಳ ಆಂತರಿಕ ಸಂಬಂಧಗಳ ಬಗ್ಗೆ ಬಹಳ ಒಳನೋಟಗಳಿರುವ ಮಾತುಗಳನ್ನು ಹೇಳಲು ಇಲ್ಲಿ ಸಾಧ್ಯವಾಗಿದೆ. ಕರ್ನಾಟಕ ಸಂಗೀತಕ್ಕೊಂದು ಹೊಸ ಆಯಾಮ ತಂದುಕೊಟ್ಟ ಯಕ್ಷಗಾನ ಪ್ರಸಂಗಗಳನ್ನು ಇಲ್ಲಿ ಪರಿಗಣಿಸಿದ್ದರೆ ಈ ಅಧ್ಯಯನ ಇನ್ನಷ್ಟು ಸಮಗ್ರವಾಗುತ್ತಿತ್ತು.

## ಅವರಿವರೊಂದಿಗೆ ಬಾಬಾಸಾಹೇಬರು



ಪು: 289 ₹300

**ಅಂಬೇಡ್ಕರ್ ಮತ್ತು...**
ಲೇ: ಪ್ರೊ.ಎಚ್.ಟಿ. ಪೋತೆ
ಪ್ರ: ಸಪ್ನ ಬುಕ್ ಹೌಸ್ ಬೆಂಗಳೂರು
ಸಂ: 080 40114455

**ಡಾ.ಬಿ.ಆರ್. ಅಂಬೇಡ್ಕರ್** ಅವರನ್ನು ಬೇರೆ ಬೇರೆ ಮಹನೀಯರೊಂದಿಗೆ ಹೋಲಿಕೆ ಮಾಡುತ್ತಾ, ಭಿನ್ನಾಭಿಪ್ರಾಯಗಳನ್ನೂ ಚರ್ಚಿಸಿದ ಕೃತಿ 'ಅಂಬೇಡ್ಕರ್ ಮತ್ತು...' ಭಾರತ ಕಂಡ ದಾರ್ಶನಿಕರ ನಡೆ-ನುಡಿಗೂ ಅಂಬೇಡ್ಕರ್ ಅವರ ನಡೆ-ನುಡಿಗೂ ಹೇಗೆ ಸಾಮ್ಯತೆಗಳಿದ್ದವು, ಇಂತಹ ಮಾನವತಾವಾದಿಗಳು ಸಮಾಜದ ಒಳಿತಿಗಾಗಿ ಹೇಗೆಲ್ಲ ಕೆಲಸ ಮಾಡಿದರು ಎಂಬುದನ್ನು ತುಲನಾತ್ಮಕವಾಗಿ ನೋಡಿದ ಕೃತಿಯೂ ಇದಾಗಿದೆ.

ಶಾಂತಿಗಾಗಿ ಬುದ್ಧ ಕಾಡಿಗೆ ಹೋದ. ಹೆಚ್ಚಿನ ವಿದ್ಯಾಭ್ಯಾಸ ಪಡೆದು ಶೋಷಿತರ ಬದುಕು ಬೆಳಗಿಸಲು ಅಂಬೇಡ್ಕರ್ ವಿದೇಶಕ್ಕೆ ಹೋದರು. ಸನಾತನ ಧರ್ಮ ಪೋಷಿಸಿದ ಸಾಮಾಜಿಕ ತಾರತಮ್ಯಕ್ಕೆ ಮಂಗಳ ಹಾಡಲು ಅಗತ್ಯವಾದ ರೀತಿಯಲ್ಲಿ ಅಂಬೇಡ್ಕರ್ ಅವರು ಸಂವಿಧಾನವನ್ನು ರೂಪುಗೊಳಿಸಿದರು. ಹನ್ನೆರಡನೇ ಶತಮಾನದಲ್ಲಿ ವಿನೂತನ ಧರ್ಮ ಹಾಗೂ ಸಂವಿಧಾನದ ಮೂಲಪುರುಷರೇ ಬಸವಣ್ಣ ಆದರು. ಇಂದಿನ ಸಂವಿಧಾನಕ್ಕೆ ಬಸವಣ್ಣನವರೇ ಪ್ರೇರಕ ಶಕ್ತಿಯೂ ಆಗಿದ್ದರು. ಶರಣರ ಗೌರವಕ್ಕೆ ಕುತ್ತು ಬಂದಾಗ ಬಸವಣ್ಣ, ಬಿಜ್ಜಳನ ಆಸ್ಥಾನ ತೊರೆದರು. ಹಿಂದೂ ಕೋಡ್ ಮಸೂದೆ ಪಾಸಾಗದಿದ್ದಾಗ ಮಹಿಳೆಯರ ಹಿತ ಕಾಪಾಡಲು ವಿಫಲನಾದೆ ಎಂಬ ವಿಷಾದದಿಂದ ಅಂಬೇಡ್ಕರ್ ಅವರು ಕಾನೂನು ಸಚಿವರ ಸ್ಥಾನಕ್ಕೆ ರಾಜೀನಾಮೆ ನೀಡಿದರು.

16ನೇ ಶತಮಾನದ ಪೂರ್ವಾರ್ಧದಲ್ಲಿ ಕನಕದಾಸರು ಕರ್ಮಠ ವ್ಯವಸ್ಥೆಯ ವಿರುದ್ಧ ಹೋರಾಡಿ ಭಕ್ತಿ ಚಳವಳಿಗೆ ಹೊಸ ಸ್ವರೂಪ ಕೊಟ್ಟರು. ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಅಂಬೇಡ್ಕರ್ ಅವರೂ ಸಾಮಾಜಿಕ ಸಮಾನತೆಯ ಕನಸು ಹೊತ್ತು ಜಾತಿಯ ವ್ಯವಸ್ಥೆಯಿಂದ ಶೋಷಿತರನ್ನು ಮುಕ್ತಗೊಳಿಸಲು ತಮ್ಮ ಅನುಯಾಯಿಗಳೊಂದಿಗೆ ಬೌದ್ಧಧರ್ಮಕ್ಕೆ ಮತಾಂತರಗೊಂಡರು.

ಮಹಾತ್ಮ ಗಾಂಧಿ ಅವರು ಸ್ವಾತಂತ್ರ್ಯ ಚಳವಳಿಯ ನೇತಾರರಾಗಿ ಗೌರವಾರ್ಹರು. ಆದರೆ ಅಸ್ಪೃಶ್ಯರ ವಿಚಾರದ ಹೋರಾಟದಲ್ಲಿ ಅಂಬೇಡ್ಕರ್ ಅವರದೇ ಮುಂದಾಳತ್ವ. ಇಬ್ಬರೂ ಇಲ್ಲದ ಭಾರತವನ್ನು ಕಲ್ಪಿಸಿಕೊಳ್ಳಲು ಅಸಾಧ್ಯ. ಒಬ್ಬರು ಬಂದೂಕಿನ ಎದುರು ಬಟ್ಟೆ ಬಿಚ್ಚಿ ನಿಂತರು. ಇನ್ನೊಬ್ಬರು ಪ್ರಧಾನ ಶೋಷಕರ ಎದುರಿಗೆ ಕೋಟು ತೊಟ್ಟು ನಿಂತರು.

ಹೀಗೆ ಅಂಬೇಡ್ಕರ್ ಅವರನ್ನು ಬೇರೆ ಬೇರೆ ಮಹನೀಯರೊಂದಿಗೆ ಹೋಲಿಕೆ ಮಾಡುತ್ತಾ, ಭಿನ್ನಾಭಿಪ್ರಾಯಗಳನ್ನೂ ಚರ್ಚಿಸುತ್ತಾ ಅಂಬೇಡ್ಕರ್ ಅವರ ಉದಾತ್ತ ವ್ಯಕ್ತಿತ್ವವನ್ನು ಕೃತಿ ಕಟ್ಟಿಕೊಟ್ಟಿದೆ. ಅಂಬೇಡ್ಕರ್ ಮತ್ತು ಸ್ತ್ರೀವಾದಿ ದೃಷ್ಟಿ, ಅಂಬೇಡ್ಕರ್ ಮತ್ತು ದಲಿತ ಲೋಕ ಅಧ್ಯಾಯಗಳು ಬಾಬಾಸಾಹೇಬರ ವ್ಯಕ್ತಿ- ವೃತ್ತಿ, ಸೈದ್ಧಾಂತಿಕ ಬದುಕು ಮತ್ತು ಮಜಲುಗಳನ್ನು ತೆರೆದಿಟ್ಟಿವೆ. ಹಲವು ಅಧ್ಯಾಯಗಳು ಕಥನ ರೂಪದಲ್ಲಿವೆ. ಅಂಬೇಡ್ಕರ್ ಮತ್ತು ಅವರ ಜೊತೆಗಿನ ವಿವಿಧ ಕಾಲಘಟ್ಟದ ಸಮಕಾಲೀನರ ಬಗೆಗಿನ ಒಳನೋಟ ನೀಡುವ ಕೃತಿ ಇದಾಗಿದೆ.

# ವಾಪಿಯಿಂದ ವಿಂಬಲ್ಡನ್‌ವರೆಗೆ



ಸುನೀಲ್ ಬಾರ್ಕೂರ್

ಕೆಲ ವರ್ಷಗಳ ಹಿಂದಿನ ಮಾತು. ಮುಂಗಾರು ಮಳೆಯ ಆರ್ಭಟಕ್ಕೆ ಇಡೀ ಮುಂಬೈ ನಗರವೇ ತತ್ತರಿಸಿತ್ತು. ಜನಜೀವನವೇ ಸ್ತಬ್ಧವಾಗಿತ್ತು. ಮಳೆಯ ಹೊಡೆತಕ್ಕೆ ಸಿಕ್ಕು ನಲುಗಿದ್ದ ನಗರದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದವು. ಭಾರತದ ಟೆನಿಸ್ ತಾರೆ ಮಹೇಶ್ ಭೂಪತಿಯವರ ಪತ್ನಿ, ರೂಪದರ್ಶಿ ಲಾರಾ ದತ್ತ ಆಗ ತಮ್ಮ ಮನೆಯ ಬಾಲ್ಕನಿಯ ಬಾಗಿಲಿನಿಂದ ಒಳನುಗ್ಗುತ್ತಿದ್ದ ಮಳೆಯ ನೀರನ್ನು ತಡೆಹಿಡಿಯಲು ಸಂದಿಗೆ ಟವೆಲ್ಲು ಹರಡಿದ್ದರು. ಆ ಚಿತ್ರವನ್ನು ಟ್ವೀಟ್ ಮಾಡಿ ಕೊನೆಗೂ ತಮ್ಮ ಪತಿರಾಯನ ಕಮಾಯಿ ಕೆಲಸಕ್ಕೆ ಬಂತು ಎಂದು ಬರೆದುಕೊಂಡಿದ್ದರು. ಇದಕ್ಕೆ ಮಹೇಶ್, ‘ನೋಡಿ, ಇಷ್ಟು ವರ್ಷದ ಕಷ್ಟದ ದುಡಿಮೆಯನ್ನು ನನ್ನ ಹೆಂಡತಿ ಹೇಗೆ ಪೋಲು ಮಾಡಿದ್ದಾಳೆ’ ಎಂಬರ್ಥದಲ್ಲಿ ತುಸು ಕೋಪದಿಂದಲೇ ಪ್ರತಿಕ್ರಿಯಿಸಿದ್ದರು. ಈ ಟ್ವೀಟ್ ಹಲವು ದಿನಗಳ ಕಾಲ ಟ್ರೆಂಡಿಂಗ್‌ನಲ್ಲಿತ್ತು.

ಮಹೇಶ್ ಅವರ ಆ ಪ್ರತಿಕ್ರಿಯೆಗೆ ಕಾರಣವೂ ಇತ್ತು. ಅಲ್ಲಿ ಅಂದು ಲಾರಾ ಹರಡಿದ್ದ ಟವೆಲ್ಲುಗಳೆಲ್ಲವೂ ಮಹೇಶ್ ಅವರು ವಿಂಬಲ್ಡನ್ ಸೇರಿದಂತೆ ಅನೇಕ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಗಳಲ್ಲಿ ಸಾಧಿಸಿದ ಗೆಲುವಿನ ಸ್ಮರಣಿಕೆಯಾಗಿ ಜತನದಿಂದ ಕಾಪಿಟ್ಟುಕೊಂಡಿದ್ದಂಥವು. ಹೀಗಿರುವಾಗ ಅವುಗಳನ್ನು ನೀರು ಹಿಡಿಯಲು ಹರಡಿರುವುದನ್ನು ಕಂಡ ಮಹೇಶ್ ಕೋಪ ತೋರಿಸಿದ್ದು ಸ್ವಾಭಾವಿಕವೇ.


ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಗಳಲ್ಲಿ ಟವೆಲ್ಲುಗಳಿಗೆ ವಿಶೇಷ ಸ್ಥಾನ. ಅದರಲ್ಲೂ ವಿಂಬಲ್ಡನ್‌ನಲ್ಲಿ ಅದರ ಮಹತ್ವ ತುಸು ಹೆಚ್ಚೇ. ಪ್ರತಿವರ್ಷದ ಟೂರ್ನಿಗೆ ನೂತನ ವಿನ್ಯಾಸದಲ್ಲಿ ಮೂಡಿಬರುವ ಈ ಟವೆಲ್ಲುಗಳನ್ನು ಆಟಗಾರರು ಸ್ಮರಣಿಕೆಯಂತೆ ಕೊಂಡೊಯ್ದು ಕಾಪಿಟ್ಟುಕೊಳ್ಳುವುದು ವಾಡಿಕೆ. ಇದು ಎಷ್ಟರ ಮಟ್ಟಿಗೆಯೆಂದರೆ ಪಂದ್ಯಕ್ಕೊಂದರಂತೆ ಕೊಡಲಾಗುವ ಈ ಟವೆಲ್‌ಅನ್ನು ವಾಪಸು ಕೊಡಬೇಕೆಂಬ ನಿಯಮವಿದ್ದರೂ ಸಂಘಟಕರಿಗೆ ಪರತ್ ಸಿಗುವುದು ಕೇವಲ ಶೇಕಡ ಇಪ್ಪತ್ತಷ್ಟೆ. ಹೆಚ್ಚಿನ ಸಂಖ್ಯೆಯವು ಆಟಗಾರನ ಕಿಟ್ ಬ್ಯಾಗ್ ಸೇರಿ ಮನೆ ತಲುಪಿದರೆ, ಇನ್ನುಳಿದವುಗಳನ್ನು ತಮ್ಮನ್ನು ಹುರಿದುಂಬಿಸುವ ಅಭಿಮಾನಿಗಳತ್ತ ಪಂದ್ಯ ಮುಗಿದ ನಂತರ ಆಟಗಾರರೇ ಎಸೆಯುವ ಪರಿಪಾಟ ಇದೆ. ಅದಕ್ಕಾಗಿ ಮುಗಿಬೀಳುವವರನ್ನು ನಿಯಂತ್ರಿಸುವುದೂ ಆಯೋಜಕರ ಮಂಡೆಬಿಸಿಗಳಲ್ಲಿ ಒಂದು. ಇಷ್ಟು ಸಾಲದೆಂಬಂತೆ ಈ ಟವೆಲ್‌ಗಳನ್ನು ಆನ್‌ಲೈನ್‌ನಲ್ಲಿ ಖರೀದಿಸುವ ಅಭಿಮಾನಿಗಳ ಸಂಖ್ಯೆಗೇನೂ ಕೊರತೆಯಿಲ್ಲ. ಹೀಗಾಗಿ ಇದು ಟೆನಿಸ್ ಉತ್ಸವದ ಅತ್ಯುತ್ಸಾಹವನ್ನು ನಗದೀಕರಿಸಿಕೊಳ್ಳುವ ತಯಾರಕರಿಗೆ ನಾಲ್ಕು ಕಾಸು ಕಮಾಯಿಸುವ ಅವಕಾಶ.

ವಿಂಬಲ್ಡನ್ ಟವೆಲ್ಲು ಹಲವು ಕಾರಣಕ್ಕೆ ಸುದ್ದಿಯಾದದ್ದೂ ಇದೆ. ಆಟಗಾರರಿಗೆ ಟವೆಲ್ಲುಗಳನ್ನು ನೀಡುವ ಪರಿಪಾಟ ಆರಂಭವಾದಾಗಿನಿಂದ ಪ್ರತಿವರ್ಷ ಎರಡು ಬಣ್ಣಗಳ ವಿನ್ಯಾಸದಲ್ಲಿ ಅವುಗಳನ್ನು ತಯಾರಿಸಲಾಗುತ್ತಿತ್ತು. ಪುರುಷ ಆಟಗಾರರಿಗೆ ಗಾಢಬಣ್ಣದ ಟವೆಲ್ಲುಗಳನ್ನು ನೀಡಿದರೆ, ಮಹಿಳೆಯರಿಗೆ ತುಸು ಪೇಲವ ಬಣ್ಣಗಳ ಟವೆಲ್ಲುಗಳಿರುತ್ತಿದ್ದವು. ನಂತರ ಈ ಟವೆಲ್ ವರ್ಣಬೇಧದ ವಿರುದ್ಧ ಲಿಂಗ ತಾರತಮ್ಯದ ದೂರುಗಳು ಕೇಳಿಬರತೊಡಗಿದವು. ಈ ಕಾರಣಕ್ಕೆ 2021ರಿಂದ ಈ ದ್ವಿವರ್ಣ ಸಂಪ್ರದಾಯವನ್ನು ಮುರಿದು ಏಕ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಯಿತು. ಅದಕ್ಕಿಂತ ಎರಡು ವರ್ಷಗಳ ಹಿಂದೆ ಅಂದರೆ 2019ರಿಂದ ಟೂರ್ನಿಯಿಂದ ಅಂಕಗಳನ್ನು ಹೇಳುವ ಸಮಯದಲ್ಲಿ ಮಹಿಳೆಯರಿಗೆ ಸಂಬೋಧಿಸಲು ಬಳಸಲಾಗುತ್ತಿದ್ದ ಮಿಸ್ ಮತ್ತು ಮಿಸ್ಟ್ರೆಸ್ ಪದಗಳನ್ನು ಆಯೋಜಕರು ಕೈಬಿಟ್ಟಿದ್ದರು. ಹೀಗಾಗಿ ಈ ಎರಡು ಮಾರ್ಪಾಡುಗಳನ್ನು ಮುಂದುಮಾಡಿ ವಿಂಬಲ್ಡನ್‌ಗೆ ಪ್ರಪಂಚದ ಏಕೈಕ ಸಮಾನ ಲಿಂಗನೀತಿಯ ಟೂರ್ನಿಯೆಂಬ ಬಿರುದನ್ನು ನೀಡಿ ಆಯೋಜಕರು ತಮ್ಮ ಬೆನ್ನುಗಳನ್ನು ತಾವೇ ತಟ್ಟಿಕೊಂಡರು.

ಜಾಗತಿಕವಾಗಿ ಅತ್ಯಂತ ಪುರಾತನ ಟೆನಿಸ್ ಟೂರ್ನಿಯೆಂಬ ಹೆಗ್ಗಳಿಕೆಯ ವಿಂಬಲ್ಡನ್ ಗ್ರ್ಯಾನ್ ಸ್ಲಾಮ್ ಆರಂಭವಾಗಿದ್ದು 1877ರಲ್ಲಾದರೂ 1922ರಲ್ಲಿ ಅದು ಲಂಡನ್ನಿನ ಚರ್ಚ್ ರಸ್ತೆಯ ನೂತನ ಸಂಕೀರ್ಣಕ್ಕೆ ಸ್ಥಳಾಂತರಗೊಂಡಿತು. ಅಂದಿನಿಂದ ಅದೇ ಕೋರ್ಟ್ ಟೆನಿಸ್ ಜಗತ್ತಿನ ಅತ್ಯಂತ ರೋಚಕ ಕ್ಷಣಗಳಿಗೆ ವೇದಿಕೆಯಾಗುತ್ತಾ ಬಂತು. ಈ ಟೆನಿಸ್ ಕಾಶಿಗೆ ಇದೀಗ ನೂರರ ಸಂಭ್ರಮ. ಹೀಗಾಗಿ ಈ ಉತ್ಸವವನ್ನು ಸ್ಮರಣೀಯವಾಗಿಸಲು ಆಯೋಜಕರು ವಿಶೇಷ ಸ್ಮರಣಿಕೆಯ ಬಗ್ಗೆ ಯೋಚಿಸುತ್ತಿರುವಾಗ ಅವರಿಗೆ ಮೊದಲು ಹೊಳೆದಿದ್ದೇ ಟವೆಲ್ಲು. ವಿಂಬಲ್ಡನ್ ಕೋರ್ಟ್‌ನ ಹುಲ್ಲುಹಾಸಲನ್ನು ಹೋಲುವಂಥ ಹಸಿರು ಬಣ್ಣದ ಟವೆಲ್ಲಿಗೆ ಬಂಗಾರದ ಬಣ್ಣದ ದಾರದ ಸೀಮಾರೇಖೆಯನ್ನು ಮೂಡಿಸಿ ರೂಪಿಸಲಾದ ಈ ವಿಶಿಷ್ಟ ಟವೆಲ್ಲು ಎಲ್ಲರ ಗಮನ ಸೆಳೆಯಿತು. ಅದರ ವಿನ್ಯಾಸವನ್ನು ಪ್ರಪಂಚದಾದ್ಯಂತ ಟೆನಿಸ್ ಪ್ರಿಯರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಸಂಭ್ರಮಿಸಿದ್ದರು.

ಇಷ್ಟೆಲ್ಲ ಇತಿಹಾಸವನ್ನು ಹೊಂದಿರುವ ವಿಂಬಲ್ಡನ್ ಟವೆಲ್‌ನ ಗುಣಮಟ್ಟವೂ ಉತ್ತಮವಾಗಿರಬೇಕಲ್ಲವೇ? ಅತ್ಯಂತ ಉತ್ಕೃಷ್ಟ ದರ್ಜೆಯ ಹತ್ತಿಯಿಂದ ತಯಾರಾಗುವ, ಬೆವರನ್ನು ತಕ್ಷಣವೇ ಹೀರಿಕೊಳ್ಳಬಲ್ಲ ಸಾಮರ್ಥ್ಯದ ಈ ಟವೆಲ್ಲು ಓಯೆಕೊ ಟೆಕ್ಸ್ ಹಸಿರಿನಿಂದ ತಯಾರಾಗಿದೆ (made in green). ಅಂದರೆ ಸಂಪೂರ್ಣ ಅಪಾಯಕಾರಿಯಲ್ಲದ ರಾಸಾಯನಿಕಗಳಿಂದ ತಯಾರಾಗುತ್ತದೆ. ಪ್ರಪಂಚದ ಕೆಲವೇ ಆಯ್ದ ಕಂಪನಿಗಳು ಈ ಗುಣಮಟ್ಟದ ಟವೆಲ್‌ಗಳನ್ನು ತಯಾರಿಸಬಲ್ಲವು. ಬ್ರಿಟಿಷ್ ಮೂಲದ ಕ್ರಿಸ್ಟಿ ಎಂಬ ಕಂಪನಿಯು ಅನೇಕ ವರ್ಷಗಳಿಂದ ಇದರ ತಯಾರಿಕೆಯಲ್ಲಿ ತೊಡಗಿಸಿಕೊಂಡು ವಿಂಬಲ್ಡನ್ ಆಯೋಜಕರಿಗೆ ಪೂರೈಸುತ್ತಿತ್ತು.

2006ರಲ್ಲಿ ವೆಲ್‌ಸ್ಪನ್ ಎಂಬ ಕಂಪನಿಯು ಕ್ರಿಸ್ಟಿಯ ಮಾಲೀಕತ್ವವನ್ನು ಖರೀದಿಸಿತು. ತನ್ನ ಮಾಂಚೆಸ್ಟರ್ ಕಾರ್ಖಾನೆಯಿಂದ ಟವೆಲ್ ತಯಾರಿಸಿ ನೀಡಲಾರಂಭಿಸಿತು. ನಂತರ 2010ರಲ್ಲಿ ಭಾರತದ ಗುಜರಾತಿನ ವಾಪಿಯ ತನ್ನ ಶಾಖೆಗೆ ಇದನ್ನು ವರ್ಗಾಯಿಸಿದ ವೆಲ್‌ಸ್ಪನ್ ಅಂದಿನಿಂದ ಪ್ರಸಕ್ತ ವರ್ಷದ ವಿಶೇಷ ಟವೆಲ್‌ವರೆಗೂ ವರ್ಷವರ್ಷವೂ ಇಲ್ಲಿಂದಲೇ ಮೇಡ್ ಇನ್ ಇಂಡಿಯಾ ಟವೆಲ್ ಪೂರೈಸುತ್ತಿದೆ. ಟೆನಿಸ್ ಜಗತ್ತಿಗೆ ವಿಜಯ ಅಮೃತರಾಜ್, ರಮೇಶ್ ಕೃಷ್ಣನ್, ಲಿಯಾಂಡರ್ ಪೇಸ್, ಮಹೇಶ್ ಭೂಪತಿ, ಸಾನಿಯಾ ಮಿರ್ಜಾ ಅವರಂತಹ ಘಟಾನುಘಟಿಗಳನ್ನು ನೀಡಿದ ಭಾರತವು ಟೆನಿಸ್ ಕಾಶಿಯ ಯಾತ್ರಾರ್ಥಿಗಳಿಗೆ ಅವರ ಜೀವನದ ಅಮೂಲ್ಯ ಕ್ಷಣಗಳನ್ನು ಸದಾ ಹಸಿರಾಗಿಡುವಲ್ಲಿ ವಿಶೇಷ ಸ್ಮರಣಿಕೆಗಳನ್ನೂ ನೀಡುವುದರ ಮೂಲಕ ಇನ್ನೊಂದು ರೀತಿಯ ಕಾಣಿಕೆಯನ್ನೂ ನೀಡುತ್ತಿದೆ.






# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಈ ಕಟ್ಟಡವನ್ನು ಗುರುತಿಸಬಲ್ಲಿರಾ?




1 ಭಾರತದಲ್ಲಿ ಅತಿ ಹೆಚ್ಚು ಮಾತನಾಡುವ ಎರಡನೇ ಭಾಷೆ ಯಾವುದು?
2 ಭಾರತದ ಎಲ್‌ಐಸಿ (ಭಾರತೀಯ ಜೀವ ವಿಮಾ ನಿಗಮ) ಆರಂಭವಾಗಿದ್ದು ಯಾವಾಗ?
3 ಟಾಟಾ ಉಕ್ಕಿನ ಕಾರ್ಖಾನೆ ಇರುವ ರಾಜ್ಯ ಯಾವುದು?
4 ಭಾರತದ ಸಂವಿಧಾನವನ್ನು ಮೊದಲ ಬಾರಿ ತಿದ್ದುಪಡಿ ಮಾಡಿದ ವರ್ಷ?
5 ಭಾರತದ ಮೊದಲ ಕೃತಕ ಉಪಗ್ರಹದ ಹೆಸರೇನು?
6 ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಧಾನ ಕಚೇರಿ ಎಲ್ಲಿದೆ?
7 ಭಾರತದಲ್ಲಿ ಜೀತಪದ್ಧತಿ ರದ್ದಾದ ವರ್ಷ ಯಾವುದು?
8 ಭಾರತದಿಂದ ಅತಿ ಹೆಚ್ಚು ರಫ್ತಾಗುವ ಸರಕುಗಳು ಯಾವುವು?
9 ಭಾರತವು ಸೆಣಬನ್ನು ಆಮದು ಮಾಡಿಕೊಳ್ಳುವ ದೇಶ ಯಾವುದು?
10 ರಾಜಸ್ಥಾನದ ಆಡಳಿತ ಭಾಷೆ ಯಾವುದು?

## ಗಣಿತದಲ್ಲಿ ಗರ್ದಿ ಗಮ್ಮತ್ತು

### ಕೂಡಿಸಿ ನೋಡು ಭಾಗಿಸಿ ನೋಡು

ಮೂರು ಅಂಕಿಗಳ ಒಂದು ಉಗ್ಗು ಸಂಖ್ಯೆ ಬರೆದುಕೊಳ್ಳಿ (ಒಂದೇ ಅಂಕಿ ಮತ್ತೆ ಮತ್ತೆ ಬರುವ ಸಂಖ್ಯೆಯನ್ನು ಉಗ್ಗು ಸಂಖ್ಯೆ ಎನ್ನುವರು ಉದಾ: 555 333 777... ಹೀಗೆ) ಅದೇ ಸಂಖ್ಯೆಯನ್ನು ಒಂದರ ಕೆಳಗೆ ಒಂದರಂತೆ ಆರು ಬಾರಿ ಬರೆದುಕೊಂಡು, ಆರೂ ಸಂಖ್ಯೆಗಳನ್ನು ಕೂಡಿಸಿರಿ. ನಂತರ ಮೂಲ ಉಗ್ಗು ಸಂಖ್ಯೆಯ ಎಲ್ಲ ಅಂಕಿಗಳ ಮೊತ್ತದಿಂದ ಕೂಡಿಸಿದ ಸಂಖ್ಯೆಗೆ ಭಾಗಿಸಿದರೆ, ಭಾಗಲಬ್ಧ ಯಾವಾಗಲೂ 222 ಸ್ಥಿರ ಸಂಖ್ಯೆ ಆಗಿರುತ್ತದೆ.
ಉದಾ: ಇಲ್ಲಿ 888 ಉಗ್ಗು ಸಂಖ್ಯೆ.

```
  888
  888
  888
+ 888
  888
  888
 ----
 5328

24) 5328 (222
    48
    ---
    052
     48
    ---
     48
     48
    ---
     00
```

ಉಗ್ಗು ಅಂಕಿ ಕೂಡಿಸಿದಾಗ (8+8+8=24)

## ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳ ಹಿಂದೆ ಒಂದು ಅಕ್ಷರ ಸೇರಿಸಿ ಮೂರು ಅಕ್ಷರಗಳ ಹೊಸ ಪದ ರಚಿಸಿ

1 – ಗಾರ
2 – ಗಾರ
3 – ಗಾರ
4 – ಗಾರ
5 – ಗಾರ



## ಇದು ಯಾವ ಊರು?

ಇಲ್ಲಿ ಕೊಟ್ಟಿರುವ ಒಂದು ಇಂಗ್ಲಿಷ್ ವಾಕ್ಯದ ಅಕ್ಷರಗಳನ್ನು ಬಳಸಿ ಉತ್ತರ ಕರ್ನಾಟಕದ ಒಂದು ಪ್ರಸಿದ್ಧ ಯಾತ್ರಾ ಸ್ಥಳದ ಹೆಸರು ರಚಿಸಿ

I AM BAD

## ಪುಟಾಣಿ ಪದಬಂಧ

1 – ಗರಿ– ‘ಗರಿ’ ಹಿಡಿದಿರುವ ಈತ ಸುಸಂಸ್ಕೃತ
2 –ಮಾಯ– ‘ಮಾಯ’ದ ಜಿಂಕೆ ಈ ಕಥೆಯಲ್ಲಿ ಬರುತ್ತದೆ
3 –ಲತಾ– ‘ಲತಾ’ಳ ಇಂಟರ್‌ನೆಟ್
4 –ಜಗ– ‘ಜಗ’ದ ತುಂಬಾ ಹೆಬ್ಬಾವು
5 – ವರ– ‘ವರ’ನು ವಿಸ್ತರಿಸಿ ಹೇಳಿದ್ದು

## ಹೊಂದಿಸು-ಆನಂದಿಸು

ಇಲ್ಲಿ ಕೊಟ್ಟಿರುವ ಕೆಲವು ರಾಷ್ಟ್ರೀಯ ಪುಷ್ಪಗಳ ಹೆಸರುಗಳನ್ನು ಆಯಾ ದೇಶದ ಹೆಸರಿನೊಂದಿಗೆ ಹೊಂದಿಸಿ.

| | |
|---|---|
| 1. ಫ್ರಾನ್ಸ್ | A. ದಾಳಿಂಬೆ ಹೂ |
| 2. ಭಾರತ | B. ಲಿಲ್ಲಿ |
| 3. ಜಪಾನ್ | C. ಗುಲಾಬಿ |
| 4. ಸ್ಪೇನ್ | D. ಸೇವಂತಿಗೆ |
| 5. ಬ್ರಿಟನ್ | C. ಕಮಲ |

### ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

### ಕಳೆದ ಸಂಚಿಕೆಯ ಸರಿ ಉತ್ತರಗಳು


**ಪುಟಾಣಿ ಪದಬಂಧ**
ನಿಯಂತ್ರಣ 2. ಪ್ರಕರಣ 3. ನಲವತ್ತು 4. ಜನವರಿ 5. ಅವನತಿ

**ಪದ ವಿನೋದ**
1) ರಾಜಗಿರಿ 2) ವರಮಾನ 3) ಹರದಾರಿ
4) ಸರದಾರ 5) ಹರಿಹರ

**ಹೊಂದಿಸು ಆನಂದಿಸು**
1-C, 2-F, 3-B, 4-A, 5-D, 6-F

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ರೋಹನ್ ಬಿ.ಜಿ, ಮಾಯಕೊಂಡ (ದಾವಣಗೆರೆ)



ಸಾತ್ವಿಕ್ ಹಿರೇಮಠ, ಮೈಸೂರು



ಅಪೂರ್ವ ತಳವಾರ, ಬಾದಾಮಿ (ಬಾಗಲಕೋಟೆ)

# ಒಕ್ಕೂಟದ...

8ನೇ ಪುಟದಿಂದ...

ರವಿ ಅವರು ಏಳು ತಿಂಗಳ ಹಿಂದೆ ಅದನ್ನು ರಾಷ್ಟ್ರಪತಿಗೆ ಅನುಮೋದನೆಗೆ ರವಾನಿಸಿದರು. ಮಸೂದೆಯು ಈಗ ಕೇಂದ್ರ ಆರೋಗ್ಯ ಸಚಿವಾಲಯದ ಪರಿಶೀಲನೆಯಲ್ಲಿದೆ.

ತೆಲಂಗಾಣ ರಾಜ್ಯ ಸರ್ಕಾರ ಕೂಡ ಅಲ್ಲಿನ ರಾಜ್ಯಪಾಲೆ ತಮಿಳುಸಾಯಿ ಸೌಂದರರಾಜನ್ ಜೊತೆ ಸಂಘರ್ಷ ಹೊಂದಿದೆ. ಇದರ ಜೊತೆಗೆ, ಅಲ್ಲಿನ ಮುಖ್ಯಮಂತ್ರಿ ಕೆಸಿಆರ್, ಶಿಷ್ಟಾಚಾರವನ್ನು ಮೀರಿದ್ದೂ ಇದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಮುಖ್ಯಮಂತ್ರಿ ವಿಮಾನ ನಿಲ್ದಾಣಕ್ಕೆ ಹೋಗಿಲ್ಲ. ಅಲ್ಲದೆ, ರಾಜ್ಯದಲ್ಲಿ ಮೋದಿ ಅವರು ಪಾಲ್ಗೊಂಡ ಕಾರ್ಯಕ್ರಮಗಳಲ್ಲಿ ತಾವು ಪಾಲ್ಗೊಂಡಿಲ್ಲ. ತನ್ನ ಅಧಿಕಾರ ಹಾಗೂ ಕಾರ್ಯಗಳ ವಿಚಾರವಾಗಿ ಗೊಂದಲಗಳು ಇರುವ ಕಾರಣ ದೆಹಲಿ ಸರ್ಕಾರ ಕೂಡ ಅಲ್ಲಿನ ಲೆಫ್ಟಿನೆಂಟ್ ಗವರ್ನರ್ ಜೊತೆ ಪ್ರತಿದಿನವೂ ಸಂಘರ್ಷದಲ್ಲಿ ತೊಡಗಿಕೊಂಡಿದೆ. ರಾಜಸ್ಥಾನ ಮತ್ತು ಛತ್ತೀಸಗಡದ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು, ಪಂಜಾಬ್‌ನಲ್ಲಿನ ಎಎಪಿ ನೇತೃತ್ವದ ಸರ್ಕಾರ, ಜಾರ್ಖಂಡ್‌ನಲ್ಲಿನ ಮೈತ್ರಿ ಸರ್ಕಾರ ತಮ್ಮ ರಾಜ್ಯಪಾಲರ ಜೊತೆ ಅಷ್ಟೇನೂ ಒಳ್ಳೆಯ ಸಂಬಂಧ ಹೊಂದಿಲ್ಲ. ಆದರೆ, ಬಿಜೆಪಿಯೇತರ ಪಕ್ಷಗಳ ಸರ್ಕಾರ ಇರುವ ಆಂಧ್ರಪ್ರದೇಶ ಹಾಗೂ ಒಡಿಶಾದಲ್ಲಿ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಸಂಘರ್ಷ ಇಲ್ಲ. ಒಡಿಶಾದಲ್ಲಿ ಬಿಜೆಡಿ ಮತ್ತು ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಬಿಜೆಪಿಯನ್ನು ವಿರೋಧಿಸುತ್ತಿಲ್ಲ. ಅವು ಕೇಂದ್ರ ಸರ್ಕಾರ ಮಂಡಿಸಿದ ಮಸೂದೆಗಳಿಗೆ ಸಂಸತ್ತಿನಲ್ಲಿ ಬೆಂಬಲ ಕೊಟ್ಟಿವೆ. ಹೀಗಾಗಿ ಈ ಎರಡು ರಾಜ್ಯಗಳ ಸರ್ಕಾರಗಳು ತಮ್ಮ ರಾಜ್ಯಪಾಲರ ಜೊತೆ ಹೊಂದಿರುವ ಸಂಬಂಧವು ಅರ್ಥವಾಗುವಂಥದ್ದು.

ರಾಜ್ಯ ಸರ್ಕಾರಗಳು ಕೇಂದ್ರದಲ್ಲಿ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿಲ್ಲದಿರುವುದು ಹಾಗೂ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೆರವು ಒದಗಿಸುವ ಮನಸ್ಸನ್ನು ಅಷ್ಟೇನೂ ಹೊಂದಿಲ್ಲದಿರುವುದು ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಿಗೆ ಅನ್ಯಾಯವಾಗುವಂತೆ ಮಾಡಿದೆ. ರಾಜ್ಯ ಹಾಗೂ ಕೇಂದ್ರದ ನಡುವೆ ಕೊಂಡಿಯಾಗಿ ಕೆಲಸ ಮಾಡಬೇಕಿರುವ ರಾಜ್ಯಪಾಲರು ಈ ವಿಚಾರದಲ್ಲಿ ನೆರವಿಗೆ ಬಂದಿಲ್ಲ. ಇವೆಲ್ಲದರ ನಡುವೆ ಏಟು ಬಿದ್ದಿರುವುದು ಒಕ್ಕೂಟ ವ್ಯವಸ್ಥೆಗೆ. ರಾಜ್ಯಪಾಲರ ಪಾತ್ರ ಏನಿರಬೇಕು ಎಂಬುದರ ಬಗ್ಗೆ ಎಲ್ಲರ ಗಮನ ಹರಿದಿರುವ ಕಾರಣದಿಂದಾಗಿ, ರಾಜ್ಯಗಳ ಹಣಕಾಸಿನ ಅಧಿಕಾರ ಹಾಗೂ ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ಅಗತ್ಯವಾಗಿ ಕೊಡಬೇಕಾಗಿದ್ದ ಗಮನವನ್ನು ಕೊಡಲಾಗುತ್ತಿಲ್ಲ.

ರಾಜ್ಯಗಳಿಗೆ ಜಿಎಸ್‌ಟಿ ಸಂಗ್ರಹದಲ್ಲಿ ಈಗಿರುವ ಶೇಕಡ 50ರಷ್ಟು ಪಾಲನ್ನು ಶೇ 60ಕ್ಕೆ ಹೆಚ್ಚಿಸುವುದು, ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ರಾಜ್ಯಗಳಿಗೆ ನೀಡುವ ಪರಿಹಾರವನ್ನು 2022–23ರಿಂದ ಅನ್ವಯವಾಗುವಂತೆ ಐದು ವರ್ಷಗಳಿಗೆ ಮುಂದುವರಿಸಬೇಕೆನ್ನುವುದು ಕೂಡ ರಾಜ್ಯಗಳ ಬೇಡಿಕೆ.

ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧವನ್ನು ಮರುಪರಿಶೀಲಿಸುವ ಬಗ್ಗೆ ಅವಲೋಕನ ನಡೆಸುವ ಅಂತರ್‌ರಾಜ್ಯ ಮಂಡಳಿಯು ವರ್ಷದಲ್ಲಿ ಮೂರು ಬಾರಿ ಸಭೆ ಸೇರಬೇಕು. ಆದರೆ ಅದು 2017ರ ನಂತರ ಸಭೆ ಸೇರಿಲ್ಲ. ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧದ ಕುರಿತು ಶಿಫಾರಸು ಮಾಡಲು ಕೇಂದ್ರವು ಹಲವು ಆಯೋಗಗಳನ್ನು ರಚಿಸಿದೆ. ಆದರೆ ಆಯೋಗಗಳ ಶಿಫಾರಸುಗಳ ಸೂಕ್ತ ಅನುಷ್ಠಾನ ಆಗಿಲ್ಲ. ದೇಶವು 2014ರ ನಂತರದಲ್ಲಿ ಬಲಿಷ್ಠ ಕೇಂದ್ರ ಸರ್ಕಾರವನ್ನು ಹೊಂದಿರುವ ಕಾರಣ, ರಾಜ್ಯ ಹಾಗೂ ಕೇಂದ್ರದ ನಡುವಿನ ಸಮತೋಲನವನ್ನು ಗೌರವಿಸುವ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿ ಇರುವುದು ಕೇಂದ್ರದ ಮೇಲೆಯೇ ಆಗಿರುತ್ತದೆ. ರಾಜ್ಯಗಳ ಹಿತಾಸಕ್ತಿಯ ವಿಚಾರದಲ್ಲಿ ಹೆಚ್ಚು ಹೊಂದಾಣಿಕೆಯ ಮನೋಭಾವ ತೋರಿಸುವುದೂ ಅದರ ಹೊಣೆಯೇ ಆಗಿರುತ್ತದೆ.

(ಲೇಖಕ ಹಿರಿಯ ಪತ್ರಕರ್ತ)
ಕನ್ನಡಕ್ಕೆ: ವಿಜಯ್ ಜೋಷಿ

### ಏಕದಿನ ಕ್ರಿಕೆಟ್: ಮೊಹಮ್ಮದ್ ಶಮಿ ಅಮೋಘ ದಾಳಿ: ಕುಸಿದ ಕಿವೀಸ್ ಪಡೆ

# ರೋಹಿತ್ ಬಳಗಕ್ಕೆ ಸರಣಿ ಕೈವಶ

ರಾಯಪುರ (ಪಿಟಿಐ): ಭಾರತದ ಅನುಭವಿ ವೇಗಿ ಮೊಹಮ್ಮದ್ ಶಮಿ 'ಮುಂದಾಳತ್ವ'ದ ಬೌಲಿಂಗ್ ಪಡೆಯ ದಾಳಿಯ ಮುಂದೆ ನ್ಯೂಜಿಲೆಂಡ್ ಕ್ರಿಕೆಟ್ ತಂಡವು ಕುಸಿಯಿತು.

ಇಲ್ಲಿಯ ಶಹೀದ್ ವೀರ್ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ 2ನೇ ಏಕದಿನ ಪಂದ್ಯದಲ್ಲಿ ಭಾರತ ತಂಡವು 8 ವಿಕೆಟ್‌ಗಳ ಸುಲಭ ಜಯ ಸಾಧಿಸಿತು. ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯರ ನಿಖರ ದಾಳಿಯ ಮುಂದೆ ನ್ಯೂಜಿಲೆಂಡ್ 34.3 ಓವರ್‌ಗಳಲ್ಲಿ 108 ರನ್ ಗಳಿಸಿ ಎಲ್ಲ ವಿಕೆಟ್‌ಗಳನ್ನೂ ಕಳೆದುಕೊಂಡಿತು. ಭಾರತ ತಂಡವು 20.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 111 ರನ್ ಗಳಿಸಿ ಜಯಿಸಿತು. ರೋಹಿತ್ ಶರ್ಮಾ (51; 50ಎ) ಮತ್ತು ಶುಭಮನ್ ಗಿಲ್ (ಔಟಾಗದೆ 40) ಮೊದಲ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು.

**15 ರನ್‌ಗಳಿಗೆ 5 ವಿಕೆಟ್:** ಶಮಿ (18ಕ್ಕೆ3), ಹಾರ್ದಿಕ್ ಪಾಂಡ್ಯ (16ಕ್ಕೆ2) ಮತ್ತು ಸಿರಾಜ್ (10ಕ್ಕೆ1) ಕೊಟ್ಟ ಪೆಟ್ಟಿಗೆ ಕಿವೀಸ್ ಬಳಗದ ಅಗ್ರಕ್ರಮಾಂಕದ ಬ್ಯಾಟಿಂಗ್ ಪಡೆ ಕುಸಿಯಿತು. ಮೊದಲ ಐವರು ಬ್ಯಾಟರ್‌ಗಳು ಎರಡಂಕಿ ಗಳಿಸಲಿಲ್ಲ.

ಇದರಿಂದಾಗಿ ಕೇವಲ 15 ರನ್‌ಗಳಿಗೆ 5 ವಿಕೆಟ್‌ಗಳು ಪತನವಾದವು. ಗ್ಲೆನ್ ಫಿಲಿಪ್ಸ್ (36; 52ಎ), ಮೊದಲ ಪಂದ್ಯದಲ್ಲಿ ಅಬ್ಬರದ ಶತಕ ಬಾರಿಸಿದ್ದ ಮೈಕಲ್ ಬ್ರೇಸ್‌ವೆಲ್ (22; 30ಎ) ಮತ್ತು ಮಿಚೆಲ್ ಸ್ಯಾಂಟನರ್ (27; 39ಎ) ಮಾತ್ರ ಎರಡಂಕಿ ಮೊತ್ತ ಗಳಿಸಿದರು.

ಹೈದರಾಬಾದ್ ನಲ್ಲಿ ನಡೆದ ಪಂದ್ಯದಲ್ಲಿಯೂ ಕಿವೀಸ್ ಅಗ್ರಕ್ರಮಾಂಕದ ಬ್ಯಾಟರ್‌ಗಳು (6ಕ್ಕೆ131) ಕುಸಿದಿದ್ದರು. ಆಗ ಬ್ರೇಸ್‌ವೆಲ್ ಮತ್ತು ಸ್ಯಾಂಟನರ್ ಜೊತೆಯಾಟದಲ್ಲಿ 162 ರನ್ ಸೇರಿಸಿದ್ದರು. ಆದರೆ 2ನೇ ಪಂದ್ಯದಲ್ಲಿ ಅವರ ಆಟ ನಡೆಯಲಿಲ್ಲ. ಶಮಿ ಅವರು ಫಿನ್ ಅಲೆನ್, ಡೆರಿಲ್ ಮಿಚೆಲ್ ಮತ್ತು ಬ್ರೇಸ್‌ವೆಲ್ ವಿಕೆಟ್‌ಗಳನ್ನು ಗಳಿಸಿದರು. ಪಾಂಡ್ಯ ಬೌಲಿಂಗ್‌ನಲ್ಲಿ ಡೆವೊನ್ ಕಾನ್ವೆ ಮತ್ತು ಸ್ಯಾಂಟನರ್ ಶರಣಾದರು. ಶಾರ್ದೂಲ್ ಠಾಕೂರ್, ಸಿರಾಜ್, ಕುಲದೀಪ್ ಯಾದವ್ ಮತ್ತು ವಾಷಿಂ ಗ್ಟನ್ ಸುಂದರ್ ಕೂಡ ಉತ್ತಮ ದಾಳಿ ನಡೆಸಿದರು. ವಿಕೆಟ್ ಕೂಡ ಉರುಳಿಸಿದರು.



ವಿಕೆಟ್ ಗಳಿಸಿದ ಭಾರತದ ಮೊಹಮ್ಮದ್ ಶಮಿ ಅವರು ಸಹ ಆಟಗಾರ ವಾಷಿಂಗ್ಟನ್ ಸುಂದರ್ ಜೊತೆ ಸಂಭ್ರಮಿಸಿದರು –ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ನ್ಯೂಜಿಲೆಂಡ್ 108 (34.3 ಓವರ್)**
ಫಿನ್ ಬಿ ಶಮಿ 0 (5ಎ), ಕಾನ್ವೆ ಸಿ ಮತ್ತು ಬಿ ಹಾರ್ದಿಕ್ 7 (16ಎ, 4X1), ನಿಕೊಲ್ಸ್ ಸಿ ಶುಭಮನ್ ಬಿ ಸಿರಾಜ್ 2 (20ಎ), ಡೆರಿಲ್ ಸಿ ಮತ್ತು ಬಿ ಶಮಿ 1 (3ಎ), ಲಥಾಮ್ ಸಿ ಶುಭಮನ್ ಬಿ ಶಾರ್ದೂಲ್ 1(17ಎ), ಫಿಲಿಪ್ಸ್ ಸಿ ಸೂರ್ಯಕುಮಾರ್ ಬಿ ಸುಂದರ್ 36 (52ಎ, 4X5), ಮೈಕಲ್ ಸಿ ಇಶಾನ್ ಬಿ ಶಮಿ 22 (30ಎ, 4X4), ಸ್ಯಾಂಟ್ನರ್ ಬಿ ಹಾರ್ದಿಕ್ 27 (39ಎ, 4X3), ಶಿಪ್ಲಿ ಔಟಾಗದೆ 2 (9ಎ), ಫರ್ಗ್ಯುಸನ್ ಸಿ ಸೂರ್ಯಕುಮಾರ್ ಬಿ ಸುಂದರ್ 1 (9ಎ), ಬ್ಲೇರ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 2 (7ಎ)
**ಇತರೆ** 7 (ಲೆಗ್‌ಬೈ 2, ವೈಡ್ 5)
**ವಿಕೆಟ್ ಪತನ:** 1-0 (ಫಿನ್ ಅಲೆನ್, 0.5), 2-8 (ಹೆನ್ರಿ ನಿಕೊಲ್ಸ್, 5.3), 3-9 (ಡೆರಿಲ್ ಮಿಚೆಲ್, 6.1), 4-15 (ಡೆವೊನ್ ಕಾನ್ವೆ, 9.4), 5-15 (ಟಾಮ್ ಲಥಾಮ್, 10.3), 6-56 (ಮೈಕಲ್ ಬ್ರೇಸ್‌ವೆಲ್, 18.3), 7-103 (ಮಿಚೆಲ್ ಸ್ಯಾಂಟ್ನರ್, 30.1), 8-103 (ಗ್ಲೆನ್ ಫಿಲಿಪ್ಸ್, 31.1), 9-105 (ಲಾಕಿ ಫರ್ಗ್ಯುಸನ್, 33.1), 10-108 (ಬ್ಲೇರ್ ಟಿಕ್ನರ್, 34.3)
**ಬೌಲಿಂಗ್:** ಮೊಹಮ್ಮದ್ ಶಮಿ 6–1–18–3, ಸಿರಾಜ್ 6–1–10–1, ಶಾರ್ದೂಲ್ ಠಾಕೂರ್ 6–1–26–1, ಹಾರ್ದಿಕ್ ಪಾಂಡ್ಯ 6–3–16– 2, ಕುಲದೀಪ್ ಯಾದವ್ 7.3–0–29–1, ವಾಷಿಂಗ್ಟನ್ ಸುಂದರ್ 3–1–7–2

**ಭಾರತ 2ಕ್ಕೆ 111 (20.1 ಓವರ್)**
ರೋಹಿತ್ ಎಲ್‌ಬಿಡಬ್ಲ್ಯು ಬಿ ಶಿಪ್ಲಿ 51 (50ಎ, 4X7, 6X2), ಶುಭಮನ್ ಔಟಾಗದೆ 40 (53ಎ, 4X6), ವಿರಾಟ್ ಸ್ಟಂಪ್ಡ್ ಲಥಾಮ್ ಬಿ ಸ್ಯಾಂಟ್ನರ್ 11 (9ಎ, 4X2), ಇಶಾನ್ ಔಟಾಗದೆ 8 (9ಎ, 4X2)
**ಇತರೆ** 1 (ಲೆಗ್‌ಬೈ 1)
**ವಿಕೆಟ್ ಪತನ:** 1–72 (ರೋಹಿತ್ ಶರ್ಮಾ,14.2), 2–98 (ವಿರಾಟ್ ಕೊಹ್ಲಿ, 18.1)
**ಬೌಲಿಂಗ್:** ಲಾಕಿ ಫರ್ಗ್ಯುಸನ್ 5–0–21–0, ಹೆನ್ರಿ ಶಿಪ್ಲಿ 5–0–29–1, ಬ್ಲೇರ್ ಟಿಕ್ನರ್ 4–0–19–0, ಮಿಚೆಲ್ ಸ್ಯಾಂಟ್ನರ್ 4.1–0–28–1, ಮೈಕಲ್ ಬ್ರೇಸ್‌ವೆಲ್ 2–0–13–0

**ಫಲಿತಾಂಶ: ಭಾರತ ತಂಡಕ್ಕೆ 8 ವಿಕೆಟ್‌ಗಳ ಜಯ**



ಪಂದ್ಯದಲ್ಲಿ ಮೈದಾನಕ್ಕೆ ನುಗ್ಗಿದ ಅಭಿಮಾನಿಯು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಆಲಂಗಿಸಿದರು –ಪಿಟಿಐ ಚಿತ್ರ

## 'ಇಬ್ಬನಿ ಮುಕ್ತ' ಪಂದ್ಯಗಳಿರಲಿ: ಅಶ್ವಿನ್

ನವದೆಹಲಿ (ಪಿಟಿಐ): ಇದೇ ವರ್ಷ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ 'ಇಬ್ಬನಿ ಮುಕ್ತ'ಗೊಳಿಸಬೇಕು. ಇದರಿಂದ ಬೌಲರ್‌ಗಳಿಗೂ ಸಮಾನ ಅವಕಾಶ ಸಿಗುವಂತಾಗುತ್ತದೆ ಎಂದು ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅಭಿಪ್ರಾಯವ್ಯಕ್ತಪಡಿಸಿದ್ದಾರೆ.

'ಹವಾಮಾನವನ್ನು ನಿಯಂತ್ರಣ ಮಾಡುವುದು ನಮ್ಮ ಕೈಯಲ್ಲಿ ಇಲ್ಲ. ಇಲ್ಲಿರುವ ಪರಿಸ್ಥಿತಿಗೆ ಹೊಂದಿಕೊಂಡು ಆಡುವುದು ಮುಖ್ಯ. ಭಾರತ ತಂಡಕ್ಕೆ ಇದು ಹೆಚ್ಚು ಕಠಿಣವಲ್ಲ. ಆದರೆ ಕೌಶಲ ಮತ್ತು ಸ್ಪರ್ಧಾತ್ಮಕತೆಯಿಂದ ಟೂರ್ನಿ ನಡೆಯಬೇಕು. ಆದ್ದರಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ(ಐಸಿಸಿ) ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕು. ಸಂಜೆಯ ಇಬ್ಬನಿಯು ಪಂದ್ಯದ ಫಲಿತಾಂಶ ಮೇಲೆ ಪರಿಣಾಮ ಬೀರುವುದರಿಂದ ವೇಳಾಪಟ್ಟಿಯಲ್ಲಿ ಅದಕ್ಕೆ ತಕ್ಕ ಹಾಗೆ ರೂಪಿಸುವುದು ಒಳಿತು' ಎಂದರು.



ಆರ್. ಅಶ್ವಿನ್

'ಪಂದ್ಯಗಳನ್ನು ಬೆಳಿಗ್ಗೆ 11.30ಕ್ಕೆ ಆರಂಭಿಸಬೇಕು' ಎಂದು ಅಶ್ವಿನ್ ಕಳೆದ ವಾರ ತಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಹೇಳಿದ್ದರು.

ಶನಿವಾರವೂ ಇದೇ ವಾಹಿನಿಯ ಮೂಲಕ ತಮ್ಮ ಅಭಿಪ್ರಾಯವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಭಾರತದ ಆತಿಥ್ಯದಲ್ಲಿ ನಡೆದ ಶ್ರೀಲಂಕಾ ಎದುರಿನ ಏಕದಿನ ಸರಣೀಯ ಮೊದಲ ಪಂದ್ಯದ ಉದಾಹರಣೆಯನ್ನೂ ಅಶ್ವಿನ್ ಉಲ್ಲೇಖಿಸಿದ್ದಾರೆ. ಆ ಪಂದ್ಯದಲ್ಲಿ ಭಾರತವು 374 ರನ್‌ಗಳ ದೊಡ್ಡ ಗುರಿಯೊಡ್ಡಿತ್ತು. ಶ್ರೀಲಂಕಾ ತಂಡವು 206 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿತ್ತು. ಆದರೆ ಈ ಹಂತದಲ್ಲಿಯೇ ಭಾರತದ ಬೌಲರ್‌ಗಳು ದಂಡನೆಗೊಳಗಾದರು. ಲಂಕಾ ತಂಡವು 306 ರನ್‌ಗಳವರೆಗೆ ಮೊತ್ತವನ್ನು ಬೆಳೆಸಿತು.

## ಒಲಿಂಪಿಕ್ಸ್: ಆರು ತಂಡಗಳ ಟಿ20ಗೆ ಐಸಿಸಿ ಶಿಫಾರಸು

ನವದೆಹಲಿ: ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ 2028ರ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆಗೊಳಿಸುವ ವಿಶ್ವಾಸವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಹೊಂದಿದೆ. ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಆರು ತಂಡಗಳ ಟಿ20 ಮಾದರಿ ಸ್ಪರ್ಧೆ ನಡೆಸಲು ಕ್ರೀಡಾಕೂಟದ ಆಯೋಜನಾ ಸಮಿತಿಗೆ 'ಶಿಫಾರಸು' ಮಾಡಿದೆ.

ಕ್ರಿಕೆಟ್ ಸೇರ್ಪಡೆ ಕುರಿತು ಅಂತಿಮ ನಿರ್ಧಾರವನ್ನು ಅಂತರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಅಕ್ಟೋಬರ್ ವೇಳೆಗೆ ತೆಗೆದುಕೊಳ್ಳಲಿದೆ. ಹೊಸ ಕ್ರೀಡೆಗಳ ಸೇರ್ಪಡೆ ಕುರಿತು ಮಾರ್ಚ್‌ನಲ್ಲಿ ಪಟ್ಟಿ ತಯಾರಿಸಲಾಗುತ್ತದೆ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊ ವರದಿ ಮಾಡಿದೆ. ಮುಂಬೈನಲ್ಲಿ ಅಕ್ಟೋಬರ್‌ನಲ್ಲಿ ಐಒಸಿ ಸಭೆ ನಡೆಯುವ ನಿರೀಕ್ಷೆಯಿದ್ದು, ಆಗ ಈ ಪಟ್ಟಿಗೆ ಅನುಮೋದನೆ ಸಿಗಲಿದೆ.

ಐಸಿಸಿ ಚೇರ್ಮನ್ ಗ್ರೇಗ್ ಬಾರ್ಕ್ಲೆ ಮುಖ್ಯಸ್ಥರಾಗಿರುವ ಐಸಿಸಿ ಒಲಿಂಪಿಕ್ಸ್ ಕಾರ್ಯಕಾರಿ ಗುಂಪಿಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರನ್ನು ಸೇರ್ಪಡೆ ಮಾಡಲಾಗಿದೆ. ಇಂದ್ರಾ ನೂಯಿ ಮತ್ತು ಪರಾಗ್ ಮರಾಠೆ (ಅಮೆರಿಕ ಕ್ರಿಕೆಟ್ ಸಂಸ್ಥೆಯ ಮಾಜಿ ಅಧ್ಯಕ್ಷ) ಕೂಡ ಈ ಗುಂಪಿನಲ್ಲಿದ್ದಾರೆ.

# ಆರೋಪ ಆಧಾರರಹಿತ, ಸುಳ್ಳು

### ಸರ್ಕಾರದ ನೋಟಿಸ್‌ಗೆ ಕುಸ್ತಿ ಫೆಡರೇಷನ್‌ನಿಂದ ಉತ್ತರ

ನವದಹೆಲಿ (ಪಿಟಿಐ): ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕುಸ್ತಿಪಟುಗಳು ಮಾಡಿರುವ ಎಲ್ಲ ಆರೋಪಗಳನ್ನು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ತಳ್ಳಿಹಾಕಿದೆ.

ಕುಸ್ತಿಪಟುಗಳ ಆರೋಪಗಳಿಗೆ ಉತ್ತರಿಸಲು ಸರ್ಕಾರವು, ಡಬ್ಲ್ಯು-ಎಫ್‌ಐಗೆ 72 ಗಂಟೆಗಳ ಗಡುವು ವಿಧಿಸಿತ್ತು. ಫೆಡರೇಷನ್ ಶುಕ್ರವಾರ ಸಂಜೆ ಸರ್ಕಾರಕ್ಕೆ ತನ್ನ ಉತ್ತರ ನೀಡಿದೆ.

'ಡಬ್ಲ್ಯುಎಫ್‌ಐ ಆಡಳಿತವನ್ನು ಚುನಾಯಿತ ಪ್ರತಿನಿಧಿಗಳು ನೋಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರು ಒಳಗೊಂಡಂತೆ ಯಾವುದೇ ವ್ಯಕ್ತಿಗೂ ಫೆಡರೇಷನ್‌ನಲ್ಲಿ ಸರ್ವಾಧಿಕಾರಿಯಂತೆ ವರ್ತಿಸಲು ಅಥವಾ ಅಧಿಕಾರ ದುರುಪಯೋಗಪಡಿಸಲು ಅವಕಾಶವಿಲ್ಲ' ಎಂದು ಹೇಳಿದೆ.

'ಕುಸ್ತಿಪಟುಗಳು ಮಾಡಿರುವ ಆರೋಪಗಳು ಆಧಾರರಹಿತ ಮತ್ತು ಸುಳ್ಳು. ಫೆಡರೇಷನ್‌ನ ಅಧ್ಯಕ್ಷರು ಹಾಗೂ ಕೋಚ್‌ಗಳಿಗೆ ಮಾನಹಾನಿ ಮಾಡುವ ಉದ್ದೇಶ ಇದರ ಹಿಂದಿದೆ. ಹಾಲಿ ಆಡಳಿತ ಮಾಡಿರುವ ಉತ್ತಮ ಕೆಲಸಗಳಿಗೆ ಮಸಿ ಬಳಿಯಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡಿರುವ ಹುನ್ನಾರ ಇದು. ಕುಸ್ತಿಪಟುಗಳು ಯಾರದೋ ಒತ್ತಡಕ್ಕೆ ಮಣಿದು ಪ್ರತಿಭಟನೆ ನಡೆಸಿದ್ದಾರೆ' ಎಂದಿದೆ.

ಸಮಿತಿಗೆ ದೂರು ನೀಡಿಲ್ಲ: 'ಲೈಂಗಿಕ ದೌರ್ಜನ್ಯದ ವಿರುದ್ಧ ದೂರು ನೀಡಲು ಐವರು ಸದಸ್ಯರ ಸಮಿತಿಯನ್ನು ಫೆಡರೇಷನ್ ಹೊಂದಿದೆ. ಫೆಡರೇಷನ್‌ನ ಕಾರ್ಯದರ್ಶಿ ವಿ.ಎನ್. ಪ್ರಸೂದ್ ಅವರು ಸಮಿತಿಯ ಮುಖ್ಯಸ್ಥರಾಗಿದ್ದು, ಸಾಕ್ಷಿ ಮಲಿಕ್ ಸದಸ್ಯರಾಗಿದ್ದಾರೆ' ಎಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದೆ.

'ಯಾವುದೇ ದೂರುಗಳು ಇದ್ದರೆ ಅದನ್ನು ಸಮಿತಿ ಮುಂದೆ ಇಡಬಹುದು. ಸಮಿತಿಯು ನಿಯಮಾವಳಿ ಪ್ರಕಾರ ತನಿಖೆ ನಡೆಸುತ್ತದೆ. ಆದರೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕುಸ್ತಿಪಟುಗಳಲ್ಲಿ ಯಾರಿಂದಲೂ ಅಂತಹ ದೂರು ಸಮಿತಿ ಮುಂದೆ ಬಂದಿಲ್ಲ' ಎಂದು ಹೇಳಿದೆ.

**ವಿನೋದ್ ತೋಮರ್ ಅಮಾನತು**

ಅಧ್ಯಕ್ಷ ಬ್ರಿಜ್‌ಭೂಷಣ್ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರನ್ನು ಕ್ರೀಡಾ ಸಚಿವಾಲಯವು ಶನಿವಾರ ಅಮಾನತು ಮಾಡಿದೆ. ಅಲ್ಲದೆ ಉತ್ತರ ಪ್ರದೇಶದ ಗೊಂಡಾದಲ್ಲಿನ ರ್‍ಯಾಂಕಿಂಗ್ ಟೂರ್ನಿ ಸೇರಿದಂತೆ ಎಲ್ಲ ಕುಸ್ತಿ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಸಚಿವಾಲಯ ಸೂಚಿಸಿದೆ.

### ಹಾಕಿ: ಕ್ರಾಸ್‌ಓವರ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರಾಳಿ

# ಭಾರತಕ್ಕೆ ಗೆಲುವು ಅಗತ್ಯ

ಭುವನೇಶ್ವರ (ಪಿಟಿಐ): ಕ್ವಾರ್ಟರ್‌ಫೈನಲ್‌ಗೆ ನೇರ ಪ್ರವೇಶ ಗಳಿಸಲು ವಿಫಲವಾಗಿರುವ ಭಾರತ ತಂಡವು ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾನುವಾರ ಕ್ರಾಸ್‌ಓವರ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಸೆಣಸಲಿದೆ. ಕಳಿಂಗ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಗುರುವಾರ ನಡೆದ ಪಂದ್ಯದಲ್ಲಿ ಭಾರತ ತಂಡ 4–2ರಿಂದ ವೇಲ್ಸ್ ವಿರುದ್ಧ ಗೆದ್ದಿತು. ಭಾರತವು ಎಂಟರ ಘಟಕ್ಕೆ ನೇರಪ್ರವೇಶ ಪಡೆಯಲು ಈ ಪಂದ್ಯದಲ್ಲಿ ಎಂಟು ಗೋಲುಗಳ ಅಂತರದಿಂದ ಜಯಿಸಬೇಕಿತ್ತು. ಆದರೆ ಸಾಧ್ಯವಾಗಿರಲಿಲ್ಲ. ಇದರಿಂದಾಗಿ ಡಿ ಗುಂಪಿನಲ್ಲಿ ಇಂಗ್ಲೆಂಡ್ ಅಗ್ರಸ್ಥಾನ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು.

ಸಿ ಗುಂಪಿನಲ್ಲಿ ಮೂರನೇ ಸ್ಥಾನ ಪಡೆದಿರುವ ನ್ಯೂಜಿಲೆಂಡ್ ಎದುರು ಹರ್ಮನ್‌ಪ್ರೀತ್ ಸಿಂಗ್ ಬಳಗವು ಗೆದ್ದು ಎಂಟರಘಟ್ಟ ತಲುಪುವ ವಿಶ್ವಾಸದಲ್ಲಿದೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ ಕಿವೀಸ್ ಬಳಗದ ಎದುರು ಆರನೇ ಸ್ಥಾನದಲ್ಲಿರುವ ಭಾರತ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ. ಮಂಡಿರಜ್ಜು ಗಾಯದಿಂದ ಬಳಲುತ್ತಿರುವ ಹಾರ್ದಿಕ್ ಸಿಂಗ್ ಅವರು ಟೂರ್ನಿಯಿಂದಲೇ ಹೊರಗುಳಿದಿರುವುದು ತಂಡಕ್ಕೆ ಹಿನ್ನಡೆಯಾಗಿ ಪರಿಣಮಿಸಿದೆ. ಜನವರಿ 15ರಂದು ನಡೆದ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಅವರು ಗಾಯಗೊಂಡಿದ್ದರು. ಅವರ ಬದಲಿಗೆ ರಾಜ್‌ಕುಮಾರ್ ಪಾಲ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಹಾರ್ದಿಕ್ ಅವರ ಅನುಪಸ್ಥಿತಿಯಿಂದಾಗಿ ಅನುಭವಿ ಆಟಗಾರರಾದ ಮನದೀಪ್ ಸಿಂಗ್ ಮತ್ತು ಆಕಾಶದೀಪ್ ಸಿಂಗ್ ಅವರ ಪ್ರದರ್ಶನ ಭಾರತಕ್ಕೆ ಮಹತ್ವದ್ದೆನಿಸಿದೆ.



ಭಾರತ ತಂಡದ ಆಟಗಾರರು– ಪಿಟಿಐ ಚಿತ್ರ




**ಮುಖಾಮುಖಿ ಪಂದ್ಯಗಳು 44**

| | |
|---|---|
| ಭಾರತ ಗೆಲುವು | 24 |
| ನ್ಯೂಜಿಲೆಂಡ್ ಜಯ | 15 |
| ಡ್ರಾ | 5 |

**ಇಂದಿನ ಪಂದ್ಯಗಳು**

| | |
|---|---|
| ಮಲೇಷ್ಯಾ– ಸ್ಪೇನ್ | ಸಂಜೆ 4.30 |
| ಭಾರತ– ನ್ಯೂಜಿಲೆಂಡ್ | ಸಂಜೆ 7ರಿಂದ |

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

## ಬ್ಯಾಸ್ಕೆಟ್‌ಬಾಲ್: ಕರ್ನಾಟಕ ತಂಡಗಳ ಶುಭಾರಂಭ

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾದ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ ಆತಿಥೇಯ ತಂಡ 92–29 ರಲ್ಲಿ ಮಣಿಪುರ ತಂಡವನ್ನು ಮಣಿಸಿತು. ಮಿಂಚಿನ ಪ್ರದರ್ಶನ ನೀಡಿದ ಎಸ್.ಸಂಕೇತ್ 20 ಪಾಯಿಂಟ್ಸ್ ತಂದಿತ್ತರು. ಎನ್.ಎಂ.ವಿಷ್ಣು 13, ಎಂ.ಅಮರ್ತ್ಯ 11 ಮತ್ತು ಅವಿನಾಶ್ ನಾಯಕ್ 10 ಪಾಯಿಂಟ್ಸ್ ಗಳಿಸಿದರು.

ಕರ್ನಾಟಕದ ಬಾಲಕಿಯರು 68–56 ರಲ್ಲಿ ಆಂಧ್ರ ಪ್ರದೇಶ ವಿರುದ್ಧ ಗೆದ್ದರು. ತಲಾ 17 ಪಾಯಿಂಟ್ಸ್ ಗಳಿಸಿದ ತಂಡದ ನಾಯಕಿ ಮೇಖಲಾ ಗೌಡ ಮತ್ತು ಆದ್ಯಾ ಗೌಡ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ನಿಹಾರಿಕಾ ರೆಡ್ಡಿ 14 ಪಾಯಿಂಟ್ಸ್ ಗಳಿಸಿದರು. ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ಚಂಡೀಗಢ 92–72 ರಲ್ಲಿ ರಾಜಸ್ಥಾನ ವಿರುದ್ಧ; ತಮಿಳುನಾಡು 109–60 ರಲ್ಲಿ ಉತ್ತರಾಖಂಡ ವಿರುದ್ಧ; ಪಂಜಾಬ್ 109–41 ರಲ್ಲಿ ಮಹಾರಾಷ್ಟ್ರ ವಿರುದ್ಧ ಗೆದ್ದವು.

## ಟಿ20 ವಿಶ್ವಕಪ್: ಭಾರತಕ್ಕೆ ಮೊದಲ ಸೋಲು

ಪೋಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಐಸಿಸಿ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತದ ಅಜೇಯ ಓಟಕ್ಕೆ ತೆರೆಬಿದ್ದಿದೆ. ಶನಿವಾರ ನಡೆದ ಸೂಪರ್–6 ಹಂತದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ 7 ವಿಕೆಟ್‌ಗಳಿಂದ ಭಾರತದ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಭಾರತ, 18.5 ಓವರ್‌ಗಳಲ್ಲಿ 87 ರನ್‌ಗಳಿಗೆ ಆಲೌಟಾದರೆ, ಆಸ್ಟ್ರೇಲಿಯಾ 13.5 ಓವರ್‌ಗಳಲ್ಲಿ 3 ವಿಕೆಟ್‌ಗೆ 88 ರನ್ ಗಳಿಸಿ ಗೆದ್ದಿತು.

**ಸಂಕ್ಷಿಪ್ತ ಸ್ಕೋರ್:** ಭಾರತ: 18.5 ಓವರ್‌ಗಳಲ್ಲಿ 87 (ಶ್ವೇತಾ ಶೆರಾವತ್ 21, ಹೃಷಿತಾ ಬಸು 14, ಸಿಯನಾ 13ಕ್ಕೆ 3, ಮಿಲಿ ಇಲಿಂಗ್ವರ್ಥ್ 12ಕ್ಕೆ 2, ಮ್ಯಾರಿ ಕ್ಲಾರ್ಕ್ 18ಕ್ಕೆ 2) ಆಸ್ಟ್ರೇಲಿಯಾ: 13.5 ಓವರ್‌ಗಳಲ್ಲಿ 3 ವಿಕೆಟ್‌ಗೆ 88 (ಕ್ಲೇರ್ ಮೂರ್ ಔಟಾಗದೆ 25, ಆಮಿ ಸ್ಮಿತ್ ಔಟಾಗದೆ 26) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 7 ವಿಕೆಟ್ ಗೆಲುವು

## ಆರ್‌ಸಿಬಿ ಟ್ವಿಟರ್ ಖಾತೆ ಮರುಸ್ಥಾಪನೆ!

ಬೆಂಗಳೂರು: ಐಪಿಎಲ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಟ್ವಿಟರ್ ಖಾತೆಯನ್ನು ಶನಿವಾರ ಹ್ಯಾಕ್ ಮಾಡಲಾಗಿತ್ತು. ರಾತ್ರಿ ಅಧಿಕೃತ ಖಾತೆಯು ಮರುಚಾಲನೆಗೊಂಡಿತು.

'ಕೊಹ್ಲಿ, ಬೆಂಗಳೂರು, ಎಬಿಡಿ, ಚಿನ್ನಸ್ವಾಮಿ, ಐಪಿಎಲ್ 2023, ಪ್ಲೇಬೋಲ್ಡ್ ಮತ್ತು ವೈಬ್ ಚೆಕ್ ಕಂಪ್ಲೀಟ್. ನಮ್ಮ ಟ್ವಿಟರ್ ಹ್ಯಾಂಡಲ್ ಮತ್ತೆ ಮರುಸ್ಥಾಪನೆಯಾಗಿದೆ..' ಎಂದು ಆರ್‌ಸಿಬಿಯು ರಾತ್ರಿ 7.40ಕ್ಕೆ ಟ್ವೀಟ್ ಮಾಡಿತು. ಬೆಳಿಗ್ಗೆಯಿಂದ ಆರ್‌ಸಿಬಿ ಟ್ವಿಟರ್ ಖಾತೆ ಹ್ಯಾಕ್ ಆಗಿರುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಖಾತೆಯನ್ನು ಹ್ಯಾಕ್ ಮಾಡಿದ್ದವರು ಪ್ರೊಫೈಲ್ ಚಿತ್ರವನ್ನು ಬದಲಿಸಿ, 'ಬೋರ್ ಏಪ್ ಯಾಚ್ ಕ್ಲಬ್' ಎಂದು ಟೈಟಲ್ ಕೊಟ್ಟಿದ್ದರು.

## ಈಜು: ಮಿಂಚಿದ ಪ್ರೀತಾ, ಪ್ರತ್ಯಯ್

ಉಡುಪಿ: ಕರ್ನಾಟಕದ ವಿ.ಪ್ರೀತಾ ಮತ್ತು ಪಶ್ಚಿಮ ಬಂಗಾಳದ ಪ್ರತ್ಯಯ್ ಭಟ್ಟಾಚಾರ್ಯ ಅವರು ಮಲ್ಪೆ ಕಡಲ ತೀರದಲ್ಲಿ ಬೀಚ್ ಉತ್ಸವದ ಅಂಗವಾಗಿ ಶನಿವಾರ ನಡೆದ ರಾಷ್ಟ್ರೀಯ ಓಪನ್ ವಾಟರ್ ಈಜು ಸ್ಪರ್ಧೆಯ 10 ಕಿ.ಮೀ ವಿಭಾಗದ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಪ್ರಶಸ್ತಿ ಗೆದ್ದರು.

ಪ್ರೀತಾ 3 ತಾಸು 7 ನಿಮಿಷ 18 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ,ಪ್ರತ್ಯಯ್ ಗುರಿ ತಲುಪಲು 2 ತಾಸು 2 ನಿಮಿಷ 28 ಸೆಕೆಂಡುಗಳನ್ನು ತೆಗೆದುಕೊಂಡರು.

**ಫಲಿತಾಂಶಗಳು:** ಪುರುಷರ 10 ಕಿಮೀ: ಪ್ರತ್ಯಯ್ ಭಟ್ಟಾಚಾರ್ಯ (ಪಶ್ಚಿಮ ಬಂಗಾಳ)–1. ಕಾಲ: 2 ತಾಸು 2ನಿ 28ಸೆ, ಲಿತೀಶ್ ಜಿ.ಗೌಡ (ಕರ್ನಾಟಕ)–2; 7.5 ಕಿ.ಮೀ: ಎಚ್.ಎಂ.ಪ್ರಶಂಸ್ (ಕರ್ನಾಟಕ)–1. ಕಾಲ :1ತಾಸು 13ನಿ 59ಸೆ, ಮೊಹಮ್ಮದ್ ಅಬ್ದುಲ್ ಬಾಸಿತ್ (ಕರ್ನಾಟಕ)–2; 5 ಕಿಮೀ: ರೇಣುಕಾಚಾರ್ಯ ಎಚ್ (ಕರ್ನಾಟಕ)–2, ಚಿಂತನ್ ಶೆಟ್ಟಿ (ಕರ್ನಾಟಕ)–3.

ಮಹಿಳೆಯರ 10 ಕಿಮೀ: ವಿ.ಪ್ರೀತಾ (ಕರ್ನಾಟಕ)–1, ಕಾಲ: 3 ಗಂಟೆ 7ನಿ 18 ಸೆ, ಎಸ್.ವಿ.ನಿಖಿತಾ (ಕರ್ನಾಟಕ)–2; 7.5 ಕಿ.ಮೀ: ಅಶ್ಮಿತಾ ಚಂದ್ರ (ಕರ್ನಾಟಕ)–1. ಕಾಲ: 1ತಾಸು 19ನಿ 42ಸೆ; 5 ಕಿಮೀ: ಶ್ರೀ ಚರಣಿ ತುಮು (ಕರ್ನಾಟಕ)–1. ಕಾಲ: 52 ನಿ 7 ಸೆ, ಆರ್ಣ ಎಂ.ಪಿ (ಕರ್ನಾಟಕ)–2, ಅಸ್ರಾ ಸುಧೀರ್ (ಕರ್ನಾಟಕ)–3.

## ಫುಟ್‌ಬಾಲ್ ಮಾಜಿ ಆಟಗಾರ ಹೆನ್ರಿ ನಿಧನ

ಬೆಂಗಳೂರು: 23 ವರ್ಷದೊಳಗಿನವರ ಕರ್ನಾಟಕ ರಾಜ್ಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಹೆನ್ರಿ (58) ಶುಕ್ರವಾರ ನಿಧನರಾದರು.

ಹೆನ್ರಿ ಅವರು 1991–92ರ ಸಾಲಿನ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಆಡಿದ್ದರು. ಟೆಲಿಕಾಂ ಎಫ್‌ಸಿ ಮತ್ತು ಎಸ್‌ಡಬ್ಲ್ಯುಆರ್‌ಎಲ್‌ವೈ ತಂಡಗಳನ್ನೂ ಪ್ರತಿನಿಧಿಸಿದ್ದರು.

### ಆಸ್ಟ್ರೇಲಿಯಾ ಓಪನ್ ಟೆನಿಸ್: ಆ್ಯಂಡಿ ಮರೆಗೆ ಸೋಲು

# ಪ್ರೀ ಕ್ವಾರ್ಟರ್‌ಗೆ ಜೊಕೊವಿಚ್

ಮೆಲ್ಬರ್ನ್ (ಎಎಫ್‌ಪಿ/ಪಿಟಿಐ): ಇಪ್ಪತ್ತೆರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಅವರು 7-6 (9/7), 6-3, 6-4 ರಲ್ಲಿ ಬಲ್ಗೇರಿಯದ ಗ್ರಿಗೊರ್ ದಿಮಿತ್ರೊವ್ ವಿರುದ್ಧ ಗೆದ್ದರು. ಮೊದಲ ಸೆಟ್ ಗೆಲ್ಲಲು 77 ನಿಮಿಷಗಳನ್ನು ತೆಗೆದುಕೊಂಡ ಜೊಕೊವಿಚ್, ಆ ಬಳಿಕ ಪೂರ್ಣ ಪ್ರಭುತ್ವ ಮೆರೆದರು.

**ಮರೆಗೆ ನಿರಾಸೆ:** ಬ್ರಿಟನ್‌ನ ಆ್ಯಂಡಿ ಮರೆ ಅವರ ಸವಾಲಿಗೆ ಮೂರನೇ ಸುತ್ತಿನಲ್ಲಿ ತೆರೆಬಿತ್ತು. ಸ್ಪೇನ್‌ನ ರಾಬರ್ಟೊ ಬಾಟಿಸ್ಟಾ ಆಗಟ್ 6-1, 6-7(7), 6-3, 6-4 ರಲ್ಲಿ ಮರೆ ವಿರುದ್ಧ ಗೆದ್ದರು.

ರಷ್ಯಾದ ಆಂಡ್ರೆ ರುಬ್ಲೆವ್ 6–4, 6–2, 6–3 ರಲ್ಲಿ ಡೇನಿಯಲ್ ಇವಾನ್ಸ್ ಅವರನ್ನು ಮಣಿಸಿದರು. ಇನ್ನೊಂದು ಪಂದ್ಯದಲ್ಲಿ ಡೆನ್ಮಾರ್ಕ್‌ನ ಹೋಲ್ಗರ್ ರೂನ್ 6–4, 6–2, 7–6 ರಲ್ಲಿ ಯೂಗೊ ಹಂಬರ್ಟ್ ಎದುರು ಜಯಿಸಿದರು.

ಇತರ ಪಂದ್ಯಗಳಲ್ಲಿ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್ 7–6, 6–2, 6–1 ರಲ್ಲಿ ಫ್ರಾನ್ಸ್‌ನ ಬೆಂಜಮಿನ್ ಬೊನ್ಜಿ ವಿರುದ್ಧ; ಅಮೆರಿಕದ ಟಾಮಿ ಪಾಲ್ 6–1, 6–4, 6–3 ರಲ್ಲಿ ಜೆನ್ಸನ್ ಬ್ರೂಕ್ಸ್‌ಬಿ ವಿರುದ್ಧ ಜಯಿಸಿದರು.

**16ರ ಘಟ್ಟಕ್ಕೆ ಸಬಲೆಂಕಾ:** ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಮೂರನೇ ಸುತ್ತಿನ ಹೋರಾಟದಲ್ಲಿ ಅವರು 6–2, 6–3 ರಲ್ಲಿ ಬೆಲ್ಜಿಯಂನ ಎಲೈಸ್ ಮರ್ಟೆನ್ಸ್ ವಿರುದ್ಧ ಗೆದ್ದರು.

ಕರೋಲಿನಾ ಪಿಸ್ಕೊವಾ ಮತ್ತು ಜಾಂಗ್ ಶುಯಿ ಅವರೂ 16ರ ಘಟ್ಟ ಪ್ರವೇಶಿಸಿದರು. ಜೆಕ್ ರಿಪಬ್ಲಿಕ್‌ನ ಪಿಸ್ಕೊವಾ 6–4, 6–2 ರಲ್ಲಿ ರಷ್ಯಾದ ವರ್ವರಾ ಗ್ರಶೆವಾ ಅವರನ್ನು ಮಣಿಸಿದರೆ, ಚೀನಾದ ಶುಯಿ 6–3, 6–2 ರಲ್ಲಿ ಅಮೆರಿಕದ ಕೇಟಿ ವೊಲಿನೆಟ್ಸ್ ವಿರುದ್ಧ ಜಯಿಸಿದರು.



ಜೊಕೊವಿಚ್ –ಎಎಫ್‌ಪಿ ಚಿತ್ರ

**ಎರಡನೇ ಸುತ್ತಿಗೆ ಬಾಲಾಜಿ–ಜೀವನ್**

ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಜೀವನ್ ನೆಡುಂಚೆಳಿಯನ್ ಜೋಡಿ ಪುರುಷರ ಡಬಲ್ಸ್ ವಿಭಾಗದಲ್ಲಿ ಅಚ್ಚರಿಯ ಗೆಲುವು ಪಡೆದು ಎರಡನೇ ಸುತ್ತು ಪ್ರವೇಶಿಸಿತು.

ಭಾರತದ ಆಟಗಾರರು ಶನಿವಾರ 7-6 (6) 2-6 6-4 ರಲ್ಲಿ ಐದನೇ ಶ್ರೇಯಾಂಕದ ಜೋಡಿ ಕ್ರೊವೇಷ್ಯದ ಇವಾನ್ ಡೊಡಿಗ್ ಮತ್ತು ಅಮೆರಿಕದ ಆಸ್ಟಿನ್ ಕ್ರಾಯಿಚೆಕ್‌ಗೆ ಆಘಾತ ನೀಡಿದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಸಾನಿಯಾ ಮಿರ್ಜಾ– ರೋಹನ್ ಬೋಪಣ್ಣ ಜೋಡಿ 7–5, 6–3 ರಲ್ಲಿ ಸ್ಥಳೀಯ ಸ್ಪರ್ಧಿಗಳಾದ ಜೇಮಿ ಫೋರ್ಲಿಸ್– ಲೂಕ್ ಸವಿಲ್ಲೆ ವಿರುದ್ಧ ಗೆದ್ದು ಎರಡನೇ ಸುತ್ತು ಪ್ರವೇಶಿಸಿತು.